
# ಅಪರಂಜಿ

ತಿಳಿನಗೆಯ ಕಾರಂಜಿ

ಮೇ–2024




ಬಿಡಿ ಪ್ರತಿ: ರೂ. 10/–


Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com


Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in
fbb
BHIMA




ಶೇಷ-ರೋಷ-ಅವಶೇಷ
ಎಚ್ಚರೆಚ್ಚರೆಚ್ಚರ ತೆಗೆದುಕೊಳ್ಳಿ ಪ್ರಿಕಾಷನ್
ಕಾರಣವೇ? ಆಗಿರುವರು ಈ.ಸಿ. ಟಿ.ಎನ್. ಶೇಷನ್
ಚುನಾವಣೆಯ ಸಂಹಿತೆಯ ಪ್ರತಿ ರೂಲ್ ಎಕ್ಸೆಪ್ಷನ್
ಅರೆದರೆದು ಕುಡಿದಿರುವರು ಅಡಗಿಪರ್ಯ ಕರಪ್ಷನ್|
ಅಕ್ರಮಿಗರು ಇವರೆಂದರೆ ತಳಮಳದಿಂ ಫ್ರೋಜನ್
ಕಟ್ಟುನಿಟ್ಟು ಪುಟ್ಟುಸ್ವಾಮಿ ಅವರೆ ನಮ್ಮ ಶೇಷನ್

ಚುನಾವಣೆಯು ಮುಗಿದಮೇಲೆ ಚೇಂಜಾಯ್ತು ಲೊಕೇಷನ್
ಕೇಸರಿಯು ಕಾಂಗ್ರೆಸ್ ಸೇರೆ ಕ್ರೋಸು ರೋಷದ್ ರೇಷನ್
ಶುದ್ಧತೆಯನು ಎಲೆಕ್ಷನಲ್ಲಿ ತಂದ ಶೂರ ಶೇಷನ್
ಶೌರ್ಯವಡಗಿ ಬಾಲಮುದುರಿ ಆದರವರವಶೇಷನ್!

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 41**

**ಸಂಚಿಕೆ – 08**

**ಮೇ – 2024**



**ಸಂಪಾದಕ ಮಂಡಳಿ**

ಸಂಪಾದಕರು

**ಶ್ರೀ ಎಂ. ಶಿವಕುಮಾರ್**

ಉಪ ಸಂಪಾದಕರು

**ಶ್ರೀ ಬೇಲೂರು ರಾಮಮೂರ್ತಿ**

ಸದಸ್ಯರು

**ಶ್ರೀ ಎಚ್. ಎನ್. ಆನಂದ**

**ಶ್ರೀ ಎಚ್. ಗೋಪಾಲಕೃಷ್ಣ**

**ಶ್ರೀ ಎನ್. ರಾಮನಾಥ್**

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್



ಚಂದಾ ವಿವರ :

ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.


## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮನಿಮ್ಮಲ್ಲಿ | ಶಿವಕುಮಾರ್ | 3 |
| ನಭೂತೊ ನಭವಿಷ್ಯತಿ! | ಗಣೇಶ ಹೆಗ್ಗಡೆ | 4 |
| ಎಲೆಕ್ಷನ್ ರೌಂಡ್–ಅಪ್ | ಇ.ಆರ್. ರಾಮಚಂದ್ರನ್ | 6 |
| ಬಂತೈ ಬಂತೈ ಬಂತೈ ಚುನಾವಣೆ... | ಎಚ್. ಗೋಪಾಲ ಕೃಷ್ಣ | 10 |
| ಕೆಂಚಪ್ಪನ ಮತ ಯಾಚನೆ | ಸುಧಾ ಸರ್ನೋಬತ್ | 13 |
| ಸಂಪಿಗೆಯೊ? ಮಲ್ಲಿಗೆಯೊ? | ಪಾಲಹಳ್ಳಿ ವಿಶ್ವನಾಥ್ | 15 |
| ಯಾರು ಬಂದ್ರೇನು | ರಶ್ಮಿತಿಳಿ | 17 |
| ಎಲೆಕ್ಷನ್ ಮೇನಿಯಾ! | ಜಯಶ್ರೀ ದೇಶಪಾಂಡೆ | 19 |
| ಹದಿನೆಂಟನೇ ಲೋಕ | ಜಿ.ವಿ.ನಿರ್ಮಲ | 21 |
| ಇಗೋ ಬಂತು ಚುನಾವಣೆ | ಗಾಯತ್ರಿಮೂರ್ತಿ | 23 |
| ತುಂತುರು | ದಂನಆ | 25 |
| ಚುನಾವಣಾ ! | ರಾಶಿ | 26 |
| ಎಲೆಕ್ಷನ್ ಜ್ವರ | ಭುವನೇಶ್ವರಿ ಹೆಗಡೆ | 28 |
| ಚುನಾವಣಾ ಸ್ವಾರಸ್ಯ | ಬೇಲೂರು ರಾಮಮೂರ್ತಿ | 32 |
| ಸಡಗರದಲ್ಲಿ ಕಿರುನಗೆ | ಡಾ. ಶ್ಯಾಮಲಾ ರವಿಶಂಕರ್ | 34 |
| ಮನಿ ಡಬ್ಲಿಂಗ್ ಸ್ಕೀಂ | ಎಂ.ಎಸ್. ನರಸಿಂಹಮೂರ್ತಿ | 37 |
| ಸವಾಲು | ಎಸ್ ಎನ್ ಗಣನಾಥ | 39 |


**ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,**
**ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ**
**ರಘುಪತಿ ಶೃಂಗೇರಿ**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಚುನಾವಣಾ ಅವಧಿಯಲ್ಲಿ ವಿಧಾನ ಸೌಧದ ಮೇಲೆ ಇರುವ
ಫಲಕವನ್ನು ಪರದೆಯಿಂದ
ಮುಚ್ಚಿ ಇಡುತ್ತಾರೆ ಎಂಬುದು ಶುದ್ಧ ಕುಹಕ !!

* * * *

2ನೇ ಹಂತ : ನಾಮ ಪಾತ್ರಕ್ಕೆ ತೆರೆದ ಬಾಗಿ ಪಥ

ಪತ್ರಿಕೆ

ಯಾರು ಯಾರಿಗೆ ನಾಮ ಬಳಿಯುತ್ತಾರೋ ಕಾದು
ನೋಡಬೇಕು !!

* * * *

ಪ್ರಧಾನಿಗಳ ಚುನಾವಣಾ ಭಾಷಣಗಳನ್ನು ವಿವಿಧ ಭಾಷೆಗಳಿಗೆ
ಏಕೆ ಅನುವಾದ ಮಾಡಬಾರದು?!

* * * *

"ಕೈ" ಹಿಡಿಯರಿ : ಡಿ ಕೆ ಶಿ

ಪತ್ರಿಕೆ

"ಯಾರ"?!?

* * * *

ಭಾರತಾಂಬೆಯ ಸೇವೆ ಮಾಡಲು ನೂರಾರು ಜನ
ನಾ ಮುಂದು, ತಾ ಮುಂದು ಎಂದು ನುಗ್ಗುತ್ತಿರುವುದನ್ನು
ಅಪರಂಜಿ ಅಚ್ಚರಿಯಿಂದ ನೋಡಿದಳಂತೆ !!

* * * *

ಮಧ್ಯ ಪ್ರದೇಶ : "ಕಮಲ"ದ ಮುಂದೆ "ಕೈ" ಪೇಲವ !!

ದಿನ ಪತ್ರಿಕೆ

ಆಹಾ ! ಶೀರ್ಷಿಕೆಯೆಂದರೆ ಹೀಗಿರಬೇಕು !!

* * * *

"ಸುರಕ್ಷಿತ, ವಿಕಸಿತ, ಭಾರತವೇ ನಮ್ಮ ಕಾರ್ಯ ಸೂಚಿ "

ಪತ್ರಿಕೆ

ಅರೆ, ಇದೆಲ್ಲಾ ಆಗಲೇ ಆಗಿದೆ ಅಂತಾರಲ್ಲ ವಕ್ತಾರರು !!?

* * * *

ಲೋಕಸಭಾ ಚುನಾವಣೆಗಳು ಎಲ್ಲೆಡೆಯೂ ಶಾಂತವಾಗಿ
ನಡೆಯಲಿ
ಎಂದು ಅಪರಂಜಿ ಭಗವಂತನನ್ನು ಬೇಡುತ್ತಾಳೆ !!

■

# ನಮ್ಮ ನಿಮ್ಮಲ್ಲಿ

ಶಿವಕುಮಾರ್

"ಏನ್ರಿ, ಟೀಚರ್ ಇದಾನ ಹುಡುಗಾ,..... ಏ ಇಲ್ರಿ ಬ್ಯಾಡ್ರಿ, ಇಲ್ಲ, ನಮ್ ಹುಡ್ಗಿ ಇಂಜಿನಿರಿಂಗ್ ಮಾಡಿ ಅಲ್ಲಿ  ಬೆಂಗಳೂರಾಗ್ ಕೆಲ್ಸ ಮಾಡ್ತಾಳ, ಇಲ್ಲ ಸೆಟ್ ಆಗಲ್ರಿ ....

ಬಿಸಿನೆಸ್ ಮನ್ ?  ಬ್ಯಾಡ್ರಿ ನಮಗ, ಅಲ್ಲಾ ಅವರ್ದು ಯವಾಗ್ ಪ್ರಾಫಿಟ್ಟೋ, ಯವಾಗ್ ಲಾಸೋ, ಯವಾಗ್ ಏಳ್ತದ ಬೀಳ್ತದ ಹೇಳ್ಲೀಕ್ ಬರಲ್ವಲ್ರಿ. ಹ್ಞಾ ವೆಲ್ ಸೆಟಲ್ಡ್ ಬೇಕ್ರಿ ನಮಗ. ...

ಡಾಕ್ಟರ್ ಇದಾನೇನ್ರಿ ಹುಡುಗ ? ಏ ಬ್ಯಾಡ್ರಿ,....ಅವ್ರಿಗ್ ಟೈಮ್ ಇರಲ್ಲ ಟೇಬಲ್ ಇರಲ್ಲ, ಅಲ್ಲ ಒಂದ್ ಫೋನ್ ಬಂತಂದ್ರೆ ರಾತ್ರಿ ಇಲ್ಲ, ಹಗಲಿಲ್ಲ ಓಡೋದೇ ಆಗ್ತದೆ, ...ಅಲ್ಲ ಫ್ಯಾಮಿಲೀಗ್ ಟೈಮ್ ಕೊಡೋಕ್ ಆಗಲ್ಲಲ್ರಿ, ..ಬ್ಯಾಡ್ರಿ,   ತಪ್ ತಿಳಗೋ ಬ್ಯಾಡ್ರಿ, ....

ಕಂಟೆಂಟ್ ಕ್ರಿಯೇಟರ್ರಾ, ಹಂಗಂದ್ರೇನ್ರಿ ? ಓ ಇಸ್ಟಾಗ್ರಾಮ್‌ದಾಗ ನ್ಯೂಸ್ ಹಾಕೋರಾ, ಹ್ಞ ಹ್ಞ ಹ್ಞ ಅದೂ ನೌಕ್ರಿ ಏನ್ರಿ?

ಅಲ್ರಿ ಮತ್ತ ಮನಿ ಹ್ಯಾಂಗ್ ನಡೀಬೇಕ್ರಿ ? ನ್ಯೂಸ್ ಹಾಕ್ಕೋತ್ ಕೂತ್ರೆ ? ಏ ಬ್ಯಾಡಪ್ಪಾ, ಸುಮ್ನೆ ಯದಕ್ ರಿಸ್ಕು. ...

ಬ್ಯಾಂಕ್ ನೌಕ್ರಿಯ ? ಏ ಬ್ಯಾಡ್ರಿ ನಮಗ, ಅಂದ್ರೆ ಅದು ಒಂದ್ಕಡೆ ಸೆಟ್ ಇರಲ್ಲಲ್ಲ. ಮತ್ತ ಮೂರ್ ವರ್ಷಕ್ಕೊಮ್ಮೆ ಚೇಂಜ್ ಆಗ್ತಿರ್ತದ, ಮನಿ ಕಿತ್ತೋ ಹಚ್ಕೋ ...ಅಲ್ಲ ನಮಗ್ ಸೆಟ್ ಆಗಲ್ರಿ, ಅಲ್ಲ ಬೇರೆ ಯಾರರ ಇದ್ರ ಹೇಳ್ರಿ, ..

ಏನ್ರಿ ಸಾಫ್ಟ್‌ವೇರ್ ಇಂಜಿನಿಯರ್ರಾ, ? ಮೂರ್ ಲಕ್ಷ್ ಪ್ಯಾಕೇಜ ? ಆನ್ ಸೈಟ್ ಹೋಗ್ತಾನಾ ? ಒಬ್ನೇ ಮಗಾ ? ಬೆಂಗ್ಳೂರ್ನಾಗ್ ಮನಿ ಅದಾ ? ಅಬ್ಬಾಬ್ಬಬ್ಬಬ್ಬ... ಏನ್ರಿ ತಲೀ ಮ್ಯಾಗ್ ಕೂದ್ಲಿಲ್ಲ ? ಇಲ್ರಿ ಬ್ಯಾಡ್ರಿ ಅಲ್ಲ ಈಗ್ಯಾಕೋ ನಮ್ ಹುಡ್ಗಿ ಮದ್ವಿ ಒಲ್ಲಂತನ್ನಕ್ ಹತ್ಯಾಳ್ರಿ, ......................"

ಈ ತಿಂಗಳ ಸಂಚಿಕೆ ಚುನಾವಣಾ ವಿಶೇಷಾಂಕ. ಚುನಾವಣೆ ಎಂದ ಮಾತ್ರಕ್ಕೆ ಸರ್ಕಾರದ ಚುನಾವಣೆಗೇ ಸೀಮಿತವಾಗಿ ಇರಬೇಕಾಗಿಲ್ಲವಲ್ಲ ! ಇನ್ನೊಂದು ಬಗೆಯ ಚುನಾವಣೆಯ ತುಣುಕು ಮೇಲಿನದು.

ಈ ಬಾರಿ ನಮ್ಮ ಬರಹಗಾರ ಬಳಗದವರು ತಮ್ಮ ಕಲ್ಪನಾ ಲಹರಿಯನ್ನು ಚುನಾವಣೆಯ ವಿವಿಧ ಆಯಾಮಗಳತ್ತ ಹರಿಯಬಿಟ್ಟಿದ್ದಾರೆ. ಒಳ ರಕ್ಷಾ ಪುಟದಲ್ಲಿ ಹಲವು ದಶಕಗಳ ಹಿಂದೆ ತಮ್ಮ ದಕ್ಷತೆಗೆ ಹೆಸರಾಗಿದ್ದ ದಿವಂಗತ ಟಿ.ಎನ್. ಶೇಷನ್ ಅವರ ಬಗ್ಗೆ ಒಂದು ಕಿರು ಪರಿಚಯವನ್ನು ನೋಡಬಹುದು. ಅಂತೆಯೇ ವರಕವಿ ಬೇಂದ್ರೆಯವರ ಖ್ಯಾತ ಕವಿತೆ ಶ್ರಾವಣಾ ಬಂತು ಶ್ರಾವಣಾ ವನ್ನು ಅನುಕರಿಸಿ ಖ್ಯಾತ ನಗೆಗಾರ ರಾಶಿಯವರು ರಚಿಸಿದ ಅಣಕವಾಡೊಂದನ್ನು ಈ ಸಂಚಿಕೆಯಲ್ಲಿ ಅಳವಡಿಸಿದ್ದೇವೆ. ನಮ್ಮ ವ್ಯಂಗ್ಯ ಚಿತ್ರಕಾರರಾದ ರಾಂಕಿ ಬೆಳ್ಳೂರ್ ಮತ್ತು ಅಶೋಕ್ ಹೆಮ್ಮಿಗೆ ಇಲ್ಲಿನ ಲೇಖನಗಳಿಗೆ ವ್ಯಂಗ್ಯಚಿತ್ರಗಳ ಮೆರಗನ್ನು ನೀಡಿದ್ದಾರೆ.

ನಮ್ಮ ನೆಚ್ಚಿನ ನಾಡಿನ ಜನತಾ ಜನಾರ್ಧನ ಈ ಚುನಾವಣೆಯಲ್ಲಿ ಸತ್ಪಾತ್ರರನ್ನೇ ಆಯ್ಕೆ ಮಾಡುವಂತಾಗಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ. ■

# ನಭೂತೊ ನಭವಿಷ್ಯತಿ !


**ಗಣೇಶ ಹೆಗ್ಗಡೆ**

"ಹೇಗಿದ್ದೀರಾ ಪದ್ಮಮ್ಮ? ನಿಮ್ಮನ್ನು ನೋಡಿ ತಿಂಗಳೇ ಆಯ್ತು"

"ಹೌದ್ರಿ, ಈ ಉರಿಬಿಸಿಲಿನಲ್ಲಿ ಮನೆಯಿಂದ ಆಚೆ ಬರೋಕೆ ಸಿಕ್ಕಾಪಟ್ಟೆ ಭಯ. ನಿನ್ನೆ ಟೆಂಪರೇಚರ್ ಮೂವತ್ತೆಂಟು ಇತ್ತಂತೆ"

"ಯಾಕೊ ನನಗೊಂದನುಮಾನಾರಿ, ಬೇಸಿಗೆಯ ಕಾವಿಗೆ ಈ ಸರ್ತಿ ಚುನಾವಣಾ ಕಾವೂ ಸೇರಿ ಹೀಗೆ ಏರು ಪೇರಾಗಿರಬಹುದೆ ಅಂತ"

"ಇರ್ಬಹದೂರಿ"



"ಅಂದ್ಹಾಗೆ, ಮೊನ್ನೆ ನಿಮ್ಮ ಯಜಮಾನ್ರು ಅಂಗಳದ ಹಿತ್ತಲಿನಲ್ಲಿ, ನಲ್ಲಿಯ ಮುಂದೆ ಎರಡು ಕೈನೂ ಜೋಡಿಸಿ ನಿಂತ್ಕೊಂಡಿದ್ದನ್ನು ನೋಡಿ ದುಃಖವಾಯ್ತೂರಿ, ನನಗೆ, ನಳ–ದಮ್ಮಯ್ಯಂತಿ! ಕಥೆ ನೆನಪಾಯ್ತು, ಅಂದ್ಹಾಗೆ ನಲ್ಲಿಯಲ್ಲಿ ನೀರು ಬಂತೇನ್ರಿ?"

"ಬಂತು, ಆದ್ರೆ ನಳದಲ್ಲಿ ಅಲ್ಲ, ನನ್ನ ಕಣ್ಣಿನಲ್ಲಿ"

"ನೊಂದ್ಕೊಬ್ಯಾಡಿ ಪದ್ಮಮ್ಮ, ಸರ್ಕಾರ ಎಲ್ಲಾ ಗ್ಯಾರಂಟೀನೂ ಕೊಡ್ತು, ಆದ್ರೆ ಅವಶ್ಯವಾದ ನೀರಿನ ಗ್ಯಾರಂಟಿ ಕೊಡೋಕೆ ಕೈ ತಾರಮ್ಮಯ್ಯ ಆಡಿಸ್‌ಬಿಟ್ಟಲ್ರೀ, ನೀವೇನುತಿಳ್ಕೊಳ್ಳಲ್ಲಾಂದ್ರೆ ಒಂದು ಮಾತು ಕೇಳ್ತೀನಿ,"

"ಕೇಳಿ, ಸಂಕೋಚ ಯಾಕೆ?"

"ನಿನ್ನೆ ಬೆಳಗಿನ ಝಾವ ಮೂರೊ ಮೂರೂವರೆಯೊ ಇರ್ಬೇಕು, ನಿಮ್ಮ ಮನೆಯಲ್ಲಿ ಏನೊ ಗದ್ದಲ ಕೇಳಿಸ್ತಾ ಇತ್ತು. ಹಾಲು, ರೂಮಿನಲ್ಲೆಲ್ಲಾ ಲೈಟು ಹಾಕಿತ್ತು, ಹೋಗಿ ವಿಚಾರಿಸ್ಕೊಂಬರ್‍ಲೇ? ಎಂದು ಕೇಳಿದರು ನಮ್ಮೆಜಮಾನರು. ನಾನೇ ಗದರಿಕೊಂಡೆ,"

"ಹ್ಞೂರೀ, ನಿನ್ನೆ ಒಂದು ಪ್ರಮಾದ ಆಯ್ತು, ದಯವಿಟ್ಟು ನೀವು ಯಾರ್‍ಗೂ ಹೇಳ್ಬಾರ್ದಿ, ಅವ್ಮಾನ ಆಗುತ್ತೆ"

"ಪ್ರಾಮಿಸ್ ಪದ್ಮಮ್ಮ, ಇಷ್ಟೇ ಏನ್ರಿ ನಮ್ಮ ಸ್ನೇಹಾನಾ ನೀವು ಅರ್ಥ ಮಾಡ್ಕೊಂಡಿರೋದು?"

"ಏನಾಯ್ತೂಂದ್ರೆ, ನಿಮಗೆ ಗೊತ್ತಿದ್ಯೋ ಇಲ್ವೋ? ಇವರಿಗೆ ನಾಗರಹೊಳೆಯ ದಟ್ಟ ಕಾಡಿನ ಮಧ್ಯೆಯ ಒಂದು 'ಹಾಡಿ'ಗೆ ಎಲೆಕ್ಷನ್ನು ಡ್ಯೂಟಿಗೆ ಹಾಕಿದ್ದಾರೆ. ಜತೆಗೆ ಇಬ್ಬರು ಹೆಂಗಸರು ಬ್ಯಾರೆ, ಪೋಲಿಂಗ್ ಆಫೀಸರಾಗಿ. ವಿಷಯ ತಿಳಿದಾಗಲಿಂದ ದಿನಪೂರ್ತಿ ಮಂಕಾಗೇ ಇದ್ದರು. ಒಂದು ಜಿರಲೆಯೊ, ಹಲ್ಲಿಯೊ ಕಂಡರೆ ಕುರ್ಚಿಯನ್ನು ಹತ್ತುವ ಇವರಿಗೆ, ಹೋಗಿ ಹೋಗಿ ಅಂಥಹ ಪ್ಲೇಸಿಗೆ ಡ್ಯೂಟಿಗೆ ಹಾಕೊದೇನ್ರೀ? ಇದೇ ಗುಂಗಿನಲ್ಲಿ ರಾತ್ರಿ ಮಲಗಿ, ನಾನು ಕಂಡ ಹಾಗೆ ತುಂಬಾ ಹೊತ್ತು ಹೊರಳಾಡುತ್ತಲೇ

ಇದ್ದರು. ನೀವು ಹೇಳಿದ ಹಾಗೆ ಮೂರೊ ಮೂರೂವರೆನೊ ಇರ್ಬೇಕು. ನನಗೆ ಚೆನ್ನಾಗಿ ನಿದ್ರೆ ಹತ್ತಿತ್ತು. ಆಗಲೆ ಇವರು ಕಿಟಾರೆಂದು ಕಿರುಚಿಕೊಂಡು ಹಾಸಿಗೆಯಿಂದ ಎದ್ದು ಕುಳಿತದ್ದು. ಮೈಯೆಲ್ಲಾ ಸಿಕ್ಕಾಪಟ್ಟೆ ಪದ್ದೆಯಾಗಿ, ತೊಪ್ಪೆಯಾಗಿತ್ತು. ರೂಮು, ಹಾಲಿನ ಲೈಟು ಹಾಕಿ ಕುಡಿಯಲು ನೀರು ಕೊಟ್ಟ ಮೇಲೆ ಇವರು ವಾಸ್ತವಕ್ಕೆ ಬಂದ್ರು, ಹಾಳು ದುಃಸ್ವಪ್ನ ಎಂದು ಮುಸಿ ಮುಸಿ ನಗಲಾರಂಭಿಸಿದರು. ದುಃಸ್ವಪ್ನದ ವಿವರ ಕೇಳಿ ನನಗೂ ನಗು ಬಂತೂ"

"ನಿಮ್ಮ ದಮ್ಮಯ್ಯ ದಯವಿಟ್ಟು ನಿಲ್ಲಿಸ್‌ಬ್ಯಾಡಿ, ಮುಂದುವರೆಸ್ರೀ, ಪದ್ಮಮ್ಮ."

"ಬೆಳಿಗ್ಗೆ ಏಳೂ ಘಂಟೆಗೆ 'ಹಾಡಿ'ಯ ಶಾಲೆಯ ಕೋಣೆಯ ಕದ ತೆರೆದು ಇವರು ಮತ್ತು ಇಬ್ಬರು ಹೆಂಗಸರು, ಅಲ್ಲಿದ್ದ ಇವಿಎಂಗೆ ಕೈ ಮುಗಿದು ಊದು ಬತ್ತಿ ಹಚ್ಚಿ, ರೆಕಾರ್ಡ್‌ಗಳನ್ನು ಸಿದ್ಧಪಡಿಸಿಕೊಂಡ್ರಂತೆ, "ವೋಟು ಮಾಡಲು ಜನ ಬಂದಿದ್ದಾರೆಯೆ? ಹೊರಗೆ ಹೋಗಿ ನೋಡು" ಎಂದು ಪೊಲೀಸ್ ಪ್ಯಾದೆಗೆ ಆಜ್ಞೆ ಮಾಡಿದಾಗ, ಹೊರಗೆ ಹೋದ ಅವನು ಎಷ್ಟು ಹೊತ್ತಾದರೂ ವಾಪಸ್ಸೇ ಬರದೆ ಇದ್ದಾಗ ಯಾಕೊ ಅನುಮಾನಗೊಂಡು ಇವರೇ ಖುದ್ದು ಹೋದಾಗ, "ಸರ್ ಬ್ಯಾಗ ನನ್ನ ತರಹ ಮರ ಹತ್ತಿ, ನಿಮ್ಮ ಬಲಭಾಗದ ಐವತ್ತೂ ಫೂಟು ದೂರದಲ್ಲಿ ಆನೆ ನಿಂತಿದೆ" ಎಂಬ ಪ್ಯಾದೆಯ ಕೂಗು ಕೇಳಿ, ತೀರಾ ಭಯ ವಿಹ್ವಲಗೊಂಡು ಇವರು, ಅವನು ಕೆಳಗೆ ಬಿಸಾಕಿದ್ದ ಡಬ್ಬಲ್ಲು ಬ್ಯಾರನ್ ಗನ್ನನ್ನೂ ಪದ್ದುಕೊಂಡು ಸರ ಸರ ಮರ ಹತ್ತಿ ಬಚಾವಾದರಂತೆ"

"ಮುಂದೆ?"

ಆ ಧೈರ್ಯವಂತ ಹೆಂಗಸು ಆಫೀಸರ್ರುಗಳು, ಇವರ ಅರಿಚಾಟ ಕೇಳಿ ಆಚೆಗೆ ಬಂದು, 'ಸರ್ ದಯವಿಟ್ಟು ಗಾಬರಿಯಾಗ್ಬೇಡಿ, ಅಲ್ಲಿ ನಿಂತಿರುವುದು ನಮ್ಮ ಪ್ರೊಟೆಕ್ಷನ್ನಿಗೆಂದು ಅರಣ್ಯ ಇಲಾಖೆಯವರು 'ಬಳ್ಳೆ' ಕ್ಯಾಂಪಿನಿಂದ ತರಿಸಿರುವ ಪಳಗಿದ ಆನೆ 'ಅಭಿಮನ್ಯು', ಮಾವುತ ಇದನ್ನು ಕಟ್ಟಿ ಹಾಕಿ ನಮಗೆ ಟೀ ಮಾಡಿಸ್ಕೊಂಡು ಬರಲು ಪಕ್ಕದ 'ಹಾಡಿ'ಗೆ ಹೋಗಿದ್ದಾನೆ. ನಿಮಗೆ ಈ ವಿಚಾರ ಹೇಳುವಷ್ಟರಲ್ಲಿ ... ಎಂದು ಅಲವತ್ತು ಕೊಂಡರಂತೆ. ಕೊನೆಗೆ ಆ ಮಹಿಳಾ ಆಫೀಸರರು ಇವರನ್ನು ಮತ್ತು ಆ ಪ್ಯಾದೆಯನ್ನು ಮರದ ಮೇಲಿನಿಂದ ಕೆಳಗೆ ಸೇಫಾಗಿ ಇಳಿಸ್ಕೊಂಡ್ರಂತೆ.

"ಕೇಳೋಕೆ ತುಂಬಾ ಸ್ವಾರಸ್ಯವಾಗಿದೆ ಪದ್ಮಮ್ಮ. ಅಂದ್ಹಾಗೆ ಯಾಕೆ ಕಿಟಾರೆಂದು ಕಿರುಚಿಕೊಂಡು ಎದ್ರು? ಅಂತಾನೆ ನನಗರ್ಥವಾಗ್ತಿಲ್ಲ.

"ಮತ್ತೆ ಮಲಗಿದ್ದ ಇವರಿಗೆ ಝೋಂಪು ಹತ್ತಿದ ಹತ್ತು ನಿಮಿಷದಲ್ಲೇ ಮತ್ತೊಂದು ದುಃಸ್ವಪ್ನ ಈ ಸರ್ತಿ ಬಿತ್ತಂತೆ. ಜನಗಳ ಬದಲು ವೋಟ್ ಮಾಡಲು ಕಾಡು ಪ್ರಾಣಿಗಳ ಒಂದು ದೊಡ್ಡ ಕ್ಯೂನೇ ಅಲ್ಲಿ ನಿಂತಿತ್ತಂತೆ. ಗಾಬರಿಗೊಂಡು ಇವರು ಹಾಗೆ ಕಿರುಚಿಕೊಂಡಿದ್ದಂತೆ" ಆನೆ, ಹುಲಿ, ಕರಡಿ ಅಂದ್ರೆ ಹುಡುಗಾಟವೇನ್ರಿ?"

"ಈ ಕಾಡು ಪ್ರಾಣಿಗಳಿಗೂ ಗ್ಯಾರಂಟಿ ! ವಾಸನೆ ಏನಾದರೊ ಹೊಡೀತೊ ಅಂತೀನಿ ಪದ್ಮಮ್ಮ"

'ನನ್ಗೂ ಅದೇ ಅನುಮಾನ ರೀ...!" ■

**ಭಾರತಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಪ್ರಥಮವಾಗಿ ಸಾರ್ವತ್ರಿಕ ಚುನಾವಣೆ ನಡೆದದ್ದು 25ನೇ ಅಕ್ಟೋಬರ್ 1951 ಮತ್ತು 21ನೇ ಫೆಬ್ರವರಿ 1952ರ ನಡುವೆ..**

# ಎಲೆಕ್ಷನ್ ರೌಂಡ್ ಅಪ್

ಇ.ಆರ್. ರಾಮಚಂದ್ರನ್

'ಓಹೋ! ಏನು ಎಲ್ಲಾ ಸೇರಿಬಿಟ್ಟಿದೀರಾ ಇವತ್ತು? ಏನು ವಿಶೇಷ?'

'ಇವತ್ತು ಡೆಮಾಕ್ರೆಸಿ ಡೆ ಅಂತ ಹೇಳಿದ್ನಲ್ಲಾ...ಮರ್‍ತುಹೋದ್ರಾ?'

'ಸೆಪ್ಟೆಂಬರ್ 15 ಅಲ್ವಾ ಇಂಟರ್ನೇಷನಲ್ ಡೆಮಕರೆಸಿ ಡೆ?

'ನಿಜ. ಆದ್ರೆ ಭಾರತದಲ್ಲಿ ಎಲೆಕ್ಷನ್ ಇರುವಾಗೆಲ್ಲಾ, ನಾವೆಲ್ಲಾ ಒಟ್ಟಿಗೆ ಸೇರ್‍ದಾಗ ಆವತ್ತು ಡೆಮಾಕ್ರೆಸಿ ಡೇನೇ ಅಲ್ವಾ ಅಕ್ಕ?'

'ಅದ್ಸರಿನೆ....ಇನ್ನೇನು ಎಲೆಕ್ಷನ್ ಬಂತಲ್ಲಾ ಇದೇ ತಿಂಗಳಿಂದ..'

'ನೀನು ಹ್ಯಾಗೆ ಅಕ್ಕ ಪ್ರತಿ ವರ್ಷ ಅಷ್ಟು ವೋಟು ಹೊರ್‍ತಾ ಇದ್ದೆ.?. ನಮಗೆ ಊಹಿಸ್ಕೊಳ್ಳೊದೇ ಕಷ್ಟ ಈಗ!'

'ಹೌದಲ್ವಾ ಮತ್ತೆ. ವೋಟ್ನ ನಿನ್ನ ಬಾಯಿಗೆ ತುರುಕೀ ತುರಕೀ ಹೋಗೋವ್ರು. ಎಲೆಕ್ಷನ್ ಮುಗಿಯೋಷ್ಟರಲ್ಲಿ ಹೊರಕ್ಕೆ ರಣ ಭಾರ ಆಗಿರ್‍ಬೇಕು ನಿನಗೆ..'

'ಅಯ್ಯೋ ಬಿಡ್ರೆ! ಅದೊಂದು ಕಾಲ.'

'ನಿಜ! ಆವಾಗ ಪ್ರಜಾಪ್ರಭುತ್ವ ಇತ್ತೋ ಇಲ್ವೋ ಗೊತ್ತಿಲ್ಲ.. ಎಲ್ಲಾರೂ ಕುರಿಗಳ್ ತರಹ ಒಂದೇ ಕಡೆ ಹಾಕಿದ್ದೂ ಹಾಕಿದ್ದೇ'. ಲೆಫ್ಟಿಸ್ಟ್ ಬ್ಯಾಲೆಟ್ ಬಾಕ್ಸ್ ಗೊಣಗ್ತು.

'ಆಗ ನನಗೆ ಬಂದಿದ್ದು ವೋಟು ನೋಡಿ..ಈಗ್ಲೂ ಹೊಟ್ಟೆಕಿಚ್ಚು ಪಡೋವ್ರು ಇದಾರೆ.. ಇವ್ರೆಲ್ಲಾ ಒಟ್ಟಿಗೆ ಸೇರ್‍ಕೊಂಡು ಎರಡು ವರ್ಷ ಕಡಿದಿದ್ದು ನಾವೆಲ್ಲಾ ನೋಡ್ಲಿಲ್ವಾ? ನಮ್ ಕೈಲಿ ಆಗಲ್ಲಾ ಅಂತ ಅವ್ರೇ ಓಡ್ಹೋಗಿ ಗಾಂಧಿ ಇರೋ ರಾಜ್ಘಾಟ್ಮುಂದೆ ಅತ್ಕೊಂಡ್ರು!'

'ಹ್ಹ..ಹ್ಹ..'

'ಅಯ್ಯೋ! ಅದು ಬಿಡಕ್ಕ.. ನಾವು ಯಾಕೆ ಅದನ್ನು ಜ್ಞಾಪಕಕ್ಕೆ ಇಟ್ಕೊಂಡು ಕಚ್ಚಾಡ್ಬೇಕು.. ನಾವು ಈಗ ಹಳೇದನ್ನ ನೆನೆಸ್ಕೊಂಡು ತಮಾಶೆ ಮಾತಾಡ್ತಾ ಕೂತೀದೀವಿ'.

'ನಮ್ಮ ಹಳದಿ ಬಣ್ಣದ ಅರ್ಧ ಇರೋ ಕಡಲೇಕಾಯಿಗೆ 'ಕಾಂಗ್ರೆಸ್' ಅಂತ ಯಾರು ಹೆಸರು ಕೊಟ್ಟರೋ?' ಹೊಟ್ಟೆ ಪಕ್ಷದ ಬ್ಯಾಲೆಟ್ ಬಾಕ್ಸ್.

'ಜನತ ಪಾರ್ಟಿ/ಬಿಜೆಪಿಯಂತೂ ಕೊಟ್ಟಿರಲ್ಲ. ಅದು ಅವ್ರು ಕೊಟ್ಟಿದ್ರೆ ಕೆಂಪು ಕಡಲೇಕಾಯಿಗೋ, ಬೋಂಡ ಕಡಲೇಕಾಯಿಗೋ ಅವ್ರ ಹೆಸರು ಬಂದಿರೋದು.. ಇದು ಯಾವ್ದೇ ಆಗ್ಲಿ.... ಜಾಸ್ತಿ ತಿಂದ್ರೆ ಏನಾಗುತ್ತೆ ಅಂತ ಎಲ್ಲಾರ್ರೂ ಗೊತ್ತು'.

'ಹ್ಹ ..ಹ್ಹ..'

'ನಮ್ ಬಿಹಾರ್ನಲ್ಲಿ ಪೋಲಿಂಗ್ ಬೂತ್ ಹತ್ರ ಬರೋದಕ್ಕೇ ಯಾರ್ರೂ ಬಿಡ್ತಿರ್‍ಲಿಲ್ಲ ಮೋದಿ ಬರೋ ತನಕ'..

'ಅಯ್ಯೋ! ಕೊನೆಗೆ ಯಾರು ಗೆಲ್ತಿದ್ರು?'

'ಒಬ್ಬ ಮೈ ಮುಖ ಪೂರ್ತಿ ಕಂಬ್ಳಿ ಹೊದ್ಗೊಂಡು ಬಂದು ಅವನ ಪಿಸ್ಟಲ್ನಲ್ಲಿ ಒಂದೆರೆಡು ಗುಂಡುಹಾರಿಸಿ, ಎಲ್ಲಾರ್ರೂ ಹೆದರ್‍ಸಿ ಅವ್ನೇ ಒಂದೇ ಬಾಕ್ಸ್ ತುಂಬಾ ವೋಟ್ ಹಾಕಿ ಹೋಗ್ತಿದ್ದ!'

'ಒಳ್ಳೆ ಡೆಮಾಕ್ರಸಿ ಆಯ್ತು ಬಿಡು ನಿಮ್ಮೂರ್‍ದು!'

'ಅಲ್ಲಿ ಯವಾಗ್ಲೂ ಒಬ್ರೇ ಗೆದ್ದು ಬರೋವ್ರು... ಸಿಎಮ್ ಆಗೋವ್ರು... ಆಕ್ಕ

ಮೇವು ತಿಂದು ಅವ್ರು ಜೈಲಿಗೆ ಹೋದ್ಮೇಲೆ ಅವ್ರ ಹೆಂಡತಿ ಸಿಎಮ್ ಆದ್ಲು! ಅಲ್ಲಿ ತಪ್ಪೆ ಆಟೋಕ್ರಸಿ ನಡೀತಿದೆ ಅಕ್ಕ!'

'ನಿಜ. ಇನ್ನೊಂದು ವಿಷಯ. ಎಲ್ಲಾರ್ ತೋರ್ ಬೆರಳ್ಗೂ ಮೈಸೂರಿನ 'ಪೇಂಟ್ಸ್ ಅಂಡ್ ವಾರ್ನಿಷ್' ಕಂಪನಿದು ಕರೀಬಣ್ಣ ಹಚ್ಚೋವ್ರು. ಆ ಮಾರ್ಕು ಏನಾದ್ರೂ ಮೂರು ದಿನ ಹೋಗ್ತಿರ್ಲಿಲ್ಲ'.

'ಈಗ್ಲೂ ಅದೇ ಹಚ್ತಾರೆ. ಅದು ತಕ್ಷಣ ಹೋಗ್ಸೋದಕ್ಕೆ ಮೈಸೂರಲ್ಲೇ 'ಸೋಪ್ಸ್ ಅಂಡ್ ಡೆಟರ್ಜಂಟ್ಸ್' ಕಂಪನಿ ಸ್ಪೆಷಲ್ ಸೋಪು ಮಾಡ್ತಾರೆಂತ ಯಾರೋ ಹೇಳಿದ್ರು. ಎರಡೂ ತೊಗೊಂಡ್ರೆ ಕನ್ಸಿಷನ್ ಕೊಡ್ತಾರಂತೆ..ಒಳ್ಳೆ ವ್ಯಾಪಾರ ಅಂತ ಯಾರೋ ಹೇಳಿದ್ರು. ಅದಿದ್ದರೆ ತಿರುಗ ಬಂದು ವೋಟ್ ಮಾಡಕ್ಕೆ ಈಸಿ ಅಂತಲ್ಲಾ'?

'ಅದೆಲ್ಲಾ ಸುಳ್ಳು.. ಆದ್ರೆ ಬಹಳ ಜನಗಳ ಹೆಸರೇ ಇರಲ್ವಂತೇ ಈಗೀಗ..? ಮುಂಚೆ ರೆಮಿಂಗ್ಟನ್ ಟೈಪರೈಟರ್ನಲ್ಲಿ ತಿಂಗಳಗಟ್ಲೆ ಕೂತ್ಕೊಂಡು 3 ನಾಲ್ಕು ಕಾರ್ಬನ್ ಕಾಪಿ ಹಾಕಿ ಲೊಕಾಲಿಟಿ / ಅಡ್ರೆಸ್ /ಹೆಸರುಗಳನ್ನ ಟೈಪ್ ಮಾಡೋವ್ರು'.

'ನಮ್ಮಣ್ಣನ ಮಗಳು ಹೋದ ವರ್ಷ ಒಂದು ಎಲೆಕ್ಷನ್ ಕೋರ್ಸ್‌ಗೆ ಹೋದ್ಲು .. ಈಗ ಎಲ್ಲಾ ಸುಲಭ ಅಂತೆ. ಕಂಪ್ಯುಟರ್ನಲ್ಲಿ ಅದನ್ನೆಲ್ಲಾ ಹಾಕಿ ಸೇವ್ಮಾಡಿ ಒಂದೇ ಕ್ಷಣದಲ್ಲಿ ಎಲ್ಲಾಕಡೆ ಕಳಿಸ್ಬೋದಂತಲ್ಲಾ... ಆಮೇಲೆ..'

'ಆಮೇಲೆ ಏನು?'

'ಆಮೇಲೆ ಒಂದು ಬಟನ್ ಒತ್ತಿದರೆ ನಿಮಗೆ ಯಾವ ಏರಿಯಾ ಬೇಡ್ವೋ ಅಲ್ಲಿರೋ ಹೆಸರ್ನ ಡಿಲೀಟ್ ಮಾಡ್ಬಹುದಂತೆ!'

'ಅಂದ್ರೆ?'

'ಅಲ್ಲಿದ್ದವ್ರನ್ನ ಸೀದ ಮೇಲಕ್ಕೆ ಕಳಿಸ್ಬಿಡೋದು!'

'ಅಯ್ಯೋ!'

'ಹೌದಕ್ಕ... ಆ ಏರಿಯಾದವ್ರು ಬಂದ್ರೆ ಅವ್ರ ಹೆಸರೇ ಇರಲ್ವಂತೆ!'

'ಅಯ್ಯೋ ಪಾಪಿಗಳಾ!'

'ನಾವು ಅದೇ ನೋಡೀದಿವಲ್ಲಾ..ಪೋಲಿಂಗ್ ಬೂತ್ನಲ್ಲಿ ಒಂದೊಂದು ಸಲ ಹೊಡೆದಾಟ ನಡೀತಿರುತ್ತೆ. ಅಲ್ಲಿರೋ ರೌಡಿ ಹತ್ರ ಮಾಡಿಸ್ತಾರಂತೆ' ಇಂಡಿಪೆಂಡೆಂಟ್ದು ಬ್ಯಾಲಟ್ ಬಾಕ್ಸು ದು ಅನ್– ವೆರಿಫ್ಐಡ್ ನ್ಯೂಸ್.

'ಸುಡುಗಾಡಿಗೆ ಎಳಕೊಂಡು ಹೋಗ್ಬೇಕು ಅಂಥವರ್ನ! ಈಗೀಗ 'ಇವಿಎಮ್' ಬಂದಿದ್ಯಂತಲ್ಲೇ? ಅದರಲ್ಲೂ ಮೋಸ ಮಾಡ್ಬುದು ಅಂತ ಹೇಳ್ತಾರೆ?'

'ಇದರಲ್ಲಿ ಮೋಸ ಮಾಡ್ಬಹುದೂಂತ ಯಾರೂ ತೋರ್ಸಿಲ್ಲ.. ಪ್ರತಿ ಸಲ ಸೋತವ್ರು ಸುಮ್ಸುಮ್ನೆ ಗಾಳಿಪಟ ಹಾರಿಸ್ತಾರೆ.. ನಮ್ಮನ್ನೆಲ್ಲಾ ರಿಟೈರ್ ಮಾಡ್ಸಿ ಈಗ ಸುಲಭ ಮಾಡಿದಾರಲ್ವೇನೇ?'

'ಕ್ಯಾಂಡಿಡೇಟ್ಸ್ ಎಲ್ಲಾರ ಹೆಸರೂ ಇರುತ್ತೆ. ಯಾವ ಹೆಸರಿಗೆ ಹಾಕ್ತಿವೋ ಅದರ ಎದುರಿಗೆ ಒಂದು ಠಸ್ಸೆ ಹೊಡೆದ್ರೆ ಆಯಿತು'.

'ಜನಗಳು ಕನ್ಫ್ಯೂಸ್ ಆಗಿ ಅವ್ರು ಸೋಲ್ಬೇಕೂಂತ ಅದೇ ಹೆಸರಿನ ಮಂಜುನಾಥ್ ಅನ್ನೋವ್ರನ್ನ ನಾಲ್ಕು ಜನನ್ನ ನಿಲ್ಸೀದಾರಂತೆ! ಅದರಲ್ಲಿ ಇಬ್ಬರು ಡಾಕ್ಟರ್ ಮಂಜುನಾಥ್

ಅಕ್ಕ!'

'ಕಂತ್ರಿ ಬುದ್ಧಿನ ನಮ್ಮವರು ಯಾವತ್ತೂ ಬಿಡೋದಿಲ್ಲ ನೋಡು..ಹೇಗಾದ್ರೂ ಮೋಸ ಮಾಡಿ ನಮ್ ಡಾ. ಮಂಜುನಾಥ್ ಅವರನ್ನ ಸೋಲಿ ಸ್ಬೇಕೂಂತ ಇರುವಾಗ ಎಂಥ ಪ್ರಜಾಪ್ರಭುತ್ವದ ಇದು ಎಂಥ ದಿನನೇ ನಾವು ಆಚರಿಸ್ತಾ ಇರೋದು?'



'ಹೌದು ಅಕ್ಕ. ಆದ್ರೆ ಹಾರ್ಟ ಸ್ಪೆಷಲಿಸ್ಟ್ ಗೆದ್ದು ಬರ್ತಾರೆ ನೋಡ್ಕೊ'.

'ನಿಮ್ಮೆಲ್ಲಾರ್ಮುಂದೆ ನಾನು ಚಿಕ್ಕವ್ಳು...ಒಂದು ಮಾತು ಹೇಳಕ್ಕೆ ಇಷ್ಟಪಡ್ತೀನಿ... ನೀವೆಲ್ಲಾ ನಂಬ್ತೀರೋ ಬಿಡ್ತೀರೋ.. ನಮ್ ಲೀಡರ್ಗಳು..ಯಾರೇ ಆಗ್ಲಿ... ಚೆನ್ನಾಗಿ ಹಣ ಮಾಡಿದಾರೆ.. ಯಾವ್ದೇ ಪಾರ್ಟಿ ತೊಗೊ.. 5 ವರ್ಷದಲ್ಲಿ ಎಲ್ಲಾ ದೊಡ್ಡ ಕುಳ ಆಗವ್ರೇ...'! 'ನೋಟ' ಬ್ಯಾಲಟ್ ಬಾಕ್ಸ್ ಬಾಲೆ ಬಾಯ್ಬಿಟ್ಟು.

'ಚಪ್ಪಾಳೆ...ಚಪ್ಪಾಳೆ....'

'ಸರಿಯಾಗಿ ಹೇಳ್ದೆ ನೀನು..ನೋಡಕ್ಕೆ ಛೋಟಿ ಇದ್ದಿಯಾ..ಎಂಥ ಚೂಟಿ ಮಾತು ಹೇಳ್ದೆ. ನಾವೆಲ್ಲ ವೋಟ್ ಹೊತ್ತು ಹೊತ್ತು ಹಾಗೇ ಇದೀವಿ..ನಮ್ಮನ್ನ ಈಗ ವೋಟಿಂದ ತೆಗೆದು ಹಾಕಿ ಇವಿಎಮ್ ಮಡಗವ್ರೆ..ಅವ್ರು ಮಾತ್ರ ಚೆನ್ನಾಗಿ ಹಣ ಮಾಡಿ ಮಜ ಮಾಡ್ತ್ವರೆ'.

'ಹೊರಗಡೆ ಪಕ್ಕದ್ ರೂಮ್ನಿಂದ ಏನೋ ಗುಜು ಗುಜು ಶಬ್ಧ ಕೇಳಿಸ್ತಿದೆ. ತಡಿ ಏನು ಹೇಳ್ತಿದಾರೋ ಕೇಳೋಣ'.

................

**ಪಢಾರಿ ಅಸಿಸ್ಟೆಂಟ್ 1:** ಇಲ್ಲಾ.. ನಮ್ ಲೀಡರ್ ಏಳ್ದೆ ಕೇಳ್ದೆ ರಾತ್ರೋರಾತ್ರಿ ಪಕ್ಷ ಬದಲಾಯಿಸ್ಬಿಟ್ಟರಲ್ಲಾ.. ಪ್ಯಾಂಟೋ, ಷರ್ಟು ಬದಲಾಯಿಸ್ದಂಗೆ ಆಯ್ತು... ನಮ್ ಗತಿ ಏನ್ಲಾ?'

**ಪುಢಾರಿ ಅಸಿಸ್ಟೆಂಟ್ 2:** ನಡುನೀರ್ನಲ್ಲಿ ಬಿಟ್ಟರಲ್ಲಪ್ಪಾ.... ಈಸ್ಟು ದಿವ್ಸ ಎದುರ್ ಪಕ್ಷದ ಕಡೇವ್ರನ್ನ ಬಾಯಿಗ್ ಬಂದ ಹಾಗೆ ಬೈರಿ ಅಂತ ಏಳ್ತಿದ್ರು.. ಈಗ ಅವರ್ನ ಅಪ್ಕೋ ಅವ್ರು ನಮ್ ಕಡೇವ್ರು..ಅಂತಾರೆ.. ಆಎಂಗ್ಸು ಈಗ ನಮ್ಮೋವ್ರೇ ಅಂದ್ರೆ ಹೆಂಗ್

ಆಗ್ತದೆ? ಅವರ್ಕಡೆ ಉಡುಗ್ರೆಲ್ಲಾ ನಮ್ಮನ್ ನೋಡಿ ನಗ್ತವ್ರಕಂಡ್ಲಾ..ನನ್ಗೇನೋ ನಾಚ್ಕೆ ಆಗ್ತದೆ'.

**ಪು.ಅ. 1:** ಇಡಿ ರೇಡ್ ತಪ್ಪಿಸ್ಕೊಳ್ಳೋಕೆ ಪಾಲ್ಟಿ ಬದ್ಲಾಯಿಸ್ಬುಟ್ರಾ ನಮ್ ಲೀಡರ್ರು? ಅವರ್ದು ಆಸ್ತಿ 50 ಪಟ್ಟು ಜಾಸ್ತಿ ಆಗಿ ಇಡಿ ಕಣ್ ಇವರ್ಮೇಲೇ ಬಿತ್ತಾಂತ..?'

**ಪು. ಅ. 2:** ಅವ್ರದೇನೋ 50 60 ಪಟ್ಟು ಏರ್ತಿದೆ. ನಮ್ದು ಏನೂ ಇಲ್ವಲ್ರೋ.. ಕೈಗೆ ಪುಡಿಕಾಸು ಕೊಡ್ತಿದ್ದರು.. ಬ್ಯಾನರ್ ದುಡ್ಡಲ್ಲಿ ಮಜ ಮಾಡ್ತಿದ್ವಿ..ಅದೂ ಓಯ್ತು. ನಮ್ ಕೈಗೆ ತೆಂಗಿನ್ ಚಿಪ್ಪುಕೊಟ್ರು ಕೊನೆಗೆ'.

'ಎಲ್ಲಾರ್ ದೋಸೇನು ತೂತು ಅಕ್ಕ'

'ನೀನು ಸರಿಯಾಗಿ ಹೇಳ್ದೆ ಕಣೇ'.

■

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.
ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಸ್ವಾಮಿ ಇಷ್ಟೆಲ್ಲ ಮಾಡ್ತೀರಲ್ಲ. ಈ ಪೆನ್ನನ್ನ ಸ್ವಲ್ಪ ಬಿಚ್ಚಿಕೊಡಿ ನೋಡೋಣ.

**ಆಗ ಇದ್ದ 489 ಲೋಕಸಭಾ ಸ್ಥಾನಗಳಿಗೆ 53 ರಾಜಕೀಯ ಪಕ್ಷಗಳಿಂದ ಒಟ್ಟು 1949 ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಇದರಲ್ಲಿ ಪ್ರಥಮ ಸ್ಥಾನ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಅದು ಗೆದ್ದಿದ್ದು 364 ಸ್ಥಾನಗಳನ್ನು. ಎರಡನೇ ಸ್ಥಾನ ಕಮ್ಯುನಿಸ್ಟ್ ಪಕ್ಷ 16, ಮೂರನೇ ಸ್ಥಾನ ಸೋಷಿಯಲಿಸ್ಟ್ ಪಕ್ಷ 12 ಸ್ಥಾನ. ಮಿಕ್ಕ ಅನೇಕ ಪಕ್ಷಗಳು ಸೋತರೆ ಕೆಲವೇ ಪಕ್ಷಗಳು ಒಂದಂಕಿ ಸ್ಥಾನವನ್ನು ಗೆದ್ದವು.**

# ಬಂತೈ ಬಂತೈ ಬಂತೈ ಚುನಾವಣೆ ಬಂತೈ

ಎಚ್. ಗೋಪಾಲಕೃಷ್ಣ

ಚುನಾವಣೆ ಅಂದರೆ ಕೂಡಲೇ ನೆನಪಿಗೆ ಬರೋದು ಲೌಡ್ ಸ್ಪೀಕರ್ ಸಿಕ್ಕಿಸಿದ ಜಟಕಾ ಗಾಡಿ. ಲೌಡ್ ಸ್ಪೀಕರ್ ಹೊಮ್ಮಿಸುತ್ತಿದ್ದ ಯಾವುದಾದರೂ ತಮಿಳು, ಹಿಂದಿ ಸಿನೆಮಾದ ಮತ್ತು ತುಂಬಾ ಅಪರೂಪಕ್ಕೆ ಕನ್ನಡ ಸಿನಿಮಾದ ಹಾಡುಗಳು. ಈ ಹಾಡಿನ ಶಬ್ದ ಕೇಳುತ್ತಿದ್ದ ಹಾಗೇ ಆಡುತ್ತಿದ್ದ ಆಟ ಅರ್ಧಕ್ಕೆ ಬಿಟ್ಟು ಮನೆಯ ಅಂಗಳದಿಂದ ರಸ್ತೆಗೆ ಓಡಿ ಜಟಕಾ ಎದುರುಗೊಳ್ಳಲು ಕಾಯುತ್ತಾ ನಿಲ್ಲುತ್ತಿದ್ದ ನಮ್ಮದೇ ವಯಸ್ಸಿನ ಚುಲ್ಟಾರಿಗಳು. ಜಟಕಾ ಅಲ್ಲಲ್ಲಿ ನಿಲ್ಲಿಸಿ ಯಾರದೋ ಹೆಸರು ಹೇಳಿ ಅವರಿಗೆ ವೋಟು ಹಾಕಿ ಎಂದು ಘೋಷಣೆ. ಜಟಕಾ ಗಾಡಿಯ ಒಳಗಿನಿಂದ ಆಗಾಗ್ಗೆ ತೂರುತ್ತಿದ್ದ ಪ್ರಿಂಟೆಡ್ ಕಾಗದಗಳು. ಅವುಗಳನ್ನು ಪೈಪೋಟಿ ಮೇಲೆ ಹಿಡಿದು ಮನೆಗೆ ತಂದು ದೊಡ್ಡವರ ಕೈಗಿತ್ತು ಅವರು ಅದನ್ನು ಓದುವುದನ್ನು ಕುತೂಹಲದಿಂದ ನೋಡುತ್ತಾ ನಿಲ್ಲುತ್ತಿದ್ದೆವು. ಒಮ್ಮೆ ಹೀಗೆ ಸಿಕ್ಕಿದ ಚೀಟಿ ಹಿಡಿದು ಗೆಳೆಯ ಸೇತು ರಾಮನ ಸುಮಾರು ದೊಡ್ಡ

ಮನೆ ಹೊಕ್ಕೆ. ಅವನ ದೊಡ್ಡಣ್ಣ, ನನಗಿಂತಲೂ ಹದಿನೈದು ಇಪ್ಪತ್ತು ವರ್ಷ ದೊಡ್ಡವನು ಕುರ್ಚಿ ಮೇಲೆ ಕೂತಿದ್ದವನು, ದಪ್ಪನೆ ಮೀಸೆ ಬಿಟ್ಟಿದ್ದ. ಏಯ್ ಅದೇನು ಕೊಡೋ ಇಲ್ಲಿ ಅಂತ ಇಸ್ಕೊಂಡ. ಓದಲು ಟೇಬಲ್ಲಿನ ಆಕಡೆ ಕೂತ. ಈ ಕಡೆ ನಾನು. ಅವನು ಓದಿ ಚೀಟಿ ಕೊಡ್ತಾನೆ, ಅದನ್ನ ತಗೊಂಡು ಮನೇಲಿ ತೋರಿಸಬೇಕು ಅಂತ ನನ್ನ ಯೋಚನೆ.

ಅವನು ಚೀಟಿ ಓದುತ್ತಿರ ಬೇಕಾದರೆ ಸುಮ್ಮನೆ ಕೂತು ಕೈ ಕಾಲು ಆಡಿಸುತ್ತಿದ್ದ ನನ್ನ ಕಾಲು ಅವನಿಗೆ ತಗುಲಿತು.

ಏಯ್ ಸುಮ್ಮನೆ ಕುತ್ಕೊಳ್ಳೋ, ಕಾಲು ತಗಲಿಸ್ತಿಯ ಮನೆಗೆ ಹೋಗೋ.. ಅಂದ. ಅವನ ದಪ್ಪನೆ ಮೀಸೆ ನೋಡುತ್ತಾ ನನ್ನ ಚೀಟಿ.... ಅಂದೆ.

ಆಮೇಲೆ ಬಂದು ಇಸ್ಕೋ ಅಂತ ನನ್ನ ಮನೆಗೆ ಕಳಿ ಸಿದನಾ? ಆಮೇಲೆ ಚೀಟಿ ಹುಡುಕಿ ಕೊಂಡು ಅವರ ಮನೆಗೆ ಹೋದರೆ ಸೇತು ರಾಮ ಅದನ್ನ ತೆಗೆದು ಇಟ್ಟುಕೊಂಡು ನನಗೆ ಕೊಡಲೇ ಇಲ್ಲ.ಕಳೆದು ಹೋಯಿತು, ನಮ್ಮ ಅಣ್ಣ ಹರಿದು ಹಾಕಿದ..ಅಂತ ಸಬೂಬು ಹೇಳಿದ. ಅವತ್ತು ನನಗಾದ ನೋವು ಈಗ ಆಚೆ ಬಂದಿದೆ.

ಒಳ್ಳೆಯ ಚೀಟಿ ಹೀಗೆ ಮನೆಯವರಿಗೆ ತೋರಿಸಲು ಆಗಲಿಲ್ಲವೆ ಎನ್ನುವ ನೋವು ಇನ್ನೂ ಹೃದಯದ ಒಂದು ಮೂಲೆಯಲ್ಲಿ ಹುದುಗಿದೆ, ಅದರಿಂದ ಅದು ಇನ್ನೂ ಜೀವಂತ!

ಕೊಂಚ ದೊಡ್ಡವನು ಆದನಂತರ ನಾವು ನಾವೇ ಪುಟ್ಟ ವರು ಸೇರಿಕೊಂಡು ಒಂದು ಆಟ ಆಡುತ್ತಿದ್ದೆವು. ಒಬ್ಬ ಮುಂದಾಳು ಅವನ ಕೈಯಲ್ಲಿ ಮಡಿ ಕೋಲಿಗೆ ಸಿಕ್ಕಿಸಿದ ಹರಕಲು ಸೀರೆ ತುಂಡು. ಅವನ ಹಿಂದೆ ನಾವು ಆರೆಂಟು ಹುಡುಗರು. ನಮ್ಮ ಕೈಲೂ ಮಡಿ ಕೋಲಿಗೆ ಸಿಕ್ಕಿಸಿದ ತುಂಡು ಹರಕಲು ಸೀರೆ. ಅಂದರೆ ಬಾವುಟದ ಹಾಗೆ. ಮುಂದೆ ನಿಂತವನು ಬಾವುಟ ಹಿಡಿದ ಕೈ ಮೇಲೆತ್ತಿ ನಿಮ್ಮ ವೋಟು ಯಾರಿಗೆ ಎಂದು ಕೂಗುವುದು. ಅವನ ಹಿಂದೆ ನಿಂತ ನಾವು ನಮ್ಮ ವೋಟು ಕಾಂಗ್ರೆಸ್ಸಿಗೆ ಅಂತ ಕೋರಸ್ ಹಾಕುವುದು. ಬಾಯಿ ನೋಯುವ ವರೆಗೆ ಅಥವಾ ನಮ್ಮ ಅರಚಾಟ ಸಹಿಸಲು ಸಾಧ್ಯವಾಗದೆ ಯಾರಾದರೂ ದೊಡ್ಡವರು ಬಂದು ನಮ್ಮನ್ನು ಅವರ ಮನೆ ಮುಂದಿನಿಂದ

ಓಡಿಸುವ ತನಕ ಈ ಆಟ.

ಕೊಂಚ ಬೆಳೆದ ನಂತರ ನಿಮ್ಮ ವೋಟು ಹಳದಿ ಬಣ್ಣದ ಪೆಟ್ಟಿಗೆಯಲ್ಲಿ ಹಾಕಿ, ನೀಲಿ ಬಣ್ಣದ ಪೆಟ್ಟಿಗೆಯಲ್ಲಿ ಹಾಕಿ, ನೇರಳೆ ಬಣ್ಣದ ಪೆಟ್ಟಿಗೆಯಲ್ಲಿ ಹಾಕಿ...ಎನ್ನುವ ಘೋಷಣೆ ಇತ್ತು. ಯಾವುದೋ ಪುಟ್ಟ ಸಂಘ ಸಂಸ್ಥೆ ಚುನಾವಣೆ ಇರಬೇಕು ಅದು ಅಂತ ಅಂದುಕೊಂಡಿದ್ದೆ. ಮೊದಲನೇ ಚುನಾವಣೆಯಲ್ಲಿ ವೋಟು ಹಾಕಿದ್ದ ನಮ್ಮ ತಂದೆ ಈ ರೀತಿಯ ಬಣ್ಣ ಬಣ್ಣದ ಡಬ್ಬಗಳು ಆಗ ಇದ್ದವು ಅಂತ ಒಮ್ಮೆ ಹೇಳಿದ ನೆನಪು.ಅಭ್ಯರ್ಥಿಗಳಿಗೂ ಸಹ ಬೇರೆ ಬೇರೆ ಬಣ್ಣದ ಪೇಪರ್ ಇರುತ್ತಿತ್ತಂತೆ.

ಬೆಂಗಳೂರಿನಲ್ಲಿ ಎರಡನೇ ಸಾರ್ವತ್ರಿಕ  ಚುನಾವಣೆಯಲ್ಲಿ ಕೆಂಗಲ್ ಹನುಮಂತ ರಾಯರು ಸ್ಪರ್ಧಿಸಿದ್ದರು. ಅವರ ಎದುರು ಚುನಾವಣೆಗೆ ನಿಂತವರು ಹರಿಂದ್ರ ನಾಥ ಚಟ್ಟೋಪಾಧ್ಯಾಯ ಅಂತ. ಖ್ಯಾತ ತಾರೆ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪತಿ. ಹರಿಂದ್ರ ನಾಥ ಚಟ್ಟೋಪಾಧ್ಯಾಯ ಅವರೂ ಸಹ ಒಳ್ಳೆಯ ಕಲಾವಿದ, ಸಂಗೀತ ಗಾರ ಮತ್ತು ರಂಗ ನಟ. ಸರೋಜಿನಿ ನಾಯ್ಡು ಅವರ ತಮ್ಮ. ಅನೇಕ ಚಿತ್ರಗಳಲ್ಲಿ ನಟಿಸಿದ್ದರು,ಬಾವಾರ್ಚಿ ಎನ್ನುವ ಒಂದು ಹಿಂದಿ ಸಿನಿಮಾದಲ್ಲಿ ರಾಜೇಶ್ ಖನ್ನಾ ಜತೆ ನಟಿಸಿದ್ದರು. ಅಷ್ಟೇ ಅಲ್ಲದೆ ಕಮ್ಯುನಿಸ್ಟ್ ಪಾರ್ಟಿ ಲೀಡರ್. ಮೊದಲನೇ ಚುನಾವಣೆಯಲ್ಲಿ ಇವರು ವಿಜಯ ವಾಡ ದಿಂ ದ ಲೋಕಸಭೆಗೆ ಆಯ್ಕೆ ಆಗಿದ್ದರು.

ಅವರು ಬೆಂಗಳೂರಿನಲ್ಲಿ ಪ್ರಚಾರಕ್ಕೆ ಲಾರಿಯಲ್ಲಿ ಕೂತು ಹಾರ್ಮೋನಿಯಂ ಬಾರಿಸುತ್ತಾ ಹಾಡು ಹೇಳಿಕೊಂಡು ರಂಜಿಸುತ್ತಾ ವೋಟು ಕೇಳುತ್ತಿದ್ದರು. ಅವರು ಕೆಂಗಲ್ ಅವರೆದುರು ಸೋತರು.

ಇದೇ ರೀತಿ ಹಾಡು ಹೇಳಿ ವೋಟು ಕೇಳುತ್ತಿದ್ದ ಮತ್ತೊಬ್ಬರು ಎಂದರೆ ಕಮ್ಯುನಿಸ್ಟ್ ನಾಯಕ ಎಂ.ಎಸ್ ಕೃಷ್ಣನ್ ಅವರು.

ಇನ್ನೂ ಬೆಳೆ ದೆವು ನೋಡಿ ಮೊದಲನೇ ವೋಟು ಹಾಕುವ ವಯಸ್ಸು ಬಂತಾ? ಆಗಿನ ಹುಮ್ಮಸ್ಸು ಉತ್ಸಾಹ ಹೇಗೆ ವರ್ಣಿಸಿ ವುದು? ಬೆಳಿಗ್ಗೆ ಎದ್ದ ಕೂಡಲೇ ಸ್ನಾನ ಸಂಧ್ಯಾವಂದನೆ ಉಪ್ಪಿಟ್ಟು ಮುಗಿಸಿ, ಬೂತಿನ ಮುಂದೆ ಮೊದಲು ನಿಂತು ಬಾಗಿಲು ತೆಗೆದ ಕೂಡಲೇ ಒಳಗೆ ಓಡಿ ಗುರುತಿನ ಚೀಟಿ ತೋರಿಸಿ ಬಲಗೈ ತೋರು ಬೆರಳಿಗೆ ಮಸಿ ಹಾಕಿಸಿ ಕೊಂಡು ಗಜದುದ್ದದ ಮತ ಪತ್ರ ಪಡೆದು ರಟ್ಟಿನ ಮರೆಯಲ್ಲಿ ನಿಂತು ಬ್ಯಾಲೆಟ್ ಪೇಪರ್ ಪೂರ್ತಿ ಓದಿ ಆಮೇಲೆ ರಬ್ಬರ್ ಸ್ಟಾಂಪ್ ಒತ್ತಿ ಮತ ಚಲಾಯಿಸಿದ್ದು.... ಇನ್ನೂ ನಿನ್ನೆ ಮೊನ್ನೆ ನಡೆದ ಹಾಗಿದೆ.

ಎಮರ್ಜೆನ್ಸಿ ಬಂತಾ, ಅದು ಮುಗೀತಾ. ನಂತರದ ಎಲೆಕ್ಷನ್ ನಲ್ಲಿ ನಮ್ಮ ಕ್ಷೇತ್ರಕ್ಕೆ ಕೆ ಎಸ್ ಹೆಗ್ಡೆ ವಿರೋಧ ಪಕ್ಷದ ಸ್ಪರ್ಧಿ. ಎಮರ್ಜೆನ್ಸಿ ಅತಿರೇಕಗಳನ್ನು ವರ್ಣರಂಜಿತವಾಗಿ ಬಿಂಬಿಸಿದ ಪೇಪರುಗಳು. ಸಹಜವಾಗಿ ಹೆಗ್ಡೆ ಪರ ಕ್ಯಾನ್ವಾಸ್, ಕೈಯಿಂದ ಕಾಸು ಹಾಕೊಂಡು ಪ್ರಚಾರ ಮತ್ತು ಚುನಾವಣೆ ದಿವಸ ಬೂತ್ ಏಜೆಂಟ್ ಕೆಲಸ! ಮೊಟ್ಟ ಮೊದಲ ಬಾರಿಗೆ ಅವತ್ತು ಬೆಳಿಗ್ಗೆ ಎರಡು ಇಡ್ಲಿ ಒಂದು ವಡೆ, ಮಧ್ಯಾಹ್ನ ಚಿತ್ರಾನ್ನ ಮೊಸರನ್ನ, ಸಂಜೆ ಬಜ್ಜಿ.. ಮಧ್ಯೆ ಮಧ್ಯೆ ಆರೇಳು ಸಲ ಕಾಫಿ...ಎಲ್ಲಾ ಫ್ರೀ!

ಮೊಟ್ಟಮೊದಲ ಸಲ ಈ ಫ್ರೀ ತಿಂದದ್ದು ಈಗಲೂ ಹಸಿರು ಹಸಿರು. ವಿದ್ಯುನ್ಮಾನ ಮತ ಯಂತ್ರ ಬರುವ ಮೊದಲು ಪೇಪರ್ ಮತ ಪತ್ರ. ಅದೆಷ್ಟೋ ಸಾವಿರಾರು ಎಕರೆ ಕಾಡುಗಳನ್ನು ಕಡಿದು ಅದರ ಮರದಿಂದ ಪೇಪರ್ ತಯಾರಿಕೆ, ಎಣಿಸಲು ಅದೆಷ್ಟೋ

ಸಮಯ, ಅದರ ಶೇಖರಣೆ, ಕಾವಲು, ಮಾನವ ಸಂಪನ್ಮೂಲ......ಪ್ರಜಾಪ್ರಭುತ್ವ ಬೇಡುವ ಖರ್ಚು ಇದು ಎನ್ನುವ ವ್ಯಂಗ್ಯ!


ವಿದ್ಯುನ್ಮಾನ ಮತ ಯಂತ್ರ ಬಂತಾ. ಅದರ ಬಿಡುಗಡೆ ಮೊದಲು ಆಗಿನ ಪ್ಲಾನಿಂಗ್ ಕಮಿಷನ್ ನ ಶ್ರೀ ರಾಮಕೃಷ್ಣ ಹೆಗಡೆ ಅವರು ಮತ ಯಂತ್ರ ನೋಡಲು ಕಾರ್ಖಾನೆಗೆ ಬಂದದ್ದು.ಅವರನ್ನು ನೋಡಲು ನಾವು ಗುಂಪು ಸೇರಿದ್ದು, ಅವರು ಹತ್ತಿರ ಬಂದು ನಮ್ಮ ಕೈ ಕುಲುಕಿದ್ದು..... ಈಗಲೂ ನೆನಪಿನಿಂದ ಮಾಸಿಲ್ಲ.ಅದು ಅಂದರೆ ವಿದ್ಯುನ್ಮಾನ ಮತಯಂತ್ರ ಸರಿಯಾಗಿ ಕೆಲಸ ಮಾಡೋಲ್ಲ ಅನ್ನುವ ಅಪಪ್ರಚಾರ. ಒತ್ತಿದ ಬಟನ್ ಗಳು ಒಂದೇ ಪಕ್ಷಕ್ಕೆ ಮತ ಹೋಗೋ ರೀತಿ ಮಾಡಲಾಗಿದೆ ಅನ್ನುವ ಆರೋಪ. ಈ ಎಲ್ಲಾ ಆಗು ಹೋಗುಗಳ ನಡುವೆ ನಮ್ಮ ಪ್ರಜಾಪ್ರಭುತ್ವ ಮತ್ತಷ್ಟು ಆಳವಾಗಿ ಬೇರು ಬಿಡುತ್ತಿದೆ.

ಈಗಲೂ ಯಾವುದೇ ಪಕ್ಷ ಸೋಲಲಿ ವಿದ್ಯುನ್ಮಾನ ಮತ ಯಂತ್ರ ಹ್ಯಾಕ್ ಆಗಿದೆ ಎನ್ನುವ ಆರೋಪ ಇದ್ದೇ ಇರುತ್ತೆ! 1990ರಲ್ಲಿ ಕೇರಳದ ಒಂದು ಬೂತ್ ನಲ್ಲಿ ಮೊದಲ ಬಾರಿಗೆ ಈ ವಿದ್ಯುನ್ಮಾನ ಮತ ಯಂತ್ರ ಚಾಲನೆ ಪಡೆಯಿತು. ಸಮಯ ಸ ರಿದ ಹಾಗೆ ಈಗ ಇಡೀ ದೇಶ ಈ ಯಂತ್ರ ಉಪಯೋಗಿಸುತ್ತಿದೆ ಮತ್ತು ಹಲವಾರು ದೇಶಗಳಿಗೆ ನಾವು ವಿದ್ಯುನ್ಮಾನ ಮತ ಯಂತ್ರ ರಫ್ತು ಮಾಡುತ್ತಿದ್ದೇವೆ.

ಒಟ್ಟಾರೆ ಮತದಾನದ ಹಕ್ಕು ಬಂದನಂತರ ಒಂದೇ ಒಂದು ಮತದಾನವನ್ನು ಸಹ ತಪ್ಪಿಸಿಕೊಂಡು ಇಲ್ಲ ಎನ್ನುವುದು ಹೆಮ್ಮೆ. ಮತ ಹಾಕಿ ಬಂದು ಬೆರಳಿನ ಮೇಲಿನ ಮಸಿ ಕಾಣುವಂತೆ ಒಂದು ಸೆಲ್ಫಿ ತೆಗೆದುಕೊಂಡು ಅದನ್ನು ಫೇಸ್ ಬುಕ್, ಇನ್‌ಸ್ಟಾಗ್ರಾಂ, ವಾಟ್ಸಾಪ್‌ಗಳಲ್ಲಿ ಹಾಕದಿರುವ ಪ್ರಜ್ಞಾವಂತ ಮತದಾರ ಇರುವನೇ..

ಮೊನ್ನೆ ಮತ ಹಾಕಿಬಂದು ಇಂಕಿನ ಮಸಿ ಹಚ್ಚಿದ ಬೆರಳು ಕಾಣುವ ಹಾಗೆ ಒಂದು ಸೆಲ್ಫಿ ತೆಗೆದು ಇನ್ ಸ್ಟ ಗ್ರಾಂ ನಲ್ಲಿ ಹಾಕಿದೆನಾ.... ಬಿಡಿ ಅದರ ಮಜವೇ ಬೇರೆ!

ಆಗಾಗ ಎಲೆಕ್ಷನ್ ಬರಲಿ, ಅದರ ಸಂತಸ ಎಮಗಿರಲಿ... ■



# ಕೆಂಚಪ್ಪನ ಮತ ಯಾಚನೆ

ಸುಧಾ ಸರ್ನೋಬತ್

"ಉತ್ತರ ಧೃವದಿಮ್ ದಕ್ಷಿಣ ಧೃವಕೂ ಚುಂಬಕ ಗಾಳಿಯು ಬೀಸುತಿದೆ ಎಂಬಂತೆ ಲೋಕಸಭಾ ಚುನಾವಣೆ ಗಾಳಿ ಎಲ್ಲೆಡೆ ಜೋರಾಗಿ ಬೀಸುತ್ತಿದೆ. ಈ ಗಾಳಿಯ ರಭಸಕ್ಕೆ ದಕ್ಷಿಣ ದಿಕ್ಕಿನ ಸಕಲ ದಿಗ್ಗಜ ರಾಜಕಾರಣಿಗಳ ಕಿವಿ ನಿಮಿರಿ, ಕಣ್ಣರಳಿ, ಮಂಡೆ ಬಿಸಿಯಾಗಿ ಉರಿಬಿಸಿಲಿಗೆ ನಿಂತ ಕಟು ಅನುಭವ ಆಗತೊಡಗಿತು. ಅಭ್ಯರ್ಥಿಗಳು ಪಕ್ಷಾಂತರ ಮಾಡಲು ಹೋಗಿ ಅಲ್ಲೂ ಸಲ್ಲದವ, ಇಲ್ಲೂ ಸಲ್ಲದವ ಆಗಿ ಬದಲಾದರು. ಇವರಿಗೆ ಟಿಕೇಟು ಬೇಡ.. ಅಂತ ಕೆಲವರು, ಅವರಿಗೆ ತಿಕೇಟು ಕೊಟ್ಟರೆ ನಾವು ನಿಮ್ಮ ಮನಿ ಮುಂದ ಉಪಾಸ ಕುಂದರ್ತೀವಿ" ಅನ್ನುವ ಕೆಲವರು.

"ಕುಂತ್ರೆ ಕುಂದರ್ಲಿ ಅನ್ನೋ ಗುಂಪೊಂದು ಕಡೆ. ನಾನು ಸ್ವತಂತ್ರವಾಗಿ ನಿಲ್ಲತೇನೆ ಅಂತ ಹಲವರು, ನಾನು ಮನೇಲಿ ಕೂರ್ತೇನೆ ರಾಜೀನಾಮೆ ಕೊಟ್ಟು" ಅಂತ ಹಲವರು. ನನಗೆ ಕೊಡದಿದ್ರೂ ಪರವಾಗಿಲ್ಲ ನನ್ನ ಮಗನಿಗೆ ಅಥವಾ ಮಗಳಿಗೆ ಅಥವಾ ಅಳಿಯನಿಗೆ ಟಿಕೇಟ್ ಕೊಡಿ ಅಂತ ಇನ್ನೂ ಕೆಲವರು.!! ಪಕ್ಷದ ಅಧ್ಯಕ್ಷ ರಿಗೆ ತಲೆಕೆಟ್ಟು ಕೆರ ಹಿಡಿದು, ದಿನಂಪ್ರತಿ ತಮ್ಮ ಹೆಂಡತಿ ಯ ಮೇಲೆ, ಕೋಪ ಪ್ರತಾಪ ತೋರಿಸತೊಡಗಿದರು. ಅತ್ತಿಯ ಸಿಟ್ಟು ಕೊತ್ತಿಯ ಮೇಲೆ ಎಂಬಂತೆ.

ಇಂಥ ಸುವರ್ಣ ಸಮಯದಲ್ಲಿ ನಮ್ಮ ಧೋಬಿ ಕೆಂಚಪ್ಪ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದನು. ಎಲ್ಲೆಡೆ ಕೆಂಚಪ್ಪ ವಿನೀತನಾಗಿ, ಹಲ್ಲುಗಿಂಜುತ್ತ, ಕೈ ಮುಗಿಯುತ್ತ, ನಿಂತಿರುವ ಭವ್ಯ ಕಟೌಟ್ ರಾರಾಜಿಸತೊಡಗಿತು. ಕೆಂಚ ಪ್ಪ ತಾನೇ ಒಗೆದು ಗರಿ ಗರಿಯಾಗಿ ಇಸ್ತ್ರಿ ಮಾಡಿದ ಬಿಳಿ ಪೈಜಾಮಾ ಜುಬ್ಬಾ.. ಧರಿಸತೊಡಗಿದನು. ಒಂದಿನ ಬಹಿರಂಗ ಚುನಾವಣಾ ಭಾಷಣ ಮಾಡುವ ಸುಯೋಗ ಒದಗಿ ಬಂತು ಕೆಂಚಪ್ಪನಿಗೆ. ಪಕ್ಷದ ಬಗ್ಗೆ ಕೆಲವು ಒಳ್ಳೆಯ ಮಾತು ಆಡಲು ಪಕ್ಷದ ವರಿಷ್ಠರು ಸೂಚಿಸಿದರು.

ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಖೋ ಕೊಟ್ಟವರಂತೆ ಭರದಿಂದ ಎದ್ದು ಓಡಾಡತೊಡಗಿದರು. ಕೆಂಪು (ಹನುಮಾನ್) ಚಡ್ಡಿ ಧರಿಸಿ ಕುಸ್ತಿ ಪಟುವಿನಂತೆ ಚುನಾವಣಾ ಅಖಾಡಕ್ಕೆ ಇಳಿದರು. ಅಂತರಂಗ (ಗುಪ್ತ ಸಮಾಲೋಚನೆ) ಬಹಿರಂಗ ಸಭೆ ಜರುಗಿದವು. ಕೆಲವರು ಕೇವಲ ಗುಪ್ತಸಭೆಗೆ ತಮ್ಮ ಹಾಜರಿ ಹಾಕಿ ಬಹಿರಂಗ ಸಭೆಗೆ ಗೈರಾಗಿ ತಮ್ಮ ಅಸಮಾಧಾನ ಹೊರಹಾಕಿದರು. ಪಕ್ಷದಿಂದ ಪಕ್ಷಕ್ಕೆ ಹಾರಾಟ ಮತ್ತು ಮಾರಾಟ ಬಲು ಜೋರಾಗಿ ನಡೆಯತೊಡಗಿತು.! ಅಂಬುಲೆನ್ಸ ನಲ್ಲಿ ರೋಗಿಗಳ ಬದಲು ಹಣ ಓಡಾಡಿತು. ಕುಕ್ಕರ್ ಸೇವೆ, ಅಕ್ಕಿ ಸೇವೆ, ಸೀರೆ ಜಂಪರ ಉಡುಗೊರೆ. ಇದರ ಜೊತೆಗೆ ಹಣದ ಹೊಳೆ ಹರಿಯಿತು.ಗೆದ್ದು ಬಂದ್ರೆ ಇದರ ಹತ್ತುಪಟ್ಟು ಸಂಪಾದಿಸಿ ಬಿಸಾಕಬಹುದು ಎಂಬ ಗಟ್ಟಿ ನಂಬಿಕೆ.!!

"ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಮೇಲು" ಎಂಬಂತೆ, ಕೋಟಿ ಕೋಟಿ ನುಂಗಣ್ಣನವರು, ಬಿಳಿಕೋಟು ಬಿಳಿ ಗಾಂಧಿಟೋಪಿ, ಹರಕು ಚಪ್ಪಲಿ ಧರಿಸಿ ಜನಸೇವಕರಂತೆ, ವೇಷಹಾಕಿ ವಿಜೃಂಭಿಸತೊಡಗಿದರು. ಹೊರವೇದಿಕೆಗಳು, ಒಳಜಗಲಿಗಳಲ್ಲಿ ಗುಂಪುಗಾರಿಕೆ ನಡೆಯಿತು.

ಹಾರ ತುರಾಯಿಗಳ ಹಾರಾಟ ಮಾರಾಟ ಭರದಿಂದ ನಡೆಯಿತು. ಇಂಥ ಪ್ರಚಂಡ ಚುನಾವಣೆಗೆ ನಮ್ಮೂರಿನ ಕೆಂಚಪ್ಪ ಅಭ್ಯರ್ಥಿಯಾಗಿ, ಕಂಗೊಳಿಸಿದ್ದು ನಮ್ಮೂರಿಗೆ ಹೆಮ್ಮೆಯ ವಿಷಯವಾಗಿತ್ತು.

ಕೆಂಚಪ್ಪನ ಭಾಷಣ ಬಿರುಸಾಗಿ ಸಾಗಿತು.ಜನಸಾಗರ ಸೇರತೊಡಗಿತು. ಆರಂಭದಲ್ಲಿ ನಮ್ಮ ಕೆಂಚಪ್ಪ ಗರಿಮುರಿ ಬಿಳಿ ಬಟ್ಟೆ ಧರಿಸಿ ತನ್ನ ಪತ್ನಿ ಮತ್ತು ಕುಟುಂಬದ ಸದಸ್ಯರ ಸಮೇತ,ತನ್ನ ಮನೆದೇವರಾದ ಮುನೇಶ್ವರನ ದೇವಸ್ಥಾನದಲ್ಲಿ ಪೂಜೆ ಮಾಡಿಸಿ.. ಅಲ್ಲಿದ್ದ ಹುಂಡಿಗೆ ಧಾರಾಳವಾಗಿ ಹಣ ಹಾಕಿ ಅಡ್ಡಬಿದ್ದು ಬೇಡಿಕೊಂಡನು.




ಅವತ್ತೇ ಸಂಜೆ ಕೆಂಚಪ್ಪನ ಚುನಾವಣಾ ಭಾಷಣ ಕೇಳುವ ಸುವರ್ಣ ಅವಕಾಶ ಅಲ್ಲಿ ಸೇರಿದ ಜನಸ್ತೋಮದ ಕಿವಿಗಳಿಗೆ ಒದಗಿ ಬಂದಿತ್ತು.!!

ಕೆಂಚಪ್ಪನ ಭಾಷಣದ ಒಂದು ಝಲಕ್ ಇಲ್ಲಿದೆ.

"ಹಣ್ಣ ತಮ್ಮಂದಿರೇ ಹಕ್ಕ ತಂಗೀರೆ, ತಮಗೆಲ್ಲ ಆದರದ ನಮಸ್ಕಾರಗಳು. ನಾನು ನಿಮ್ಮವನೇ ಆದ ಕೆಂಚಪ್ಪ, ನಿಮ್ಮ ಸೇವೆ ಮಾಡಲು ದೀನನಾಗಿ ಬಂದಿದ್ದೇನೆ. ತಾವು ನನಗೇ ಓಟು ಕೊಟ್ಟು ನನ್ನ ಗೆಲಿಸಿದರೆ, ನಿಮ್ಮ ಕಷ್ಟಗಳೆಲ್ಲ ನನ್ನ ಕಷ್ಟ ಹಂತ ತಿಳಿದು ನಿಮ್ಮ ಸೇವೆ ಮಾಡುತ್ತೇನೆ. ನೀವು ನನ್ನ ಕೆಂಚಾ ಹಂತ ಕರದ್ರೂ ಪರವಾಗಿಲ್ಲ..ನನಗೆ ಭೋ ಪ್ರೀತೀನೇ ಅದು. ನಾನು ಎಚ್ಚು ಓದಿದೋನಲ್ಲ, ಕಿತಾಪತಿ ಮಾಡಿದೋನಲ್ಲ, ನಿಮ್ಮ ಬಟ್ಟೆಗಳನ್ನು ಒಗೆದು ಇಸ್ತ್ರಿ ತೀಡಿ ಕೊಟ್ಟವನು ನಾನು. ನಾನು ಆಕಿದ ಈ ಬಿಳಿಯ ಬಟ್ಟೆಯಂತೆ ನನ್ನ ಮನಸೂ ಸುಭ್ರ.! ಈಗ

ಸ್ವತಂತ್ರ ಅಭ್ಯರ್ಥಿಯಾಗಿ ತಮ್ಮ ಮುಂದೆ ಬಂದಿವ್ನಿ, ನನ್ನ ಪರತಂತ್ರ ಮಾಡಬ್ಯಾಡಿ. ನಿಮ್ಮ ಅಮೂಲ್ಯ ಮತ ನನಗೇ ಇರಲಿ ಇನ್ನು ಸರಕಾರದ ಕೆಲಸ ದೇವರ ಕೆಲಸ ಆಗಬೇಕು. ಹಂದ್ರೆ, ಸರಕಾರದವರು ಗುಡಿಗುಂಡಾರ ಅಲ್ಲಲ್ಲಿ ಕಟ್ಟಿಸಿ, ನಮ್ಮ ಕೆಲಸ ಬೇಗ ಹಾಗಲಿ ಎಂದು ಪ್ರಾರ್ಥಿಸಬೇಕು. ಮೈಕಲ್ಲಿ ಅನುಮಾನ್ ಚಾಲೀಸಾ ಮೂರೊತ್ತು ಆಕಬೇಕು.ಅನುಮಾನವೇ ಇಲ್ಲ..ಕೆಲಸ ಆದಂಗೇ. ಜೈ ಅನುಮಾನ್!! ಇನ್ನು ಬಡತನ ನಿರ್ಮೂಲನೆ ಅಂತ ಒಂದು ಯೋಜನೆ ಮಾಡಿವ್ನಿ. ಎಲ್ಲ ಬಡವರನ್ನು ಒಂದೆಡೆ ಕರೆಸಿ ಅವರಿಗೆ ಪ್ರಶಸ್ತಿ ಪತ್ರ ಕೊಟ್ಟು, ಶಾಲು ಹೊದೆಸಿ ಸನ್ಮಾನ ಮಾಡುವುದು. ಇದರಿಂದಾಗಿ ಅವರು ಚಳಿಗಾಲದಲ್ಲಿ ನಡಗೋದು ತಪ್ಪುತ್ತೆ. ಅವರಿಗೆ ಖುಷೀನೂ ಹಾಗುತ್ತೆ. ಜೈ ಭಾರತ ಮಾತೆ, ಜೈ ಖನ್ನಡಾಂಬೆ, ನಾನಿನ್ನು ಬತ್ತೀನಿ. ನಿಮ್ಮ ಓಟು ನಂಗೇ ಮರೀಬ್ಯಾಡಿ.!! ಭಾರೀ ಕರತಾಡನ. ನಾನೂ ಜೋರಾಗಿ ಚಪ್ಪಾಳೆ ತಟ್ಟುತ್ತಲೇ ಇದ್ದೆ. ಮುಖದ ಮೇಲೆ ಚಾಮರ ಬೀಸಿದಂತಾಯಿತು. ಕಣ್ಣುಬಿಟ್ಟೆ ಕೆಲಸದ ನಿಂಗಮ್ಮ ಮುಖಕ್ಕೆ ಪೊರಕೆ ಸೇವೆ ಮಾಡಿದ್ದಳು. ಎದುರಿಗೆ ಕೆಂಚಪ್ಪ ತಾನು ಇಸ್ತ್ರಿ ಮಾಡಿ ತಂದ ಬಟ್ಟೆಸಮೇತ ನಿಂತಿದ್ದ.

"ಬುದ್ಧಿ ಎಲ್ಲಾ ಬಟ್ಟೆಗಳನ್ನು ಕಿಲೀನಾಗಿ ಇಸ್ತ್ರಿ ಮಾಡಿ ತಂದಿವ್ನಿ. ಇಲಕ್ಸನ್ ಬಂತು ಬುದ್ಧಿ, ನಿಮ್ಮ ಓಟು ಯಾರಿಗೆ? ಎಂದು ನಗೆ ಬೀರಿದನು. ■

**1951ರ ಚುನಾವಣಾ ಪ್ರಚಾರದಲ್ಲಿ ನೆಹರು ಹೋಗುತ್ತಿದ್ದಾಗ ಜನರು ಜವಹರಲಾಲ್ ನೆಹರು ಜಿಂದಾಬಾದ್ ಎಂದು ಕೂಗಿದರೆ ನೆಹರು ಹೊಸ ಹಿಂದೂಸ್ತಾನ್ ಜಿಂದಾಬಾದ್ ಎಂದು ಕೂಗಿ ಎಂದು ಹೇಳಿದರಂತೆ.**

# ಸಂಪಿಗೆಯೊ? ಮಲ್ಲಿಗೆಯೊ?

**ಪಾಲಹಳ್ಳಿ ವಿಶ್ವನಾಥ್**

ರೈಲು ಬೆಳಿಗ್ಗೆ 8 ಗಂಟೆಗೆ ಊರಿಗೆ ಬಂದು ಸೇರಲಿತ್ತು. ಊರಿನ ಖ್ಯಾತ ನಾಯಕ ಮೋಹನದಾಸ್ ಅವರು ರಾಜಧಾನಿಯಿಂದ ವಾಪಸ್ಸು ಬರಲಿದ್ದರು. ಎಲ್ಲರಿಗೂ ಕುತೂಹಲ! ಇಂದು ಅವರ ಕೊರಳಿನಲ್ಲಿ ಯಾವ ಹೂವಿನ ಹಾರ ಇರುತ್ತದೆ? ಸಂಪಿಗೆಯೇ? ಮಲ್ಲಿಗೆಯೇ? ಗೋಪಾಲದಾಸರು ತಾವು ರೈಲಿನಿಂದ ಇಳಿಯು ವಾಗ ತಮ್ಮ ಇತ್ತೀಚಿನ ಪಕ್ಷದ ಹೂವಿನ ಹಾರವನ್ನು ಹಾಕಿಕೊಂಡಿರುತ್ತೇನೆ ಎಂದು ಫೋನ್ ಮಾಡಿದ್ದರು ನಮ್ಮ ರಾಜ್ಯದಲ್ಲಿ ಎರಡು ರಾಜಕೀಯ ಪಕ್ಷಗಳು–ಸಂಪಿಗೆ ಮತ್ತು ಮಲ್ಲಿಗೆ–ಇರುವುದು ನಿಮಗೆ ಗೊತ್ತು. ಹಳೆಯವರನ್ನು ಕೇಳಿದರೆ ಹಿಂದೆ ಒಂದು ಕಾಲದಲ್ಲಿ ಸಂಪಿಗೆ ಪಕ್ಷ ಮಾತ್ರ ಇದ್ದು ಕೆಲ ಸಮಯದ ನಂತರ ಒಂದಿಬ್ಬರು ಕಾರ್ಲ್ ಮಾರ್ಕ್ಸ್ ಓದಲು ಶುರುಮಾಡಿದಾಗ ಮನಸ್ತಾಪಗಳು ಹುಟ್ಟಿಕೊಂಡು ಕೆಲವರು ಬೇರೆ ಹೋಗಿ ಮಲ್ಲಿಗೆ ಪಕ್ಷ ಹುಟ್ಟಿತಂತೆ. ಎರಡು ಗುಂಪುಗಳ ಆದರ್ಶಗಳಲ್ಲಿ ಮತ್ತು ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳು ಕಂಡುಬಂದರೂ ಆಚರಣೆಯಲ್ಲಿ ಅಷ್ಟೇನೂ ಬೇರೆ ಇರಲಿಲ್ಲ. ಚುನಾವಣೆಗಳಲ್ಲಿ ಕೆಲವು ಬಾರಿ ಸಂಪಿಗೆ, ಕೆಲವು ಬಾರಿ ಮಲ್ಲಿಗೆ ಗೆಲ್ಲುತ್ತಿತ್ತು. ಯಾವ ಚುನಾವಣೆಯಲ್ಲೂ ಯಾವ ಪಕ್ಷ ಖಚಿತವಾಗಿ ಬರುತ್ತದೆ ಎಂದು ಯಾರಿಗೂ ಹೇಳಲು ಬರುತ್ತಿರಲಿಲ್ಲ.


ಮೋಹನದಾಸರು ದೊಡ್ಡ ನಾಯಕರು. ಬಹಳ ಹೆಸರು ಮಾಡಿದವರು. ಕೆಲವೊಮ್ಮೆ ಕೇಂದ್ರದಲ್ಲಿ ಮಂತ್ರಿಯೂ ಆಗಿದ್ದರು. ಆದರೆ ಈ ಕಾಲದಲ್ಲಿ ಅಂತವರೂ ನಿಶ್ಚಿಂತೆಯಿಂದ ಇರಲು ಸಾಧ್ಯವಿಲ್ಲ. ಕೇಂದ್ರದ ನೇತಾರ ಜತೆ ಸಾಮರಸ್ಯದಿಂದ ಇರುವುದಲ್ಲದೆ ರಾಜ್ಯದ ರಾಜಕೀಯವನ್ನು ಹುಷಾರಾಗಿ ಗಮನಿಸುತ್ತಿರಬೇಕಾಗುತ್ತದೆ. ದೆಹಲಿಗೆ ಹೋಗಿ ಅಲ್ಲಿಯ ಹೈ ಕಮಾಂಡ್ ಅನ್ನು ಕಂಡುಬರುತ್ತಲೇ ಇರಬೇಕು. ತಿಂಗಳಿಗೆ ಒಂದು ಬಾರಿಯಂತೂ ದೆಹಲಿ ಪ್ರಯಾಣ ಮಾಡಬೇಕು. ಹೈ ಕಮಾಂಡು ನಮ್ಮ ಆಂಜನೇಯ ದೇವರ ತರಹ. ಹೂವು ಯಾವ ಕಡೆ ಬೀಳುತ್ತದೋ ಹೇಳಲಾರದು. ಗೋಪಾಲದಾಸರಿಗೆ ದೇಶಸೇವೆ ಮುಖ್ಯವಾಗಿದ್ದಿತು. ಆದ್ದರಿಂದಾಗಿ ಒಂದು ಪಕ್ಷ ಅವರನ್ನು ಕಡೆಗಣಿಸಿದಾಗ ಅದನ್ನು ಬಿಟ್ಟು ಇನ್ನೊಂದು ಪಕ್ಷಕ್ಕೆ ಹೋಗುತ್ತಿದ್ದರು. ಮತ್ತೆ ವಾಪಸ್ಸು ಬರುತ್ತಿದ್ದರು. ಅವರ ಧ್ಯೇಯವನ್ನು ತಿಳಿಯದೆ ಜನರು ಮತ್ತು ಮಾಧ್ಯಮದವರು ಅವರನ್ನು ದೂಷಿಸುತ್ತಿದ್ದರು. ಆದರೆ ದೇಶಸೇವೆಯೇ ಮುಖ್ಯವಾದ ಗೋಪಾಲದಾಸರು ಇಂತಹ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ದಪ್ಪ ಚರ್ಮದವನು ಎಂದು ಬಯ್ಯುವುವರು ಬಹಳ ಜನರು ಇದ್ದರೂ,

ಊರಿನವರು ಅವರನ್ನು ಗೆಲ್ಲಿಸುತ್ತಿದ್ದರು. ಈ ಬಾರಿ ಚುನಾವಣೆಗೆ ಗೋಪಾಲದಾಸರು ಯಾವ ಪಕ್ಷದಿಂದ ಸ್ಪರ್ಧಿಸುತ್ತಾರೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಸ್ವತ: ಅವರಿಗೇ ತಿಳಿಯದ ವಿಷಯ. ಈಗೇನೋ ಸಂಪಿಗೆ ಪಕ್ಷದಲ್ಲಿ ಇದ್ದರೂ, ಅವರಿಗೆ ಟಿಕೆಟ್ ಸಿಕ್ಕದಿದ್ದರೆ ಮಲ್ಲಿಗೆಗೆ ಹಾರುತ್ತಾರೆ ಎಂದು ಎಲ್ಲರಿಗೂ ಗೊತ್ತು. ಒಟ್ಟಿನಲ್ಲಿ ಸಾರ್ವಜನಿಕರಿಗೆ ಕುತೂಹಲ, ತಮಾಷೆ ಕೂಡ..

ಗೋಪಾಲದಾಸರಿಗಾಗಿ ಮೂರು ಗುಂಪುಗಳು ರೈಲ್ವೆ ನಿಲ್ದಾಣದಲ್ಲಿ ಕಾದಿದ್ದವು. ಒಂದು ಸಂಪಿಗೆ ಪಕ್ಷದವರು, ಇನ್ನೊಂದು ಮಲ್ಲಿಗೆ ಗುಂಪಿನವರು. ಗೋಪಾಲದಾಸರು ಮಲ್ಲಿಗೆ ಗುಂಪಿಗೆ ಸೇರಿದ್ದಾರೆ ಎಂದು ತಿಳಿದರೆ ಸಂಪಿಗೆ ಪಕ್ಷದವರು ಹೊರಗೆ ಹೋಗುವವರಿದ್ದರು. ಹಾಗೇ ಮಲ್ಲಿಗೆ ಪಕ್ಷದವರು ಕೂಡ ಮತ್ತೊಂದು ಗುಂಪು ಕೂಡ

ಇದ್ದಿತು. ಇದು ಗೋಪಾಲದಾಸರ ಸ್ವಂತ ಗುಂಪು; ನಗರ ಸಭೆ ಯ ಚುನಾವಣೆಗೆ ನಿಲ್ಲುತ್ತಿದ್ದ ಸಮಯ ದಿಂದ ಅವರ ಜೊತೆ ಇರುತ್ತಿದ್ದವರು . ಪ್ರತಿ ರಾಜಕಾರಣಿಗೂ ಕುಟುಂಬದ ತರಹ ಅವರದ್ದೇ ಎನ್ನುವ ಗುಂಪು ಒಂದು ಇದ್ದೇ ಇರುತ್ತದೆ. ಅವರವರ ಪಕ್ಷಗಳ ಬಳಿ ಅವರವರ ಬಾವುಟಗಳಿದ್ದವು. ಆದರೆ ಮೂರನೆಯ ಗುಂಪಿನಲ್ಲಿ ಎರಡೂ ಪಕ್ಷದ ಬಾವುಟಗಳಿದ್ದವು. ಏನಾಗುತ್ತದೆ ಎನ್ನುವ ಪ್ರಕಾರ ಕ್ಷಣಮಾತ್ರದಲ್ಲಿ ಯಾವ ಬಾವುಟವನ್ನುಬೇಕಾದರೂ ಮೇಲೆ ತರುತ್ತಿದ್ದರು .

ರೈಲು ಬಂದಿತು. ಮೋಹನದಾಸರು 2ನೆಯ ದರ್ಜೆಯ ಡಬ್ಬದ ಬಾಗಿಲ್ಲಿ ನಿಂತಿದ್ದರು (ಹಿಂದಿನ ನಿಲ್ದಾಣದ ತನಕ ಮೊದಲನೆಯ ದರ್ಜೆಯ ಡಬ್ಬದಲ್ಲಿದ್ದು ನಂತರ ಎರಡನೆಯ ದರ್ಜೆಯ ಡಬ್ಬಕ್ಕೆ ಹತ್ತುವುದನ್ನು ಎಲ್ಲ ರಾಜಕಾರಣಿಗಳೂ ಮಾಡುತ್ತಿದ್ದರು). ಎಲ್ಲರೂ ಕತೂಹಲದಿಂದ ನೋಡುತ್ತಿದ್ದರು. ಅವರ ಕೊರಳು ಬರಿದಾಗಿತ್ತು. ಯಾವ ಹೂವಿನ ಹಾರವೂ ಇರಲಿಲ್ಲ. ಜನರಿಗೆ ತಬ್ಬಿಬ್ಬಾಯಿತು. ಅವರು ಇಳಿದು' ನಾನು ಇಂದಿನಿಂದ ರಾಜಕೀಯದಿಂದ ನಿವೃತ್ತಿ ತೆಗೆದುಕೊಳ್ಳುತ್ತಿದ್ದೇನೆ' ಎಂದು ಘೋಷಿಸಿದರು. ಇದನ್ನು ಕೇಳಿದ ತಕ್ಷಣವೇ ಸಂಪಿಗೆ ಮತ್ತು ಮಲ್ಲಿಗೆ ಗುಂಪಿನ ವರೆಲ್ಲಾ ಹೊರಟು ಹೋದರು. ನಿಟ್ಟುಸಿರು ಬಿಡುತ್ತಾ ಗೋಪಾಲದಾಸ ನವರು ತಮ್ಮದೇ ಗುಂಪಿನ ಕಡೆ ನಡೆದರು. ಆದರೆ ಆ ಗುಂಪೂ ಚದುರತೊಡಗಿತ್ತು. ಕಡೆಗೆ ಗೋಪಾಲದಾಸರು ಒಬ್ಬರೇ ಆದರು. ■



# ಯಾರು ಬಂದ್ರೇನು

ಭೂಮಿತಾಯಿ

ಈ ಸಲೆ ಬಂದರೆ ಬರಲಿ, 'ಹೋಟ್' ಕೇಳಾಕ.. ವೋಟೂ ಲೆಕ್ಕ ವಸೂಲಿ ಮಾಡ್ತೀನಿ ಈರಮ್ಮ ತನ್ನ ಕಣ್ಣುಕಿರಿದು ಮಾಡಿ, ತನ್ನೆಲ್ಲ ಬೇಡಿಕೆಗಳೂ ಈಡೇರುವ ಹಟ ಮಾಡಿಯೇ ತೀರ್ತೀನಿ ಅನ್ನೂಹಂಗ, ತನ್ನ ಮೋಟು ಸೆರಗಿನ ಚುಂಗು, ಸೊಂಟದ ಬದಿಗೆ ಸಿಗಿಸಿಕೊಂಡು ದೇವಮ್ಮಗ ಹೇಳಿದ್ಲು.

ಹೊಗ್ಗ ನಮ್ಮವ್ವ.. ಈ ಊರಿಗೆ ಸೊಸಿಯಾಗಿ ಬಂದಾಗಿಂದಲೂ ಶೆಟ್ರು ಮನಿ ಕೊಡ್ತೀನಿ ಅಂದ್ರು, ಮನೀಗೆ ನೀರು ಕೊಡ್ತೀನಿ ಅಂದ್ರು, ಮನಿ ಮುಂದ ದಾರಿ ಮಾಡ್ತೀವಿ ಅಂದ್ರು.. ಜೀವನಾನ ಹಳ್ಳ ಹಿಡದೈತಿ ಇಲ್ಲಿ.. ನೀ ಏನು ಹೊಸಾದು ಕೇಳ್ತಿ...

ಅಲ್ಲಬೇ.. ಕುಲಕರ್ಣ್ಯಾರು ಬಂದ್ರರೇ ಏನು ಮಾಡೋರು? ನೀರು ಬರ್ತಾವಲ್ಲ.. ಮನೀತನಾ ಏನು.. ಮಳಿ ಬಂದ್ರ ಮನ್ಯಾಗ ನೀರು ಬರ್ತಾವ. ಕುಂತಲ್ಲೇ ಮುಕಳಿಸ್ಯೆತ ತೊಳದು ಹೋಗುವಷ್ಟು ನೀರು ಬರ್ತಾವ. ದಾರಿ ಮಾಡಿದ್ದಕ್ಕ ಹಳ್ಳದ ದಾರಿಗೆ ಹೋಗೂ ನೀರು, ಮನೀಗೆ ಬರ್ತಾವ.. ಮತ್ತೇನು ಮಾಡಂತಿ ನೀ ಅವರಿಗೆ..?

ಹೌದ್ದರೆ ಮಗಳ.. ನಿನ್ಹಂಗ ಹೇಳೋರು ಸಿಗಬೇಕು ನೋಡವಾ.. ಶೆಟ್ರು, ಕುಲಕರ್ಣ್ಯಾರು ಯಾರು ಬಂದ್ರೂ, ಯಾರು ಹೋದ್ರೂ.. ನಮಗೇನು ತಣ್ಣನೆಯ ನೆಳ್ಳು ಸಿಗೂಹಂಗ ಮಾಡೂದಿಲ್ಲ ಅನ್ನೂದೆ ಖರೆಯದ. ಆದ್ರ ಐದು ವರ್ಷಕ್ಕ ಒಮ್ಮೆ ಮಾರಿ ತೋರಸಾಕ ಬರ್ತಾರಲ್ಲ.. ಯಾವ ಮಾರಿ ಇಟ್ಕೊಂಡು ಬರ್ತಾರಂತ...

ಎಲ್ಲಾ ಮಾರಿನೂ ಅದೇ ಮಾರಿ ಇಟ್ಕೊಂಡು ಬರ್ತಾರ.. ಪಾಪ ನೋಡೀರಿಲ್ಲ.. ಒಂದೊಂದು ಬಾಯಿ ಕಿವಿತನಾ ಅಗಲಾಗಿರ್ತಾವ.. ಕಣ್ಣಾಗ ಜೀವ ಹಿಡ್ಕೊಂಡಂಗ ಆಗಿರ್ತಾರ, ಮೊಣಕಾಲು ನಡ್ಯಾಕ ಒಲ್ಲೆ ಅಂತಿರ್ತಾವ.. ಆದ್ರೂ ಎತ್ಕೊಂಡು ಎತ್ಕೊಂಡು ನಡಕೊಂಡು ಬರ್ತಾರ, ತಾವ ನಡಿಯೂದು ಆಗಲಿಕ್ರೂ ದೇಶಾ ನಡಸ್ತೇವಿ ಅಂತ ಬರ್ತಾರ.. ನನಗರೆ ನಮ್ಮಜ್ಜ ಸಣ್ಣೋರಿದ್ದಾಗ ಮುಂಗಲಿ ಮುಂಗಲಿ ಮಾರಿ ತೋರಸು, ಕಂಡೋರಿಗೆಲ್ಲ ಮುಕಳಿ ತೋರಸು ಅಂತಿದ್ದ.. ಹಂಗ ಅನಸ್ತದ ಈ ನಾಯಕರು..

ಹಂಗಲ್ಲವಾ.. ಮುಂಗಲಿ ಅನ್ನೂದು ಮಂಗಲಿ ಅನ್ಕೊಂಡು ಹಾಡಾಕ ಆ ಹುಡುಗೀನ್ನ ಕರಸ್ತಾರ.. ಹುಡಗೀನ್ನೂ ಕರಸ್ತಾರ, ಹುಡಗ್ರನ್ನೂ ಕರಸ್ತಾರ.. ಅವರು ಬಂದೋರು ಊರ ತುಂಬಾ ಗದ್ಲಾ ಹಾಕಿ, ಕೈ ಮುಗದು, ಕಾಲ್ಮುಣಿಸಿ, ಮುತ್ತು ಉದುರಿಸಿವ ಹಂಗ ಮಾತಾಡಿ, ಕೈ ಮುಗುದು ಹೋಗ್ತಾರ.. ಕೈ ಮುರದು ಕಳಸಬೇಕು ಅನಸ್ತದ ಈರಮ್ಮ...

ಇರಲಿಬಿಡವಾ ನೀ ಯಾಕ ಈರಭದ್ರನ ರೂಪ ತಾಳ್ತಿ.. ಅಲ್ಲ ಮತ್ತ.. ಬೇಡೂಮುಂದಷ್ಟ ಕೈಮುಗದು, ಕೈ ಒಡ್ಡೋರ ಕೈಗೋಳು, ಕೆಲಸ ಮಾಡಂದ್ರ ಬ್ಯಾನಿ ಬರ್ತದ. ಬಟಬ್ಯಾನಿ ಬಂದಂಗ ಮಾಡ್ತಾರ.. ಇವರಿಗೆ ಯಾಕ ಬೇಕು ಕೈ ಅಂತೇನಿ..

ಇರಲಿ ಬಿಡು ತಾಯಿ, ನಿನ್ನ ಬಟ್ಟಿಗೆ ಶಾಯಿ ಒತ್ತೂಮುಂದ ವಿಚಾರ ಮಾಡಿದ್ರ ಆಯ್ತು..

ಮಂಗ್ಯಾ.. ವಿಚಾರ ಮಾಡಾಕ ಏನಿರ್ತದ? ವೋಟು ಹಾಕೂ ಮುಂದ, ಆಟೂ ಈಟೂ ಸಿಟ್ಟು ಬರೂದಿಲ್ಲ.. ಆ ಮಾರಿ ನೋಡಿದ್ರ ಯಾರಿಗೂ ತಿರುಗಿ ನೋಡಬಾರದು ಅನಸ್ತದ.. ಆದ್ರೂ ಹಾಕಬೇಕಂದಾಗ ಕುರುಡ್ರೊಳಗ ಮೆಳ್ಳು ಶ್ರೇಷ್ಠ ಅಂತಾರಲ್ಲ.. ಹಂಗ

ಯಾರಿಗರೆ ಒತ್ತಿ ಬರ್ತೀನಿ.

ಏನು ಮಾಡೂದು.. ನಮ್ಮ ಹಿರಿಯಾ ಅಲ್ಲಿ ಚಿತ್ರ ತೋರಿಸಿ, ಇದಕ್ಕೇ ಒತ್ತಿ ಬರಬೇಕು ಅಂತ ಹೇಳ್ತಾನ. ಅಗ್ದಿ ಪ್ರೀತಿಲೆ ಹೇಳ್ತಾನ..

ಯೇ ಯವ್ವಾ.. ನನ್ಗಂಡನ ಸುದ್ದಿ ಏನಂತಿ ನೀ.. ಸಕ್ಕರಿ ಪಾಕದಾಗ ನಾಲಗಿ ಅದ್ದಿ ಮಾತಾಡಿದ್ಹಂಗ ಹೇಳ್ತಾನ ತಂಗಿ.. ಈಟು ವರ್ಷ ನಾಲಗ್ಯಾಗ ಮುಚ್ಚು ಮುಚ್ಚಿಟ್ಕೊಂಡೋರಹಂಗ ಒದರಾಡ್ತಿದ್ದ.. ಈಗ ಮಾತ್ರ ಈ ದಿನಗಳು ಬಂದು ಅಂದ್ರ ಸಾಕು.. ಅಗ್ದಿ ಪ್ರೀತಿಲೆ.. ಈ ಸಾಯೇಬ್ರು ಹಂಗ, ಆ ಕಳ್ ನನ್ಮಗ ಹಂಗ ಅಂತ ಸುದ್ದಿ ಹೇಳೂದೆ ಹೇಳೂದು.. ಅವೊತ್ತಂತೂ ತಾ ಹೇಳಿದ್ದೇ ಕೇಳಬೇಕು ಅಂತ ಗಿಳಿಗೆ ಹೇಳಿದ್ಹಂಗ ಹೇಳ್ತಾನೆ ಇರ್ತಾನ..

ದರಸಲಾ ಬ್ಯಾಸಗ್ಯಾಗ ವ್ಹೋಟಿಗೆ ಬರ್ತಾರ.. ಮಾವಿನಕಾಯಿ ಶುರು ಆದಾಗ ಬರ್ತಾರ. ಹಣ್ಣಾಗೂತನಾನೂ, ಮಾಗೂತನಾನೂ ಮಾತು ಮೂಗಿನತಾ ಬರ್ತಾವ. ಉಗಾದಿಗೆ ಉಗಿ ಉಗಿಯಾಗುಷ್ಟು ಬಿಸಿಲು ತಾಕಿದ್ರೂ, ಮಾವಿಗೆ ಬಂಗಾರ ಬಣ್ಣ ಬರ್ತದಂತ ಸುಮ್ನಿರ್ತೇವಿ. ಸುಮ್ನ ತಡಕೋತೇವಿ. ಆದ್ರ ನಾವು ತಡಕೋಳೂದು ಭಾಳಾಗೇದ. ಅದಕ್ಕೇ ಮಿರ್ಗಾ ಕುಂತಮ್ಯಾಲಿನ ಹಣ್ಣಿನಾಗ ಹುಳಾ ಬರೂಹಂಗ, ಇವರ ತಲ್ಯಾಗೂ ಹುಳಾ ಬರ್ತಾವ. ನಮಗ ಆಳಾಗಿ ದುಡೀತೇವಿ, ನೀರು, ನೆಲಿ, ದಾರಿ ಕೊಡ್ತೀವಿ ಅಂದೋರು ಆಳಾಕ ಶುರು ಮಾಡ್ತಾರ.

ನಮ್ಮ ದಾರಿ ಮರೀತಾರ, ದೇವರು ಮಳಿ ಸುರಸಿದ್ರ ನೀರು.. ಇನ್ನ ನೆಲಿಯಂತೂ ಕೇಳೂದೆ ಬ್ಯಾಡ. ಯಾವಾಗ ಎಲ್ಲಿ ಗುಳೇ ಹೋಗ್ತೀವಿ ಗೊತ್ತಾಗೂದಿಲ್ಲ. ಇದ್ಯಾವುದೂ ಬ್ಯಾಡ ತಗೀಬೆ.. ಮನೀ ದಗದಾ ಮುಗಸೂನು.. ಇವರೇನು ಬರದಾಗ ಅಧಿಕ ಮಾಸ ಬಂದಂಗ ಅವಾಗವಾಗ ಬರ್ತಾರ ಹೋಗ್ತಾರ. ನಾವು ನಮ್ಮ ಹಾಸಿಗಿಯೊಳಗ ಮುದುರುಕೊಳ್ಳೋದು ಕಲೀಬೇಕು ಅಷ್ಟೇ... ಚಾದರ ಒದ್ದು ಮಲಗೂದೆ ದೊಡ್ಕನಸಾಗೇದ ಈಗ. ಯಾರು ಬಂದ್ರೇನು, ಹೋದ್ರೇನು.. ಪಿಸ್ಸ...

■



# ಎಲೆಕ್ಷನ್ ಮೇನಿಯಾ!

**ಜಯಶ್ರೀ ದೇಶಪಾಂಡೆ**

"ನಾನೇ ಬೇಕೂಫ" ಕೈಗೆ ಕೈ ಗುದ್ದಿಕೊಳ್ತ ಸಿದ್ದೇಶಿ ಕನಲಿದ್ದ.

"ಅದು ಈಗ ಗೊತ್ತಾತೇನು"? ಅಂದೆ.

"ಅಲ್ಲಾ ಪಾರ್ಟಿ ಬಿಟ್ಟ್ ಹೋಗ್ತೀನಿ ಅಂತ ಹೇಳಬಾರ್ದೇನು ಅದೂ ನನಗ? ಜಾನೇ ದೋಸ್ತಗ ಹಾಂ?" ಗುರ್ ಗುರಾಯಿಸಿದ.

ಅವನ ಗಂಟುಬಿದ್ದ ಹಣೆ, ಕೆದರಿದ ಕೂದಲು, ಮಣ್ಣುಮಣ್ಣಾಗಿದ್ದ ಅಂಗಿ, ಕಾಲರ್ ಅಸ್ತವ್ಯಸ್ತ ...ಕಣ್ಣು ಕೆಂಪು, ಅವನ ಮಾರಿ ಕೆಂಪು ಹಳದೀ ಹಸರು ಎಲ್ಲಾ ಮಿಕ್ಸ್ ಮಾಡಿ ಹಚ್ಚಿದಂಥಾ ರಬ್ಬುರಬ್ಬು!

ಯಾಕೋ ಪರಿಸ್ಥಿತಿ ನೆಟ್ಟಗಿಲ್ಲ ಅಂತ ಹೇಳಿತು.

"ಈಗೇನಾತು ಅವನ ಜೋಡಿ ಹೊಡದಾಡಿ ಬರ್ಲಿಕ್ಕತ್ತೀಯೇನು!"

ಅಂವ ಅಂದರೆ ಸಿದ್ದೇಶಿಯ ಚಡ್ಡಿ ದೋಸ್ತ್ ಚನ್ನೇಶಿ.

ಇಬ್ಬರೂ ಹತ್ತು ವರ್ಷದಿಂದ 'ರೊಟ್ಟಿ ಚಟ್ನಿ' ಪಾರ್ಟಿಯ ಸದಸ್ಯರು. ಪ್ರತಿಸರೆ ಇಲೆಕ್ಷನ್ ಬಂದಾಗ ಇಬ್ಬರೂ ಕೈ ಕೈ ಕೂಡಿಸಿ ಹಗಲೂ ರಾತ್ರಿ ದುಡಿದು ತಂತಮ್ಮ ಮನಿಮ್ಯಾಲೆ ಒಂದೊಂದು ಮಾಳಿಗಿ ಏರಿಸಿಕೊಂಡವರು!

ಈಗ ಸಡನ್ನಾಗಿ ಚನ್ನೇಶಿ ಶಲ್ಲೇದ ಬಣ್ಣಾ ಬದಲಾಯಿಸಿ ಕಣ್ಣುರೆಪ್ಪಿ ಮಿಟುಕಿಸೋದರೊಳಗಾಗಿ ಹೋಗಿ "ತಂಬೂರಿ" ಪಾರ್ಟಿಗೆ

ಸೇರ್ಕೊಂಡು ಎಮ್ಮೆಲ್ಲೆ ಆಗಲಿಕ್ಕೆ, ಮದಿವೀ ವರಾ ತಯಾರಾದಂಗ ಆಗಿ ನಿಂತರ ಸಿದ್ದೇಶಿಗೆ ಬ್ರಹ್ಮಾಂಡ ಸಿಟ್ಟು ಬಂದಿದ್ದರ ಸಹಜೀಕ ಅದ!

"ಛೇ ಛೇ.." ಅನಬೇಕಾಯ್ತು.

"ಮತ್ತೇನು? ನಾಚಿಕಿಲ್ಲಾದಂವ ಪಾರ್ಟಿ ಬಿಟ್ಟು ಬ್ಯಾರೆ ಕಡೆ ಹೋಗ್ತೀನಿ ಅಂತ ಹೇಳಲೇ ಇಲ್ಲ ನನಗ..."

ಮತ್ತದೇ ಪೀಪಿ.

"ಅಲ್ಲೋ ಹೇಳಿದ್ರ ಏನ್ ಮಾಡಾಂವಿದ್ದಿ ನೀ?

"ಏನ್ ಮಾಡಾವ್ನ? ನಾನೂ ಹೋಗ್ತಿದ್ನೆಲಾ ಅವನ ಜೋಡೀ...ದೋಸ್ತಿಗೆ ಧೋಕಾ ಮಾಡ್ಯಾನ ಮಗಾ.."

ತೊಗೊಳ್ರಿ! ಸಿದ್ದೇಶಿಗೆ ಭಯಂಕರ ಸಿಟ್ಟು ಬಂದ ಕಾರಣ! ತನಗೂ ಆ ಪಾರ್ಟಿಗೆ ಹೋಗುವ ಅವಕಾಶ ತಪ್ಪಿದ ಸಿಟ್ಟು..

"ಯೇ ತಲಿ ಕೆಟ್ಟೇನು ನಿಂಗ? ಏನ್ ಮಾತಾಡ್ತೀ, ಇಲೆಕ್ಷನ್ ಆಂದರ ಎಲ್ಲಾರೂ ತಂತಮ್ಮ ಹಿತಾ ನೋಡ್ಕೋಳವ್ರೆ"

ಅವನ ಲಕ್ಷ್ಯ ಇರಲೇ ಇಲ್ಲ ಇತ್ತಕಡೆ.

"ಇನಾ ಇಲ್ಲ ಇನ್ನ ಮ್ಯಾಲೆ ಕೆಡ್ತದ.." ಅಂದ ಸಿದ್ದೇಶಿ

"ಹೌದ? ಹಂಗಾರ ಏನ್ ಮಾಡಾಂವಿದ್ದೀ?"

"ಅವನ ಡಿಪಾಜಿಟ್ ಮುಣಗಸ್ತೀನಿ ನೋಡ್ತಿರ್ರಿ"

"ಅಂದರ? ನೀನ ಅವನ ವಿರುದ್ಧ ನಿಲ್ಲಾವೇನು ಎಲೆಕ್ಷನ್ನಿಗೆ?"

"ಮತ್ತಿನ್ನೇನು?"

ಆಸಾಮಿ ಜಬರ್ದಸ್ತ್ ಕ್ರೋಧದೊಳಗಿತ್ತು. ಹೇಳಿ ಕೇಳಿ ಕ್ರೋಧಿ ನಾಮ ಸಂವತ್ಸರ! ಎಲೆಕ್ಷನ್ ಮೇನಿಯಾ ಸಡಗರದಿಂದ ಹಬ್ಬಲಿಕ್ಕತ್ತಿತ್ತು.

ಪುಢಾರಿಗಳು ಭರದಿಂದ ಆ ಪಾರ್ಟಿ ಈ ಪಾರ್ಟಿಗೆ ಆಯಾರಾಮ್ ಗಯಾರಾಮ್ ಆಟಾಡಲಿಕ್ಕೆ ಸುರು ಮಾಡಿದ್ರು. ಆ ಮೇನಿಯಾದೊಳಗ ಚನ್ನೇಶಿಯೂ!

ಅಲ್ಲಾ, ಅಂತಂಥಾ ಭರಭಕ್ಕಮ್ ಲೀಡರ್ ಗಳೇ ಇದ್ದ ಪಾರ್ಟಿ ಒದ್ದೊಗೆದು ಚಕ್ಕಂತ ಜಿಗದು ಇನ್ನೊಂದು ಪಾಳೆಯಕ್ಕ ಹೊಕ್ಕು ಅದರದೇ ಝಂಡಾ ಹಾರಿಸಿಗೋತ ಓಡ್ಯಾಡುವಾಗ ನಮ್ಮ ಈ ಮಿನಿ ಮಿನಿ ಸಿಕ್ಕಾಗಳಿಗೆ ಆ ಹಕ್ಕು ಇಲ್ಲೇನು?

ಬಟ್ ಬಟ್ ಬಟ್ ಇಷ್ಟು ತಿಳಕೊಂಡೇ ಬಂದಿದಾನಲಾ ಇಂವ?

"ಎಲೆಕ್ಷನ್ ಮೇನಿಯಾ ತಲಿಗೇರಿತು ಅಲ್ಲೇನು?"

ಬಲಗೈಗೂ ಬಲಗೈಯಿಂದ ಎಡಗೈಗೂ ಗುದ್ದಿಕೊಳ್ಳುತ್ತ

"ಯಾವ್ಯಾವದೋ ಮೇನಿಯಾ ಇರುವಾಗ ಇಲೆಕ್ಷನ್ ಮೇನಿಯಾ ಯಾಕಿರಬಾರ್ದು?" ಅಂದ. "ಯಾಕಿರ್ಬಾರದು ಇರಬೇಕಿರಬೇಕು?" ಅಂದೆ.

ಪ್ರತಿ ಸಲ ಚುನಾವಣೆ ಬಂದಾಗ ಈ 'ಮೇನಿಯಾ' ಸುನಾಮಿಯಷ್ಟು ಸ್ಪೀಡಾಗಿ ಪ್ರತ್ಯಕ್ಷ ಆಗುವುದು ಖರೆ. ಅಲ್ಲ, ಈ ಜ್ವರ ಬರೂದು ಐದು ವರ್ಷಕ್ಕೊಮ್ಮೆ ಅಂತಿಲ್ಲ. ಐದನೇ ಕ್ಲಾಸ್ ಮಾನಿಟರಿಂದ ಸುರುವಾಗೋ ಎಲೆಕ್ಷನ್ ಐದು ಇಂಟು ಇಪ್ಪತ್ತು– ಅಲ್ಲಿಗೆ ನೂರು ವರ್ಷಕ್ಕೂ– ನಿಂತು ಗೆದ್ದು ಬರೋ ಹುಕಿ ತರುವ ಭಯಂಕರ ಕಾವಿನ ಜ್ವರ!

ನಮ್ಮ ಕತ್ರಿಕಾಲೂರಿಗೆ ಕಡೆಗೂ ಚುನಾವಣೆ ಬಂದೂ ಬಂತು..ಜಿದ್ದಾಜಿದ್ದಿ, ಮಾರಾಮಾರಿ–ಅದು ಅಗತ್ಯ, ಅನಿವಾರ್ಯ ಮತ್ತು ಅದಿಲ್ಲದೇ ಅದೇನು ಚುನಾವಣೇರೀ?– ಸ್ಪರ್ಧೆ ಎದ್ದೂ ಆಯ್ತು. ಅಂತಿಂಥಾ ಸ್ಪರ್ಧಾ ಅಲ್ರೀ 'ತ್ರಿ'ಕೋಣ' ಸ್ಪರ್ಧೆ ಏರ್ಪಟ್ಟಿತು...ಹಾಂ.ಹಾಂ ಕೆಂಪು ತ್ರಿಕೋನ ಅಲ್ಲ..ಬಣ್ಣ ಯಾವುದರೆ ಇಟ್ಕೊಳ್ರಿ ..ಕೆಂಪು ಬಿಟ್ಟು ಅಷ್ಟೆ!

ಮೂರೂ ಪಾರ್ಟಿ ಯಾವುದು ಅಂತ ಕೇಳಿದಿರಾ? 'ಸ್ಯಾಂಡಲ್ ಪಾರ್ಟಿ, (ಚಿಹ್ನೆ, ಚಪ್ಪಲಿ) 'ರೊಟ್ಟಿ ಚಟ್ನಿ ಪಾರ್ಟಿ' (ಚಿಹ್ನೆ, ಕೆಂಪುಚಟ್ನಿ)

ಮತ್ತ 'ತಂಬೂರಿ' ಪಾರ್ಟಿ

(ಚಿಹ್ನೆ, ಜೋಳಿಗಿ)

ಇಲೆಕ್ಷನ್ ಡೇಟ್ ಅನೌನ್ಸ್ ಆಯ್ತು.

ಜೀಪು, ಕಾರು, ಸಭಾ, ಮೈಕು, ಪಾಂಪ್ಲೆಟ್ಟು, ಸೋಶ್ಯಲ್ ಮೀಡಿಯಾ ಹುಚ್ಚೆದ್ದು ಹರಿದಾಡಿದವು.

ಊರೊಳಗ ಮತ್ತ ಸುತ್ತಮುತ್ತಲ ಇದ್ದಂಥಾ ಎಲ್ಲಾ ಮರಾ ಬೋಳಿಸಿ ಕಡಿದು ತಿಂದು ತೇಗಿದ ನಂತ್ರ

ಊರೊಳಗೆ ಉಳಿದಿದ್ದ ಏಕೈಕ ಆಲದ ಮರದ ಕಟ್ಟೆ ಚುನಾವಣಾ ಚಟುವಟಿಕೆಗಳಿಗೆ 'ದಮ್ಮಯ್ಯ ಬಿಡ್ರೊ ನನ್ನ ನಾನೊಬ್ನರೆ ಉಸಿರಾಡ್ಕೊಂಡು ಇರ್ತೀನಿ' ಅಂತ ಅಂಗಲಾಚಿದ್ದನ್ನ ಕ್ಯಾರೇ ಅನ್ದೆ ಚುನಾವಣೆ ಮತ್ತದರ ಹಿಂದೇನೇ ಭೀಕರ ಭಾಷ್ಣ, ಕೆಟ್ಟ ಬೈಗಳ ಪ್ರವಾಹ, ಚಾಲೇಂಜು ಎಲ್ಲಾ ಮಘಿ ಮಳಿ ಬಂದ ಹಾಂಗೆ ದಬದಬಾಯಿಸಿ ಸುರಿಯಲಿಕ್ಕೆ ಆರಂಭಾತು.

ಆತು..ಎಲೆಕ್ಷನ್ನೂ ಬಂತು ಮತ್ತ ಮುಗದು ಹೋತು.

ರೊಟ್ಟಿ ಚಟ್ನಿ ಪಾರ್ಟಿ ಮತ್ತ ತಂಬೂರಿ ಪಾರ್ಟಿ ಇಬ್ಬರದೂ ಅರ್ಥಾತ್ ಸಿದ್ದೇಶಿ, ಚನ್ನೇಶಿ ಇಬ್ಬರದೂ ಡೆಪಾಸಿಟ್ ಮುಳುಗಿದ್ದೂ ಸ್ಯಾಂಡಲ್ ಪಾರ್ಟಿ ಪುಢಾರಿ ಗೆದ್ದದ್ದೂ ಆತು!

ಈಗ ನಿಮಗೆಲ್ಲಾ ಬೆಕ್ಕು, ಬೆಣ್ಣೆ, ಕೋತಿ ಮತ್ತ ತಕ್ಕಡಿ ಕಥಿ ನೆನಪಾದ್ರೆ ಇದು ಅದೇ ಹೌದು. ■

# ಹದಿನೆಂಟನೇ ಲೋಕ

ಜಿ.ವಿ.ನಿರ್ಮಲ

'ಒಂದು, ಎರಡು,...ಹತ್ತು,... ಹದಿನೇಳು, ಉಂ...ಅಬ್ಬಬ್ಬಾ! ಹದಿನೇಳು ಲೋಕಗಳನ್ನು ಕಂಡಿದ್ದೀವಲ್ವಾ. ನಿಜಕ್ಕೂ ನಾವೇ ಅದೃಷ್ಟವಂತ್ರು.' ಎಂದು ಹನ್ನೆರಡು ಜ್ಯೋತಿರ್ಲಿಂಗಗಳನ್ನೂ ಒಟ್ಟಿಗೆ ನೋಡಿ ಧನ್ಯಳಾದಂತೆ ಉಸಿರೆಳೆದುಕೊಂಡಳು ಸ್ವರ್ಣಗೌರಿ.

ಅಷ್ಟರಲ್ಲಿ ಬಂದ ಪತಿ ಪರಮೇಶ್ವರ ಉರುಫ್ ಪರಮ 'ಏನು ಮಾತೇ ಸ್ವರ್ಣ? ಕೈಲಾಸವಾಸಿ ಪರಮೇಶ್ವರನೇ ಹದಿನಾಲ್ಕು ಲೋಕಗಳನ್ನ ಕಂಡ ಅಂತ ಸ್ವಾಮಿಗಳು ಕಥೇಲಿ ಹೇಳಿದ್ರು. ನೀನ್ಹೇಗೆ ಹದಿನೇಳು ಲೋಕಗಳನ್ನ ನೋಡ್ದಿ.? ನಂಗೂ ಸ್ವಲ್ಪ ಅರ್ಥ ಮಾಡ್ಸು ತಾಯಿ'.

'ಅಬ್ಬಬ್ಬಾ! ನಿಮ್ಗೆ ಸದಾಕಾಲ ಸ್ವಾಮಿಗಳದ್ದೇ ಸ್ಮರಣೆ. ನಾವೂ ಏನೇನೋ ಯೋಚ್ನೆ ಮಾಡ್ತೀವಿ. 'ಹೆಣ್ಮಕ್ಳೇ ಸ್ಟ್ರಾಂಗು ಗುರು' ಅನ್ನೋ ಮಾತು ಕೇಳಿಲ್ವಾ? ಭಾರತದ 'ರೋವರ್' ಚಂದ್ರನ ಮಡಿಲು ಸೇರಕ್ಕೂ ಹೆಣ್ಮಕ್ಳು ಹಿಂದೆ ನಿಂತು ನೂಕಿದ್ದೇ ಕಾರಣ. ತಿಳೀತಾ? ನಾನು ಹೇಳಿದ್ದು ಈ ಬಾರೀದು ಲೋಕ ಸಭೆಗೆ ಹದಿನೆಂಟನೆಯ ಚುನಾವಣೆ. ಅಂದ್ರೆ ಭಾರತ ಹದಿನೇಳು ಲೋಕಸಭೆಗಳನ್ನು ಕಂಡಿದೆ'.

'ಓ ಹಾಗಾ? ಹೌದ್ಹೌದು, ಲೋಕ ಸಮರ, ಲೋಕ ಸಮರದಲ್ಲಿ ಯಾವ ಪಕ್ಷಕ್ಕೆ ಜಯ. ಹಾಗೆ, ಹೀಗೆ ಅಂತ ಸುದ್ದಿಗಳಲ್ಲಿ ಹೇಳ್ತಾನೇ ಇರ್ತಾರೆ. ಆದ್ರೆ ಇಷ್ಟರ ಮಟ್ಟಿಗೆ ನೀನು ಅದ್ರಲ್ಲಿ ಮುಳುಗ್ಹೋಗಿರ್ತಿ ಅಂತ ನನ್ನ ಚುರುಕು ಬುದ್ಧಿಗೂ ಹೊಳೀಲಿಲ್ವಲ್ಲಾ!'

'ಅದ್ಯಾಕೆ? ನಂಗೂ ಮತ ಚಲಾಯ್ಸೋ ಹಕ್ಕಿದೆ. ಎಲ್ಲಾ ತಿಳ್ಕೊಳ್ತಾ ಇದೀನಿ. ಗೊತ್ತಾ...?' ಎಂದಳು ಭೈರವಿ ರಾಗದಲ್ಲಿ ಪಟ್ಟು ಹಾಕಿ.

'ಓಟು ನಮ್ಮೆಲ್ಲರ ಹಕ್ಕು. ಖಂಡಿತ ಓಟು ಕೊಡು ತಾಯಿ. ಆದ್ರೆ, ನಿನ್ನ ಓಟು ಯಾರಿಗೆ? 'ಶಾಂತಂ ಪಾಪಂ' ಅದು ಗುಪ್ತ್, ಗುಪ್ತ್ ಅಲ್ವಾ? ನಾನು ಕೇಳ್ಲೂ ಬಾರ್ದು; ನೀನು ಹೇಳೋಹಾಂಗೂ ಇಲ್ಲ. ಆದ್ರೆ, ನಿನ್ನ ಓಟು ಸೈಕಲ್ಲಿಗೋ? ಟ್ರಾಕ್ಟರ್ಗೋ? ಸೀರೆಗೋ? ಕುಕ್ಕರ್ಗೋ? ಟೀವಿಗೋ? ಮತ್ಯಾವುದಕ್ಕೋ ಎಂದು ಕೇಳ್ಬಹ್ದು ಅಲ್ವಾ?'

'ಆಹಾ, ನಿಮ್ಮ ಜಾಣ್ತನವೇ? ನಾನು ಹಾಗೆಲ್ಲಾ ಓಟು ಹಾಕಲ್ಲಪ್ಪ. 'ಮತ ಪವಿತ್ರ' ಅಂತ ಬೀದಿ ದಾಸಯ್ಯಾನೂ ಹೇಳ್ತಾನೆ. ನಿಮ್ಮ ಕಥೆ ಸ್ವಾಮಿಗ್ಳೇ ಆಗ್ಬೇಕಿಲ್ಲ. ನಾನು ಅವೆಲ್ಲಾ ತೊಗೊಳೋ ಜಾತೀನೇ? ನಿಮ್ಗೆ ನನ್ನ ಬಗ್ಗೆ ಅಷ್ಟೂ ಗೊತ್ತಿಲ್ವಾ?'

'ರಾಮ, ರಾಮ. ನಾನು ಕೇಳಿದ್ದೂ ಹಾಗಲ್ವೇ ಅಲ್ಲ ಮಾರಾಯ್ತಿ. ಯಾವ ಗುರುತಿಗೆ ನಿನ್ನ ಮತ ಅಂತ ಕೇಳ್ದೆ ಅಷ್ಟೆ. ನೀನು ತಪ್ಪು ತಿಳ್ಕೊಂಡ್ರೆ ಅದು ನಿನ್ನ ತಪ್ಪು ಸ್ವರ್ಣ. ಅಂದ್ಹಾಗೆ ನೀನೇ ಸ್ವರ್ಣ ಅಲ್ವಾ? ನಿಂಗ್ಯಾಕೆ ಮತ್ತೊಬ್ಬರ ಹಂಗು? 'ನೀನ್ಯಾಕೋ ನಿನ್ನ ಹಂಗ್ಯಾಕೋ. ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದು ಇಷ್ಟ ದೇವರ ನಾಮ ಜಪಿಸಿ ಅಂತ ಸ್ವಾಮಿಗ್ಳು ಕಥೇಲಿ ಹೇಳಿದ್ದು ನಂಗೆ ಚೆನ್ನಾಗಿ ನೆನಪಿದೆ.'

'ನಿಮ್ಗೆ ಯಾವಾಗ್ಲೂ ಆ ಸ್ವಾಮಿಗಳ ಮಾತೇ ಕಿವೀಲಿ ಮೊಳಗ್ತಾ ಇರತ್ತೆ. ಹೋಗ್ಲಿ ಆ ನಿಮ್ಮ ಸ್ವಾಮಿಗ್ಳು ಹದಿನಾಲ್ಕು ಲೋಕಗಳ ಹೆಸರನ್ನಾದ್ರೂ ಹೇಳಿದ್ದು ನೆನಪಿದ್ಯಾ ನಿಮ್ಗೆ? ಹೇಳಿ ನೋಡೋಣ?' ಎಂದು ಸವಾಲೆಸೆದಳು.

'ಆಂ.., ಹಾಗೆಲ್ಲಾ ಎಣಿಸ್ಕೊಂಡು, 'ಬೈ ಹಾರ್ಟ್' ಮಾಡಿ, ನಾನೇನು ಪರೀಕ್ಷೆ ಪ್ಯಾಸ್ ಮಾಡ್ಬೇಕಾ? ಏನೋ, ಆರು ಲೋಕಗಳು ಮೇಲೆ, ಏಳು ಕೆಳಗಿರೋ ಪಾತಾಳ

ಲೋಕಗಳು ಅಂತ ಹೇಳಿದ ನೆನಪು. ಸರೀನಾ?'

'ಅಯ್ಯೋ, ನಿಮ್ಮ ಲೆಕ್ಕದಂತೆ ಹದಿಮೂರೇ ಆಯ್ತಲ್ಲಾರೀ? ಮತ್ತೊಂದು ಲೋಕ ಎಲ್ಹೋಯ್ತು?'

'ಆಂ , ಹೌದಲ್ವಾ ಇನ್ನೊಂದು, ಅದೂ ದೊಡ್ಡ ಲೋಕ ಎಲ್ಹೋಯ್ತು' ಎಂದು ಕಕ್ಕಾಬಿಕ್ಕಿಯಾದ ಪರಮೇಶಿ.

'ಅಯ್ಯೋ ಬಿಡಿ. ಹಾಗ್ಯಾಕೆ ಪೇಚಾಡ್ತಿದೀರ? ಅದು ಈಗ ನಾವಿರೋ ಭೂಲೋಕವಲ್ವೇ?' ಎಂದು ತನಗೆ ತಿಳಿಯದ್ದೇನಿದೆ ಎನ್ನುವಂತೆ ನಕ್ಕಳು ಹೆಮ್ಮೆಯಿಂದ.

'ಅದಿರ್ಲಿ ನಾವು ಮೇಲೂ ಹೋಗ್ದೆ, ಪಾತಾಳ ಲೋಕಕ್ಕೂ ಹೋಗ್ದೆ ಇಬ್ಬಂದೀಲಿರೋ ಹಾಗೆ, ಮತ ಕೂಡ ಯಾರಿಗೆ ಹಾಕ್ಬೇಕು ಅಂತ ಇಬ್ಬಂದಿ ಆಗ್ತಾ ಇದ್ಯಲ್ಲಾ? ಮಾರಾಯ್ತಿ. ಚುನಾವಣೆ ಬಂದೇ ಬಿಡ್ತು. ಯಾರಿಗೆ ಓಟು ಹಾಕೋದು?' ಮತ್ತೆ ಪೇಚಾಡಿದ ಪರಮೇಶಿ.

'ನೀವೊಬ್ರೇ ಏನ್ರೀ? ನಿಮ್ಮಂತೆ ಎಷ್ಟೋ ಜನ ಅಡಕೆ ಕತ್ರೀಲಿ ಸಿಕ್ಹಾಕೊಂಡಿದ್ದಾರೆ.. ಹಾಡೇ ಬರ್ತಾ ಇದ್ಯಲ್ಲಾ?

ಯಾವನಿಗ್ ವೋಟ್ಹಾಕೋದೋ ಗೊತ್ತಾಗ್ತಾ ಇಲ್ಲ

ಹಂಗಂತ ಸುಮ್ನೆ ಕೂತ್ರೆ ತಪ್ಪಾಗ್ತದಲ್ಲ

ಅಂತ ಕೇಳಿಲ್ವಾ?'

'ಓ, ನಮ್ಮ ಭಟ್ರ ಹಾಡು. ಮಾರಾಯ ಸಖತ್ತಾಗೇ ಬರ್ದೀದಾರೆ.'

'ಓ, ಇಂಥ ಹೊತ್ನಲ್ಲಿ, ಕವಿಗಳು, ವ್ಯಂಗ್ಯ ಚಿತ್ರಕಾರರು, ಸುದ್ದಿ ಮಾಧ್ಯಮದವ್ರು, ಅವ್ರು, ಇವ್ರು ಎಲ್ಲಾರ ಕಣ್ಣೂ ಚುನಾವಣೆ ಮೇಲೆ ಇರತ್ತಲ್ವಾ? ಮತ್ಯಾರೋ ಹೇಳಿದ್ದಾರಲ್ರೀ. 'ಹೆಲ್ಮೆಟ್ ಹಾಕದಿದ್ರೆ ತಲೆ ಉರುಳತ್ತೆ. ಸರಿಯಾದ ವ್ಯಕ್ತಿಗೆ ಓಟು ಹಾಕದಿದ್ರೆ ದೇಶಾನೇ ಉರುಳತ್ತೆ' ಅಂತ ಸ್ವರ್ಣನ ಮತ್ತೊಂದು ವರಸೆ.

'ಏನೇನೋ ಹೇಳಿ ನನ್ನ ತಲೆ ಕೆಡಿಸಿ, ಹುಳ ಬಿಟ್ಬಿಟ್ಟೆ ಸ್ವರ್ಣ. ಈಗ್ಲಾದ್ರೂ ಹೇಳು. ನಿನ್ನ ಮತದ ವಿಚಾರ ಬೇಡ, ನನ್ನ ಮತ ಯಾರಿಗೆ ಹಾಕ್ಲಿ?'

'ಒಂದು ಕೆಲ್ಸ ಮಾಡಿ. ಮತಗಟ್ಟೆಗೆ ಹೋಗಿ, ಓಟಿಂಗ್ ಮೆಶೀನ್ ಮುಂದೆ ಹೋಗಿ ಕಣ್ಣು ಮುಚ್ಕೊಂಡು ನಿಂತ್ಕೊಳ್ಳಿ. ಕಥೆ ಸ್ವಾಮಿಗಳ್ನ ನೆನಪು ಮಾಡ್ಕೊಂಡು, 'ನೀನ್ಯಾಕೋ . ' ಎಂದು ಗುಣುಗುಟ್ಟುತ್ತಾ, ಕೈಯ್ಯಾಡಿಸುತ್ತಾ ಒಂದು ಗುಂಡಿ ಒತ್ತಿ ಬಿಡಿ. ಆ ಸ್ವಾಮಿಗಳೇ ನಿಮ್ಮ ಕೈಲಿ ಒತ್ಸಿದ್ರೂ ಒತ್ತಿಸ್ತಾರೆ'.

'ಓ, ನಿನ್ನ ಪ್ರಕಾರ ಯಾವ ಗುಂಡಿ ಬೇಕಾದ್ರೂ ಒತ್ತಿ. ಬೀಳೋದು ಗುಂಡೀಗೆ ಅಂತಾನಾ? ಅದೂ ನಿಜಾನೇ. ಗುಂಡಿಗೆ ಇದ್ದೋರು ಉಮೇದುವಾರರಾಗಿ ನಿಲ್ತಾರೆ. ನಮ್ಮಂತ ಅಮಾಯಕರು ನೆಟ್ಟಗಾಗದಿದ್ರೆ ತಲೆಕೆಳಗಾಗಿಯಾದ್ರೂ ಯಾವ್ದಾರ ಗುಂಡೀಗೆ ಬಿದ್ದೇ ಬೀಳ್ತೀವಿ'.

'ನೋಡಿದ್ರಾ ಕಥೆ ಸ್ವಾಮಿಗಳಿಂದ ಎಷ್ಟು ಉಪಕಾರ ಆಗತ್ತೆ' ಎಂದು ನುಡಿದ ಸ್ವರ್ಣ ಹದಿನೆಂಟನೆಯ ಲೋಕ ಸಮರದಲ್ಲಿ ತಾನೇ ಗೆದ್ದಂತೆ ಬೀಗಿದಳು. ■

**ಭಾರತದಲ್ಲಿ ಪ್ರಥಮವಾಗಿ ಚುನಾವಣಾ ಆಯೋಗ ರಚನೆಯಾದದ್ದು ಮತ್ತು ಪ್ರಥಮ ಚುನಾವಣಾ ಕಮೀಷನರ್ – ಸುಕುಮಾರ ಸೇನ್**

# ಇಗೋ ಬಂತು ಚುನಾವಣೆ

ಗಾಯತ್ರಿ ಮೂರ್ತಿ

ಚುನಾವಣೆ ಬಂತೆಂದರೆ ರಾಜಕಾರಿಣಿಗಳು ಮೈಕೊಡವಿ ಎಚ್ಚೆತ್ತುಕೊಳ್ಳುವ ಸಮಯ ಬಂತೆನ್ನಬೇಕು.. ಅವರಿಗೆ ಇಲ್ಲಿಯವರೆಗೆ ತಾವು ಆರಿಸಿಬಂದ ಕ್ಷೇತ್ರದ ಬಗ್ಗೆ ಮೂಡಿದ್ದ ಮರೆವಿನ ಮುಸುಕುಸರಿದು, ಕ್ಷೇತ್ರದಬಗ್ಗೆಎಲ್ಲಿಲ್ಲದ ಕಾಳಜಿ ಮೂಡುತ್ತದೆ., ಅಲ್ಲಿನ ಹಿತರಕ್ಷಣೆಗೆ ಏನೇನು ಮಾಡಬೇಕು ಎಂದೆಲ್ಲಾ ಆಶ್ವಾಸನೆ ನೀಡಬಹುದೆಂದು ಯೋಚಿಸುತ್ತಾರೆ. ಆದರೆ ಚುನಾವಣೆಗೆ ನಿಲ್ಲಲು ಪಕ್ಷದಿಂದ ಟಿಕೆಟ್ ಸಿಗಬೇಕಲ್ಲಾ? ಒಂದು ವೇಳೆ ತಮ್ಮಕ್ಷದಿಂದ ಟಿಕೆಟ್ ಸಿಗದಿದ್ದರೇನಂತೆ? ಬೇರೆ ಪಕ್ಷಕ್ಕೆ ಹಾರಬಹುದಲ್ಲ. ಹೀಗಾಗಿ ರಾಜಕಾರಿಣಿಗಳು ಕಪ್ಪೆಗಳಂತೆ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಕುಪ್ಪಳಿಸುವುದು ಸರ್ವೇಸಾಮಾನ್ಯ. ಅಂತಹವರ ನಿಷ್ಠೆಪಕ್ಷಕ್ಕೂ ಅಲ್ಲ, ದೇಶಕ್ಕಂತೂ ಅಲ್ಲವೇ ಅಲ್ಲ. ಸ್ವಹಿತನಿಷ್ಠೆ. ನೀವೇನಂತೀರಾ?

ಟಿಕೆಟ್ ದೊರಕಿದ ಕೂಡಲೇ ರಾಜಕಾರಿಣಿಗಳಿಗೆ ಮತದಾರ ಇಂದ್ರ, ಚಂದ್ರ, ದೇವೇಂದ್ರನಂತೆ ಕಂಡುಬರುತ್ತಾನೆ. ಅವನನ್ನು ಒಲಿಸಿಕೊಡು ತಾವು ಗೆಲುವು ಸಾಧಿಸಲು ಅವರು ಏನು ಮಾಡಲೂ ಸಿದ್ಧ.

ಇರಲಿ, ನನಗೆ ರಾಜಕಾರಣವೂ ತಿಳಿದಿಲ್ಲ, ರಾಜಕಾರಿಣಿಗಳ ಬಗ್ಗೆಯೂ ಹೆಚ್ಚು ತಿಳಿದಿಲ್ಲ. ಒಬ್ಬ ಸಾಮಾನ್ಯ ಪ್ರಜೆಯಾಗಿ ಚುನಾವಣೆ ಬಗ್ಗೆ ಅನುಭವಗಳನ್ನು ಹಂಚಿಕೊಳ್ಳುತ್ತೇನೆ.

ಇದು ಬಹಳ ಹಿಂದೆ ಅಂದರೆ ಇವಿಎಮ್ (ಎಲೆಕ್ಟೊರಲ್ ವೋಟಿಂಗ್ ಮೆಶೀನ್) ಬರುವ ಮೊದಲಿನ ಕತೆ. ಚುನಾವಣೆ ಸಮಯ. ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀದೇವಿಗೆ ಮತಪಟ್ಟಿಯಲ್ಲಿ ಹೆಸರು ಅವಳ ಸ್ವಂತ ಹಳ್ಳಿಯಲ್ಲಿತ್ತು. ಅವಳು ಒಂದು ವಾರದ ಮೊದಲೇ ಅಲ್ಲಿಗೆ ಹೋಗಬೇಕೆಂದು ರಜಾ ಕೇಳಿದಳು. ಒಂದು ವಾರ ರಜಾನಾ? ಅಷ್ಟು ದಿನ ಯಾಕೆಂದು ಕೇಳಿದರೆ. 'ಯಾಕೇಂದ್ರೆ ಬೆರೆಬೇರೆ ಪಕ್ಸದೋರು ಬಂದು ದುಡ್ಡು, ಸೀರೆ, ಕುಕ್ಕರು ಎಲ್ಲಾ ಕೊಡ್ತಾವ್ರಂತೆ. ನಾನು ಓಗ್ದಿದ್ರೆ ಅದೆಲ್ಲಾ ತಪ್ಪೋಯ್ತದೆ ನಂಗೆ, ಅಷ್ಟೇಯಾ? ಎಂದಾಗ ನಾನು ಸರಿ, ನಿನ್ನ ಲಾಭಕ್ಕೆ ನಾನ್ಯಾಕೆ ಕಲ್ಲಾಕ್ಲಿ? ಎಂದು ಹೇಳಿ ಅವಳನ್ನು ಕಳುಹಿಸಿದೆ. ಚುನಾವಣೆ ಮುಗಿದ ಮೇಲೆ ಶ್ರೀದೇವಿ ಬಂದಳು. ಬಂದಳು. 'ಅವರೆಲ್ಲರಹತ್ರ ದುಡ್ಡು, ಸೀರೆ, ಕುಕ್ಕರ್ರು ಅಂತ ಇಸ್ಕೊಂಡೆಯಲ್ಲ? ಯಾರಿಗೆ ವೋಟುಹಾಕ್ದೆ? ಎಂದಾಗ ಅವಳು ಅವಳು, 'ನಾನು ಯಾರಿಗೂ ಮೋಸ ಮಾಡ್ನಿಲ್ಲಕಣವ್ವಾ. ಎಲ್ಲರ ಪಕ್ಷದ ಚಿತ್ರದ ಮುಂದೆ ಸೀಲ್ ಒತ್ಬಿಟ್ಟೆ' ಎಂದಳು. ಅಯ್ಯೋ, ನಿನ್ನವೋಟು ವೇಸ್ಟ್ ಆಯ್ತು. ನೀನು ಒಬ್ಬರ ಹೆಸರಿಗೆ ಮಾತ್ರ ಸೀಲ್ ಒತ್ಬೇಕು. ಯಾಕೆ, ಯಾರೂ ನಿಂಗೆ ಹೇಳ್ಲಿಲ್ವಾ?' ಎಂದೆ. ಎಲ್ಲರೂ ನಮ್ಮ ಪಕ್ಸಕ್ಕೇಸೀಲ್ ಒತ್ತು ಅಂದ್ರಲ್ಲ, ಅದ್ಕೇ, ಎಲ್ಲರ ಮಾತೂ ಕೇಳ್ಬುಟ್ಟೆ. ನಂಗೆ ತಿಳಿನಿಲ್ಲ,,' ಎಂದು ಸಪ್ಪೆಮುಖ ಮಾಡಿದಳು. ಆಗ ನನಗೆ ಅವಳು ಹೊರಡುವ ಮುನ್ನ, ಬ್ಯಾಲೆಟ್ ಪೇಪರ್ ಬಗ್ಗೆ ಸರಿಯಾದ ಮಾಹಿತಿ ನೀಡಿದ್ದರೆ ಹೀಗಾಗುತ್ತಿರಲಿಲ್ಲ ಎನ್ನಿಸಿ ವ್ಯಥೆಯಾಯಿತು.

ಇದು ನನ್ನ ಅನುಭವ ಅಲ್ಲ. ನನ್ನ ಪತಿ ಹಳ್ಳಿಯೊಂದಕ್ಕೆ ಪ್ರಿಸೈಡಿಂಗ್ ಆಫೀಸರ್ ಆಗಿಕರ್ತವ್ಯ ನಿರ್ವಹಿಸಿದಾಗ ನಡೆದ ಘಟನೆ. ಆಗೊಬ್ಬ ಮತದಾರನ ಹೆಸರು 'ಕೋಳಿ' ಎಂದಿತ್ತು. ಇದೇನು ವಿಚಿತ್ರವಾಗಿದೆಯಲ್ಲಾ ಹೆಸರು, ಇರಲಿ ವಿಚಾರಿಸೋಣ ಎಂದು ನನ್ನ ಪತಿ ನಗುತ್ತಾ, 'ಏನಯ್ಯಾ, ನೀನು ಹುಂಜಾ ಅಲ್ವಾ? ಕೋಳೀಂತ ಯಾಕೆ ಹೆಸರಿಟ್ಕೊಂಡಿದೀಯಾ' ಎಂದರಂತೆ. ಆಗ ಅವನು, 'ಹುಂ, ಸೋಮಿ, ನಾನು

ಹುಂಜಾನೇಯಾ. ಆದರೆ ನಮ್ಮ ಹಳ್ಳೀಲಿ ಕೋಳಿಕುಯ್ಯೋದರಲ್ಲಿ ನನ್ನ ಮೀರಿಸೋರೇ ಇಲ್ಲ. ಅಷ್ಟುಬೇಗ ಕೂದು ರೆಡಿಮಾಡ್ತೀನಿ. ಅದ್ಕೆ ಎಲ್ರೂ ಕೋಳಿರಾಮ ಅಂತ ಕರೀತಾರೆ. ಆದರೆ, ಪಟ್ಟೀಲಿ ಹೆಸರು ಬರೆಯೋವಾಗ ರಾಮಬಿಟ್ಹೋಗದೆ, ಅಷ್ಟೆಯಾ.'ಎಂದನಂತೆ.




ಇದು 2014ರಲ್ಲಿ ಚುನಾವಣೆಯಾದ ಸಂದರ್ಭದಲ್ಲಿ ನಡೆದದ್ದು. ಚುನಾವಣೆ ಹಿಂದಿನ ದಿನ. ರಾತ್ರಿ ಹತ್ತು ಗಂಟೆ ಸಮಯ. ಮನೆಯವರೆಲ್ಲ ಹರಟುತ್ತಾ ಕುಳಿತಿದ್ದೆವು. ಕರೆಗಂಟೆ ಬಾರಿಸಿತು. ಈ ಹೊತ್ತಿನಲ್ಲಿ ಯಾರು ಬಂದರು? ಎಲ್ಲರಿಗೂ ಜಿಗ್ನಾಸೆ. ಸರಿ ನನ್ನ ಮಗ ವಿಕ್ರಮ್ ಬಾಗಿಲು ತೆರೆದ, ನೋಡಿದರೆ, ನಾಲ್ಕು ಹೆಂಗಸರು ನಿಂತಿದ್ದಾರೆ. ಯಾರು ನೀವು? ಎಂದು ವಿಕ್ರಮ್ ಕೇಳುತ್ತಿದ್ದಂತೆ ನನ್ನ ಪತಿಯೂ ಎದ್ದು ಬಾಗಿಲ ಬಳಿಹೋದರು. 'ಸರ್, ನಾವು ನಿಮ್ಮನೆ ಎದುರಿಗೆ ಇರೋ ಸ್ಕೂಲಿನ ಬೂತ್ನಲ್ಲಿ ಎಲೆಕ್ಶನ್ ಡ್ಯೂಟಿ ಮಾಡಕ್ಕೆ ಬಂದಿದೀವಿ. ನಮಗೆ ಮಲಗಲು ಜಾಗ ಇಲ್ಲ, ಬಾತ್ ರೂಮ್ ಫೆಸಿಲಿಟಿ ಸಹ ಸರಿಯಾಗಿಲ್ಲ. ದಯವಿಟ್ಟು ರಾತ್ರಿ ನಿಮ್ಮ ಮನೆಯಲ್ಲಿರಲು ಜಾಗಕೊಡಿ,' ಎಂದು ಅವರಲ್ಲೊಬ್ಬಳು ಕೇಳಿದಳು. ಅವರನ್ನು ನಂಬುವುದೋ, ಬಿಡುವುದೋ?' ಸರಿ, ತಂದೆ ಮಗ ಮಾತನಾಡಿಕೊಂಡು ಅವರೊಂದಿಗೆ ಮನೆಯೆದುರಿನ ಬೂತ್ಗೆ ಹೋಗಿ ನೋಡಿದರು. ಅಲ್ಲಿಕಾವಲಿದ್ದ ಪೊಲೀಸ್, 'ಸಾರ್, ಇವರಿಗೆ ದಯವಿಟ್ಟು ಸಹಾಯ ಮಾಡಿ. ಇಲ್ಲಿ ಯಾವ ಅನುಕೂಲವೂ ಇಲ್ಲ. ಪಾಪ, ಹೆಂಗಸರು ತೊಂದರೆಪಡ್ತಾರೆ' ಎಂದಾಗ ನಾವು ಅವರಿಗೆ ಮಲಗಲು ಅನುಕೂಲ ಮಾಡಿಕೊಟ್ಟೆವು. 'ಈ ಬೀದಿಯಲ್ಲಿ ಐದಾರು ಮನೆಗಳ ಬಾಗಿಲು ತಟ್ಟಿದೆವು. ಯಾರೂ ಬಾಗಿಲು ಸಹತೆಗೆಯಲಿಲ್ಲ. ನಿಮಗೆ ಹೇಗೆ ಧನ್ಯವಾದ ಹೇಳಬೇಕೋ ತಿಳಿಯದು' ಎಂದಾಗ, ನನ್ನ ಪತಿ, ನಾನೂ ಎಲೆಕ್ಶನ್ ಡ್ಯೂಟಿ ಮಾಡಿದವನೆ. ನನಗೆ ಹೆಂಗಸರ ಕಷ್ಟತಿಳಿಯುತ್ತದೆ' ಎಂದರು. ಹಿಂದಿನ ದಿನ ರಾತ್ರಿಯೇ ಗೀಜರ್ ಸ್ವಿಚ್ ಹಾಕಿ, ಅವರಿಗೆ ಬಿಸಿ ನೀರು ಸ್ನಾನ ಮಾಡುವಂತೆ ತಿಳಿಸಿದೆವು. ಮರುದಿನ ಅವರು ಐದು ಗಂಟೆಯ ವೇಳೆಗೇ ಸ್ನಾನ ಮಾಡಿ, ಹೊರಡುವ ವೇಳೆಗೆ ಅವರಿಗೆ ಬಿಸಿಬಿಸಿ ಕಾಫಿ ಕೊಟ್ಟಾಗ ಅವರಿಗೆ ಪರಮಾನಂದ. ನಮಗೆ ಧನ್ಯವಾದ ತಿಳಿಸಿ ಅವರು ತಮ್ಮ ಕರ್ತವ್ಯ ನಿರ್ವಹಣೆಗೆ ಹೊರಟರು. ನಾವು ಮತದಾನ ಮಾಡಲು ಹೋದಾಗ, ಅವರೆಲ್ಲ ಎದ್ದು ನಿಂತು ನಮ್ಮನ್ನು ಸ್ವಾಗತಿಸಿದಾಗ ನಮಗೆ ಅಪ್ಯಾಯವೆನಿಸಿತು.

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**ದಂನಆ**

- ✓ ದಿ ಪ್ರಾಬ್ಲಮ್ ವಿತ್ ಪೊಲಿಟಿಕಲ್ ಜೋಕ್ಸ್ ಈಸ್ ದೆ ಗೆಟ್ ಎಲೆಕ್ಟೆಡ್.
- ✓ ನನ್ನ ಎದುರಾಳಿಗೆ ನನ್ನ ಆಫರ್: ನೀವು ನನ್ನ ಬಗ್ಗೆ ಸುಳ್ಳು ಹೇಳುವುದನ್ನು ನಿಲ್ಲಿಸಿದರೆ ನಾನು ನಿಮ್ಮ ಬಗ್ಗೆ ಸತ್ಯ ಹೇಳುವುದನ್ನು ನಿಲ್ಲಿಸುವೆ.
- ✓ ಕಣದಲ್ಲಿ ತುಂಬಾ ಮಂದಿ ಆಡಳಿತ ಪಕ್ಷದವರಿದ್ದಾರೆ; ತುಂಬಾ ಮಂದಿ ವಿರೋಧ ಪಕ್ಷದವರಿದ್ದಾರೆ. ಆದರೆ ಜನಗಳ ಪರವಾಗಿರುವವರು ಯಾರೂ ಇಲ್ಲ.
- ✓ ಬ್ಯಾಡ್ ಲೀಡರ್ಸ್ ಆರ್ ಸೆಂಟ್ ಟು ದೆಹಲಿ ಬೈ ಗುಡ್ ಪೀಪಲ್ ಹು ಡು ನಾಟ್ ವೋಟ್.
- ✓ ನಮ್ಮಲ್ಲಿ ಯಾರೇ ಬೇಕಾದರೂ ಸಂಸದರು/ಶಾಸಕರಾಗಬಹುದು. ಅದೇ ಸಮಸ್ಯೆ.
- ✓ ನೀವು ಅತ್ಯಂತ ಕಡುಬಡವರಿರಬಹುದು ಆದರೆ ಕೋಟ್ಯಧಿಪತಿಗೇ ವೋಟ್ ಹಾಕಿರುತ್ತೀರಿ.
- ✓ ನಮ್ಮ ಅನೇಕ ಮತದಾರರು ಐಪಿಎಲ್ ಟಿಕೆಟ್ಟಿಗಾಗಿ ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲುತ್ತಾರೆ ಆದರೆ ಅವರಿಗೆ ಮತದಾನ ಮಾಡಲು ಸಮಯವಿರುವುದಿಲ್ಲ.
- ✓ ಡೆಮಾಕ್ರಸಿ ಈಸ್ ಬೀಯಿಂಗ್ ಅಲೋವ್ಡ್ ಟು ವೋಟ್ ಫಾರ್ ದಿ ಕ್ಯಾಂಡಿಡೇಟ್ ಯು ಡಿಸ್‌ಲೈಕ್ ಲೀಸ್ಟ್.
- ✓ ದೇವರಿಗೆ ನಾವು ಮತದಾನ ಮಾಡಬೇಕು ಎಂದಿದ್ದರೆ ಅವನು ಒಳ್ಳೆಯ ಅಭ್ಯರ್ಥಿಗಳನ್ನೂ ಕೊಡುತ್ತಿದ್ದ.
- ✓ ಇಟ್ ಈಸ್ ಬೆಟರ್ ಟು ವೋಟ್ ಫಾರ್ ವಾಟ್ ಯು ವಾಂಟ್ ಅಂಡ್ ನಾಟ್ ಗೆಟ್ ಇಟ್ ದ್ಯಾನ್ ಟು ವೋಟ್ ಫಾರ್ ವಾಟ್ ಯು ಡೋಂಟ್ ವಾಂಟ್ ಅಂಡ್ ಗೆಟ್ ಇಟ್.
- ✓ ಎಲೆಕ್ಷನ್ಸ್ ಆರ್ ನಾಟ್ ಜಸ್ಟ್ ಅಬೌಟ್ ಹು ವೋಟ್ಸ್ ಬಟ್ ಹು ಡಸಂಟ್ ವೋಟ್.
- ✓ ದೇವರಲ್ಲಿ ನಂಬಿಕೆ ಇಟ್ಟಿರುವ ವ್ಯಕ್ತಿಗೆ ಮತ ಹಾಕುವ ಮುನ್ನ ಅವನಲ್ಲಿ ದೇವರು ನಂಬಿಕೆ ಇಟ್ಟಿದ್ದಾನೆಯೇ ಎಂಬುದನ್ನು ತಿಳಿದುಕೊಳ್ಳಿ.
- ✓ ವೋಟ್ ಫಾರ್ ದಿ ಮ್ಯಾನ್ ಹು ಪ್ರಾಮಿಸಸ್ ದಿ ಲೀಸ್ಟ್, ಹಿ ವಿಲ್ ಬಿ ದಿ ಲೀಸ್ಟ್ ಡಿಸಪಾಯಿಂಟಿಂಗ್.

■

# ಚುನಾವಣಾ !

ರಾಶಿ

ಚುನಾವಣಾ ಬಂತು ನಾಡಿಗೆ !
ಬಂತು ಬೀಡಿಗೆ !
ಬಂತು ಬೀದಿಗೆ!
ಚುನಾವಣಾ ಬಂತು !

ಕದಡಿ ಬಂತು ಚುನಾವಣಾ !
ಕುಣಿದ್ದಾಗ ರಾವಣ !
ಕುಣಿತಾವ ಗಾಳಿ !
ಜೈ ರವದ ರೂಪತಾಳಿ !


ಚುನಾವಣಾ ಬಂತು ಘಟ್ಟಕ್ಕ !
ರಾಜ್ಯ ಪಟ್ಟಕ್ಕ
ಬಾನಮಟ್ಟಕ್ಕ
ಏರಾದ ಮುಗಿಲು । ಭುವಿಕಾಣೆ ಹಾಡೆಹಗಲು ।

ಚುನಾವಣಾ ಬಂತು ಹೋಟಲಿಗೆ ।
ಅದೇ ಶುಭ ಗಳಿಗೆ ।
ಹೋಳಿಗೆ ಮತ್ತು ಕೋಳಿಗೆ
ಆಗ್ಯೇದ ಲಗ್ನ । ಅದರಾಗ ಜನರು ಮಗ್ನ ।

ಚುನಾವಣಾ ಬಂತು ಊರಿಗೆ ।
ಕೇರಿ ಕೇರಿಗೆ ।
ಹೊಡೆದ ರೋರಿಗೆ
ಜೋಕಾಲಿ ಏರಿ । ಅದುರಾವ ಕನಕ ಹಾರಿ ।

ಚುನಾವಣಾ ಬಂತು ಮನಿಮನಿಗೆ ।
ಕೂಡಿ ದನಿ ದನಿಗೆ ।
ಗೆಲುವ ದನಿ ಕೊನಿಗೆ
ಒಡೆದಾವ ಹಾಡೂ । ಕಸ ಉಕ್ಕತಾವ ನೋಡು ।

ಚುನಾವಣಾ ಬಂತು ॥ 1 ॥



ಜಟ್ಕ ತೊಟ್ಟಾನ ಪೋಸ್ಟರಿನ ಅಂಗಿ
ಕೆಸರ ನೋಡ ತಂಗೀ
ಹೊರಟಾವೆಲ್ಲೋ ಜಂಗಿ,
ಜಾತಿಗೇನೋ । ಹಣ್ಣಾದುವಲ್ಲೆ ತಾನೋ!

ಮನೆಗೋಡೆ ನೋಡು ಈಗ ಹ್ಯಾಂಗ
ಮದುವಿ ಮಗನ್ಹಾಂಗ
ತಲೆಗೆ ಬಾಸಿಂಗ
ಕಟ್ಟಿಕೊಂಡು ನಿಂತಾವ ಬೆದರಿಕೊಂಡು ।

ಬಲು ಸಿಟ್ಟ ಹಣಗಾರನ್ಹಾಂಗ
ನೆಲಾ ನಿಲೆ ಹ್ಯಾಂಗ
ಬರಿ ಮಸಿ ಬಳಿದ್ಹಾಂಗ
ಸೊಕ್ಕುತಾವ । ಇಂಗಾಲ ಕಕ್ಕುತಾವ ।

ಚೌಕ ಚೌಕ ಸಾವಿರ ಭಂಟ
ಅವಗೆಲ್ಲಾ ಆಣೆ ಎಂಟ
ಸುರಿತಾನೋ ನಿಂದ ನಂಟ
ಕೂಡ್ಯಾವ ಸಂತೆ । ಸುತ್ತೆಲ್ಲ ನೋಡ ನೋಡ ।

ನಾಡೆಲ್ಲ ಭೇರಿಯ
ಸಾರಿ ಹರಿತಾವ ಝುಽರಿ
ಮಾತನ್ನ ತೋರಿ
ಈಗ ಯಾಕಽ ಜನಕೆಲ್ಲ ಕುಡಿಸಲಾಕ ।

ಚುನಾವಣಾ ಬಂತು ॥ 2 ॥

ಜನದ್ಕುಲ ಹೂಡಿದ ಮೋಸ ।
ಕಟ್ಟ ನೂರು ವೇಷ
ಕೊಟ್ಟ ಸಂತ್ರಾಸ
ಕುಣಿಸ್ತದ । ತಾನಽನ ದಣಿತಾದ

ಚುನಾವಣಾ ಬಂತು ನಾಡಿಗೆ । ಬಂತು ಬೀಡಿಗೆ ।
ಬಂತು ಬೀದಿಗೆ । ಚುನಾವಣಾ ಬಂತು !

(ಶ್ರೀ ಬೇಂದ್ರೆಯವರಲ್ಲಿ "ಶ್ರಾವಣ'ದ ಕ್ಷಮಾಪಣೆಗಳೊಂದಿಗೆ)

---------




**ಪ್ರಥಮ ಚುನಾವಣೆಯಲ್ಲಿ ಅರ್ಹ ಮತದಾರರು 175 ಮಿಲಿಯನ್. ಅದರಲ್ಲಿ ಶೇಕಡಾ 80 ಅನಕ್ಷರಸ್ಥರು.**

# ಎಲೆಕ್ಷನ್ ಜ್ವರ

✍ಭುವನೇಶ್ವರಿ ಹೆಗಡೆ

ದೇಶದಲ್ಲಿ ಅಥವಾ ರಾಜ್ಯದಲ್ಲಿ ಎಲ್ಲೇ ಚುನಾವಣೆ ಘೋಷಣೆಯಾಯಿತು ಎಂದ ಕೂಡಲೇ ನಾಮಪತ್ರ ಸಲ್ಲಿಸುವ ಹುನ್ನಾರದಲ್ಲಿರುವ ಪುಢಾರಿಗಳಿಗೆ ಹಾಗೂ ಅವರ ಕುಟುಂಬದವರಿಗೆ ಒಂದು ಬಗೆಯ ಎಲೆಕ್ಷನ್ ಸನ್ನಿ ಮೈಗಡರಿಕೊಳ್ಳುವುದು ಎಲ್ಲರಿಗೂ ತಿಳಿದದ್ದೇ. ಆದರೆ ಎಲೆಕ್ಷನ್ ಜ್ವರ  ಎಂಬ ಒಂದು ಸರ್ಕಾರಿ ಜ್ವರ  ಚುನಾವಣಾ ಕರ್ತವ್ಯ ನಿರ್ವಹಿಸಲೇಬೇಕಾದ ಸರ್ಕಾರಿ ಅಧಿಕಾರಿಗಳಿಗೆ ಬರುವ  ಸಂಗತಿ  ಮತಗಟ್ಟೆಗೆ ತೆರಳಿ ಮತ ಒತ್ತಿ ಬರುವ ಮತದಾರ ರೆಲ್ಲರಿಗೂ ತಿಳಿದಿರುವುದಿಲ್ಲ.

ನಾನೂ ನನ್ನ ಉದ್ಯೋಗ  ಸಂಬಂಧೀ ಚುನಾವಣಾ  ಕರ್ತವ್ಯವೆಂಬ ಶಿಕ್ಷೆಯನ್ನು ಹಲವಾರು ಬಾರಿ ಅನುಭವಿಸಿದ್ದೇನೆ. ನಾನು ನಿವೃತ್ತಿ ಹೊಂದುವ ತನಕವೂ ಈ ಎಲೆಕ್ಷನ್ ಡ್ಯೂಟಿ ಎಂಬ ಸರ್ಕಾರಿ ಜ್ವರಕ್ಕೆ ಹೆದರಿ ಹೆದರಿ ನಿಜಕ್ಕೂ ಜ್ವರ ಬಂದಿದ್ದು ಎಷ್ಟೋ ಬಾರಿ. ಎಲೆಕ್ಷನ್ ಘೋಷಣೆಯಾಗುತ್ತಿದ್ದಂತೆ ಕಾಲೇಜಿನಲ್ಲಿ ಗುಸು–ಗುಸು ಬಿಸಿ ಬಿಸಿ ಸುದ್ದಿಗಳು ಶುರುವಾಗುತ್ತದೆ. "ಈ ಬಾರಿ ಎಲ್ಲರಿಗೂ ಡ್ಯೂಟಿಯಂತೆ, 55 ವರ್ಷ ಕಳೆದವರಿಗೆ ಇಲ್ಲ ಎಂಬುದು ಸುಳ್ಳು ಸುದ್ದಿಯಂತೆ. ಪ್ರಿನ್ಸಿಪಾಲರಿಗೆ ತೀರಾ ಆಪ್ತರಾದವರನ್ನು ಲಿಸ್ಟಿನಲ್ಲಿ ಸೇರಿಸುವುದೇ ಇಲ್ಲವಂತೆ ಒಮ್ಮೆ ಲಿಸ್ಟಿನಲ್ಲಿ ಹೆಸರು ಮೇಲೆ ಹೋಯಿತು ಅಂದ್ರೆ ಡ್ಯೂಟಿ ಬಂತೆಂದೇ ಅರ್ಥ." ಹೀಗೆ ಅವರವರ ಕೆಪ್ಯಾಸಿಟಿಯಲ್ಲಿ ಅವರವರು ಸುದ್ದಿ ಹಬ್ಬಿಸುತ್ತಿದ್ದರು. ಡಿ.ಸಿ ಕಂಡಾಬಟ್ಟೆ ಸ್ಟ್ರಿಕ್ಟ್ ಅಂತೆ. ಎಲೆಕ್ಷನ್ ಡ್ಯೂಟಿ ತಪ್ಪಿಸಿದವರಿಗೆ ಜೈಲೇ ಗತಿಯಂತೆ. ಈ ಅಂತೆ ಕಂತೆಗಳಲ್ಲಿ ಪೂರ್ಣ ವಿರಾಮ ದೊರಕುವುದು ಕೊನೆಗೂ ಆದೇಶ ಪತ್ರ ಕೈಗೆ ಸೇರಿದಾಗಲೇ. ಯಾರ್ಯಾರನ್ನು ಎಲ್ಲೆಲ್ಲಿ ಏನೇನು ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂಬ ವಿವರಗಳಿರುವ ಆದೇಶ ಪತ್ರದಲ್ಲಿ ಇಂತಹ ಹಳ್ಳಿಯ ಇಂತಹ ಶಾಲೆಯಲ್ಲಿ ನೀವು ಎರಡು ದಿನ ವಾಸಿಸತಕ್ಕದ್ದು. ಅಲ್ಲಿ ಏನಿದೆ ಯೋ, ಏನಿಲ್ಲವೋ ಎಂಬುದರ ಕುರಿತು ತಲೆಕೆಡಿಸಿಕೊಳ್ಳದೆ ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳತಕ್ಕಂತದ್ದು ಅದಕ್ಕೂ ಮೊದಲು ನಿಮಗೆ ನೀಡಲಾಗುವ ತರಬೇತಿಯನ್ನು ಗೊಣಗಾಡದೆ ತೆಗೆದುಕೊಳ್ಳುವುದು ಚುನಾವಣೆ ಮುಗಿಯುವವರೆಗೆ ಸಂಸಾರ ಮನೆ ಗಂಡ ಹೆಂಡತಿ ಮಕ್ಕಳು ಇತ್ಯಾದಿ ವೈಯಕ್ತಿಕ ಸಂಬಂಧಗಳನ್ನು ಮುನ್ನಡೆಗೆ ತರತಕ್ಕದ್ದಲ್ಲ. ನೀವು ನಿಮ್ಮ ಕರ್ತವ್ಯ ಎರಡೇ. ಮೂರನೇ ಮಾತಿಲ್ಲ ಎಂಬರ್ಥದ ಮುದ್ರಿತ ನೋಟಿಸ್ ನಮಗೆ ಬಂದ ದಿನ ಅಧಿಕೃತ ನಡುಕಕ್ಕೆ ಒಳಗಾಗುತ್ತಿದ್ದೆವು. ಇದರ ನಡುವೆ ನಮ್ಮ ಕಾಲೇಜಿನ ಅನೇಕ ಸಹೋದ್ಯೋಗಿಗಳಿಗೆ ಇಲ್ಲದ ವಿಶೇಷ ಅವಕಾಶವೊಂದು ನನಗೆ ಆಗಾಗ ದೊರೆತು ಬಿಡುತ್ತಿತ್ತು. ಎಲ್ಲೋ ವೇದಿಕೆಯ ಮೇಲೆ ಡಿಸಿ ಅವರೊಂದಿಗೆ ಭಾಷಣ ಮಾಡಬೇಕಾಗಿ ಬಂದಾಗ ಅವರನ್ನು ಚೆನ್ನಾಗಿ ಪರಿಚಯ ಆಗಿರುತ್ತಿತ್ತು. ನಂಬರ್ ಕೊಡಿ ಮೇಡಂ ನಮ್ಮ ಟ್ರೈನಿಗಳಿಗೆ ನಿಮ್ಮ ಮಾತುಗಳನ್ನು ಕೇಳಿಸಬೇಕು ಎಂದೇನು ಹೇಳಿದ ಅಧಿಕಾರಿಯ ಬಳಿ ಸರ್. ಏನಾದರೂ ಸಹಾಯ ಬೇಕಾದಾಗ ನಿಮ್ಮಲ್ಲಿ ಬಂದರೆ ಮಾಡಿ ಕೊಡುತ್ತೀರಲ್ಲ ಎಂಬ ಆಶ್ವಾಸನೆ ತೆಗೆದು ಕೊಂಡು ಬಿಡುತ್ತಿದ್ದೆ. ಖಂಡಿತ ಬನ್ನಿ ಮೇಡಂ ಎಂಬುದು ಅವರ ಉತ್ತರವಾಗಿರುತ್ತು. ಎಲೆಕ್ಷನ್ ಅಧಿಕೃತ ಕಾರ್ಯಗಳು ತರಬೇತಿಗಳು ಪ್ರಾರಂಭವಾಗುವ ಮೊದಲೇ ಒಮ್ಮೊಮ್ಮೆ ಅವರನ್ನು ಭೇಟಿ ಮಾಡಿದ್ದು ನನ್ನ ಹೆಸರನ್ನು ಗುಟ್ಟಾಗಿ ವರೆಸಿ ತೆಗೆಸಿ ಬಿಡುತ್ತಿದ್ದೆ. ಮತ್ತು ಕಾಲೇಜಿನಲ್ಲಿ ಎಂದಿನಂತೆ ಎಲ್ಲರೂ ಗೊಣಗಾಡುವಾಗ ನಾನು ಹೌದ್ರಿ ಎನ್ನುತ್ತಿದ್ದೆ ಒಬ್ರು ಲಿಸ್ಟಿನಲ್ಲಿ ಬಿಟ್ಟು ಹೋದರೆ ಯಾರೂ ಏನೂ ಅನ್ನುವಂತಿಲ್ಲ ಏನೋ ಮಿಸ್ಟೇಕ್ ಆಗಿರಬೇಕು ಎಂದು ತೀರ್ಮಾನಿಸಿ ಚರ್ಚೆಯನ್ನು ಕೊನೆಗೊಳಿಸುತ್ತಿದ್ದರು.

ಗೊಣಗೊಣ ಮಾಡಲು ಪುರುಸೊತ್ತಿಲ್ಲ. ಪೆಟ್ಟಿಗೆ ಕಟ್ಟಿ ಪ್ರಾಥಮಿಕ ಶಾಲೆಗಳಿಗೆ ಹೋಗಿ ಮಲಗಲು ಸಿದ್ದರಾಗಬೇಕಿತ್ತು. ಕೆಲಬಾರಿ ನನ್ನ ಯಾವುದೇ ಪ್ರಯತ್ನಗಳು ಫಲಿಸದೆ ಎಲೆಕ್ಷನ್ ಡ್ಯೂಟಿ ಮಾಡಲೇಬೇಕಿತ್ತು.

ಸ್ವಾರಸ್ಯಕರ ಅನುಭವಗಳನ್ನು ಒದಗಿಸುತ್ತಿದ್ದ ಈ ಚುನಾವಣಾ ಕರ್ತವ್ಯ ಜೀವನ ದರ್ಶನವನ್ನು ಮಾಡಿಸಿದ್ದೂ ಇದೆ. ದೂರದ ಯಾವುದೋ ಹಳ್ಳಿಯ ಶಾಲೆಗೆ ಮುಂಚಿನ ದಿನವೇ ನಮ್ಮ ಪಡೆ ಹೊರಡುತ್ತಿತ್ತು. ಚುನಾವಣಾ ಅಧಿಕಾರಿ ಯ ಜವಾಬ್ದಾರಿಗಳು ಸಂಬಂಧಪಟ್ಟ ಸರಕುಗಳ ಕೀ ಗೊಂಚಲು, ಸೀಲುಗಳು ನಮ್ಮ ಕೈಯಲ್ಲಿದ್ದರೆ ನಮ್ಮ ಜೊತೆ ಇರುವ ಉಪ ಅಧಿಕಾರಿಗಳು ಸಹಾಯಕ ರೂ ಹೀಗೆ ಏಳೆಂಟು ಜನರ ಒಂದು ಗುಂಪು ಒಂದು ಶಾಲೆಗೆ ಹೋಗಿ ಇಳಿಯುತ್ತಿದ್ದೆವು. ಅಲ್ಲಿರುವ ಬೆಂಚುಗಳನ್ನ ಟೇಬಲ್ ಗಳನ್ನು ಜೋಡಿಸಿ ಆ ರಾತ್ರಿ ಕಳೆಯಲು ಒಂದೆರಡು ಹಲಗೆಗಳನ್ನು  ಜೋಡಿಸಿ ಇಟ್ಟು ಮಲಗುವ ವ್ಯವಸ್ಥೆ ಮಾಡಿಕೊಂಡು ಮರುದಿನ ಬೆಳಿಗ್ಗೆ 5:30 ಗೆಲ್ಲ ಸಿದ್ದರಾಗಿ  ಅಣಕು ಮತದಾನ ನಡೆಸಬೇಕಿತ್ತು. ಅದನ್ನೆಲ್ಲ ನಮ್ಮ ತರಬೇತಿಗಳಲ್ಲಿ 100 ಬಾರಿ ಕಲಿಸಿರುತ್ತಾರೆ. ಅದರಿಂದ ಯಾರಿಗೂ ಅಡಚಣೆ ಗಳಿಲ್ಲದೆ ತಯಾರಿಗಳು ನಡೆಯುತ್ತಿದ್ದವು. ಶೌಚಾಲಯಗಳು ಸ್ನಾನಕ್ಕೆ ವ್ಯವಸ್ಥೆ ಇರುವ ಶಾಲೆಗಳು ಸಿಕ್ಕ ದಾಖಲೆ ಇಲ್ಲ. ಊರಲ್ಲಿ ಯಾವುದೋ ಮನೆ ಆಫೀಸು ಇದ್ದರೆ ಪೂರ್ವ ಜನ್ಮದ ಪುಣ್ಯ. ಇಲ್ಲವಾದರೆ ಚುನಾವಣಾ ಸಿಬ್ಬಂದಿಗಳ ಗತಿ ದೇವರಿಗೇ ಪ್ರೀತಿ. ಉಪ ಅಧಿಕಾರಿಗಳಿಂದ ಕೆಲಸ ತೆಗೆಯುವ ಜಾಣ್ಮೆ  ಸಹಾಯಕರುಗಳಿಂದ ಕಾಲಾನುಕಾಲಕ್ಕೆ ಬೇಕಾದ ಚಹಾ ಕಾಫಿ ತಿಂಡಿ ತರಿಸಿಕೊಳ್ಳುವ ಜಾಣತನ ಇದ್ದವರು ತಮ್ಮ ಚುನಾವಣಾ ಕರ್ತವ್ಯವನ್ನು ಮುಗಿಸಿಯೂ ನಗುನಗುತ್ತ ವಾಪಸ್ ಆಗಿದ್ದನ್ನು ಕಂಡಿದ್ದೆ. ಆದರೆ ಈ ವಿಷಯಗಳಲ್ಲಿ ಸ್ವಲ್ಪ ವೀಕ್ ಇದ್ದವರ  ಪಡಬಾರದ ಪಡಿಪಾಟಲುಗಳು ಒಂದರಡಲ್ಲ .ಒಂದು ಬಾರಿ ನಾನು ಎಂದಿನಂತೆ ಪಿ ಆರ್ ಓ. ನನ್ನ ಜೊತೆ ಒಂದು ಇಬ್ಬರು ಅಸಿಸ್ಟೆಂಟ್ ಒಬ್ಬ ಮಹಿಳಾ ಉಪಾಧಿಕಾರಿ, ಒಬ್ಬರು ಸಹಾಯಕರು ಹೀಗೆ ದೂರದ ಒಂದು ಹಳ್ಳಿಗೆ ಹೋಗಿ  ಇಳಿದೆವು. ನಾನೇ ಲಗೇಜು ಜಾಸ್ತಿ ತೆಗೆದುಕೊಂಡಿದ್ದೇನೆ ಎಂದುಕೊಂಡರೆ, ನನ್ನ ಜೊತೆಗೆ ಬಂದ ಮಹಿಳಾ ಆಧ್ಯಾಪಕಿ ಯೋರ್ವರು ಸೊಳ್ಳೆ ಬತ್ತಿ,   ಓಡೋ ಮಸ್ಸು, ವಿಕ್ಸ್, ಹೀಗೆ ಒಂದು ಚೀಲ ತುಂಬಾ ಬೇಕಾದರೆ? ಬೇಕಾಗಿ ಬಿಟ್ಟರೆ..... ಎಂಬ ಮುಂಜಾಗ್ರತಾ ವಸ್ತುಗಳಿಂದಲೇ ತುಂಬಿಸಿಬಿಟ್ಟಿದ್ದರು. ಶಾಲೆಯಲ್ಲಿ ಮುಂಚಿನ ದಿನವಷ್ಟೇ ಕರೆಂಟಿನ ವ್ಯವಸ್ಥೆ ಮಾಡಿದ್ದಾಳಂತೆ. ಅಲ್ಲಲ್ಲಿ ದೀಪಗಳನ್ನು ಉರಿಸಿದೆವು. ನಮ್ಮ ನಮ್ಮ ಸಾಮಾನುಸರಂಜಾಮಗಳನ್ನು ಜೋಡಿಸತೊಡಗಿದಾಗ ಯಾವುದೋ ವಯರ್ ಯಾರದ್ದೋ ತಲೆಗೆ ತಾಗಿ ಕರೆಂಟ್ ಹೋಯ್ತು. ಇಡೀ ರಾತ್ರಿ ಮೇಣಬತ್ತಿಯ ಬೆಳಕಿನಲ್ಲಿ ಜೋಡಿಸಿಕೊಂಡು ಮತ ಯಂತ್ರಗಳನ್ನು ಜೋಡಿಸಿ ಮಲಗೋಣವೆಂದರೆ ನಾಲ್ಕುವರೆ ಬೆಳಗಿನ ಜಾವ 5:30 ಗೆಲ್ಲ ಏಜೆಂಟರ ಮುಂದೆ ಅಣಕು ಮತದಾನ ಆಗಬೇಕು. ಅಲ್ಲೆಲ್ಲ ಒಂದು ಬಕೆಟ್ ನೀರು ಹೊಂದಿಸಿಕೊಂಡು ಮುಖ ಮಾತ್ರ ತೊಳೆಯಲು ಸಾಧ್ಯವಾಯಿತು. ಆದರೆ ಶಾಸ್ತ್ರಕ್ಕಾದರೂ ಒಂದು ಸ್ನಾನ ತಿಂಡಿ ಇತ್ಯಾದಿ ಎಲ್ಲಪ್ಪ ಎಂಬ ಚಿಂತೆಯಲ್ಲಿರುವಾಗ ನನ್ನ ಸಹಾಯಕ ಏನೋ ಪ್ಲಾನ್ ಮಾಡಿಟ್ಟಿದ್ದ. ಆ ಊರಲ್ಲಿ ಇರುವ ಏಕಮೇವ ಶಾಕಾಹಾರಿ ದೇವಸ್ಥಾನದ ಭಟ್ಟರು ಅವರಲ್ಲಿಗೆ ಹೋಗಿ ಇಬ್ಬರಂತೆ ತಿಂಡಿ ತಿಂದು ಸ್ನಾನ ಮಾಡಿ ಬರುವುದೆಂದು ಆಯಿತು. ಮೊದಲು ನಾವು ಮಹಿಳಾ ಅಧಿಕಾರಿಗಳು ಹೋದೆವು. ಪಾಪ ಹಿರಿಯರಾದ ದೇವಸ್ಥಾನದ ಅರ್ಚಕರು ಮತ್ತು ಅವರ ಹೆಂಡತಿ ನಮ್ಮನ್ನು ಬಂಧುಗಳಂತೆ ಉಪಚರಿಸಿ ತಿಂಡಿ ತಿನ್ನಿಸಿ ಸ್ನಾನ ಇತ್ಯಾದಿ ವ್ಯವಸ್ಥೆ ಕಲ್ಪಿಸಿ ಕೊಟ್ಟರು. ಎರಡನೇ ಬ್ಯಾಚು ಅಲ್ಲೆಲ್ಲೋ ಹೋಗಿ ಬಂತು. ಚುನಾವಣಾ ಕರ್ತವ್ಯ ಸಾಂಗವಾಗಿ ಪ್ರಾರಂಭವಾಯಿತು. ಎಲ್ಲ ಮೂರು ಪಕ್ಷಗಳ ಪ್ರತಿನಿಧಿಗಳು ಬಂದು ನಮ್ಮ ಬಳಿ ಕುಳಿತುಕೊಳ್ಳುವುದು ಕಡ್ಡಾಯ. ಸಾಮಾನ್ಯವಾಗಿ

ವಿವಿಧ ಬಣ್ಣದ ಶಾಲುಗಳನ್ನು ಹೊದೆದುಕೊಂಡು ಕೈಗೆ ಕಡಗಗಳನ್ನು ಧರಿಸಿಯೋ ಪುಡಾರಿಗಳಂತೆ ಮಿಂಚುವ ಪ್ರತಿನಿಧಿಗಳನ್ನು ನೋಡಿದ ನನಗೆ ತೀರಾ ಪಿಯುಸಿ ಪಿಲ್ಲುಗಳಂತ ಮೂವರು ಸ್ನೇಹಿತರಂತೆ ಹೆಗಲ ಮೇಲೆ ಕೈ ಹಾಕಿಕೊಂಡು ಬಂದು ಕುಳಿತಾಗಲೇ ಒಂದು ಬಗೆಯ ಕಾಲೇಜು ಅನುಭವ ಆಗ ತೊಡಗಿತ್ತು. ಮತದಾರರು ಪ್ರವೇಶಿಸುವ ಬಾಗಿಲು ಮತದಾನ ಮುಗಿಸಿ ಹೊರಹೋಗುವ ಬಾಗಿಲು ಗುಪ್ತ ಮತದಾನ ಮಾಡುವ ಯಂತ್ರ, ಅವರ ಹೆಸರನ್ನು. ಕೂಗಿ ಹೇಳುವವರು ಯಾರು ಎಂದೆಲ್ಲ ಸಿದ್ಧತೆ ನಡೆದು ಯಾವ ಗೊಂದಲವೂ ಇಲ್ಲದೆ ಮತದಾನ ನಡೆಯುತ್ತಾ ಇತ್ತು. ಹಳ್ಳಿಯ ಜನ ತುಂಬಾ ಶಿಸ್ತಿನಿಂದ ಶಾಂತಿಯಿಂದ ಮತ ನೀಡಿ ಹೊರಹೋಗುವುದನ್ನು ಕಂಡಾಗ ಸಮಾಧಾನವಾಗತೊಡಗಿತ್ತು ಅಷ್ಟರಲ್ಲಿ ಉರಿ ಬಿಸಿಲಿನ ಧಗೆಯಲ್ಲಿ ಓರ್ವ ವಯಸ್ಸಾದ ಮಹಿಳೆ ಯೇದುಸಿರು ಬಿಡುತ್ತಾ ಶಾಲೆಯ ಕಟ್ಟೆ ಹತ್ತಿ ಬಂದರು. ನೋಡಿದರೆ ನಮಗೆ ಬೆಳಗಿನ ಜಾವ ಸ್ನಾನ ತಿಂಡಿ ಕಾಫಿ ನೀಡಿದ ಮಹಾತಾಯಿ ! ಸರಿ ಎಲ್ಲರಂತೆ ಸಾಲಿನಲ್ಲಿ ನಿಂತರು. ಅವರ ಸರದಿ ಬರುವಾಗ ಎಲ್ಲಿ ನಿಮ್ಮ ಗುರುತಿನ ಚೀಟಿ ? ಎಂದು ಕೇಳಿದರೆ ಗುರುತಿನ ಕಾರ್ಡು ಯಾತಕ್ಕೆ? ಇಲ್ಲಿ ಎಲ್ಲರೂ ನನಗೆ ಗುರುತಿರುವವರೇ. ಅದಕ್ಕೇ ಬೇರೆ ಕಾರ್ಡು ನನ್ನ ಬಳಿ ಇದ್ದರೂ ತಂದಿಲ್ಲ ಎನ್ನಬೇಕೇ? ಆಧಾರ್ ಎಪಿಕ್ ಹೀಗೆ ಯಾವುದು ತಂದಿಲ್ಲವೇ ಎಂದು ಕೇಳಿದರೆ ಯಾಕೆ ತರಬೇಕು ಈ ಹುಡುಗರು ಮೂರು ಪಕ್ಷದವರೂ ನಮ್ಮ ಮನೆಗೆ ಬಂದು ಹೋಗುವವರೇ. ಎಂದು ಭಟ್ಟರ ಹೆಂಡತಿ ಅವರ ಬಳಿ ಕೇಳುತ್ತಿದ್ದಾರೆ ಮೂರು ಪಕ್ಷಗಳ ಹುಡುಗರು ಮುಸಿಮುಸಿ ನಗುತ್ತಾ ನನ್ನ ಬಳಿ "ಪರವಾಗಿಲ್ಲ ಮೇಡಂ ಅವರು ನಮಗೆಲ್ಲರಿಗೂ ಪರಿಚಿತರೇ. ಅವರ ಹೆಸರು ವಯಸ್ಸು ಎಲ್ಲವೂ ನಿಜವಾದದ್ದೇ. ಹೆಚ್ಚು ತೊಂದರೆ ಕೊಡುವುದು ಬೇಡ ಪಾಪ ವೋಟ್ ಹಾಕಿಸಿ ಕಳಿಸಿ ಬಿಡಿ" ಎನ್ನಬೇಕೇ? ನಮ್ಮ ತರಬೇತಿ ಕ್ಲಾಸಿನಲ್ಲಿ ನಮ್ಮನ್ನು ಹಿಂಡಿ ಹಿಪ್ಪೆ ಮಾಡಿದ ವಿವರಗಳು ನನ್ನನ್ನು ಅಷ್ಟು ದಡ್ಡಳನ್ನಾಗಿ ಮಾಡಲು ಬಿಡುತ್ತದೆಯೇ? "ಇಲ್ಲ ಕಣ್ರಪ್ಪ ಯಾವುದಾದರೂ ಒಂದು ಗುರುತಿನ ಚೀಟಿ ಇಲ್ಲದೆ ಓಟು ಹಾಕಿಸಿಕೊಳ್ಳಲು ಆಗುವುದಿಲ್ಲ ದಯವಿಟ್ಟು ಅವರಿಗೆ ಕನ್ವಿನ್ಸ್ ಮಾಡಿ ಕಳಿಸಿಬಿಡಿ" ಎಂದು ನಿಷ್ಠುರವಾಗಿ ಹೇಳಬೇಕಾಗಿ ಬಂತು. ಏನಮ್ಮ ಬೆಳಿಗ್ಗೆ ತಿಂಡಿ ತಿನ್ನುವಾಗ ಆ ಪರಿ ವಿನಯದಲ್ಲಿ ನಮಗೆ ಅಭಿನಂದನೆ ಹೇಳಿ ಬಂದಿದ್ದಿ ಈಗ ನೋಡಿದರೆ ಗುರುತಿಲ್ಲದವರ ಹಾಗೆ ಗುರುತಿನ ಚೀಟಿ ತನ್ನಿ ಎನ್ನುತ್ತಿದ್ದೀಯ ಇದು ದೇವರು ಮೆಚ್ಚುವ ಕೆಲಸವೇ ಎಂದು ಬೇರೆ ಅಜ್ಜಿ ನನ್ನನ್ನು ಗದರಿಕೊಳ್ಳುತ್ತಿದ್ದಾರೆ. ಎಷ್ಟೇ ಪರಿಚಿತರಾಗಿರಲಿ, ಏನೇ ಉಪಕಾರ ಮಾಡಿರಲಿ ನಮ್ಮದು ಕರ್ತವ್ಯ ಎಂದರೆ ಕರ್ತವ್ಯ ಯಾವುದೇ ಗುರುತಿನ ಚೀಟಿ ಇಲ್ಲದೆ ಮತ ಚಲಾಯಿಸಿಕೊಳ್ಳಲು ಸಾಧ್ಯವಿಲ್ಲವಮ್ಮ. ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಿ ಈಗ ಮನೆಗೆ ಹೋಗಿ ಸಂಜೆ 5 ರ ತನಕವು ನಾನು ಇಲ್ಲೇ ಇರುತ್ತೇವೆ. ನೀವು ನಿಮ್ಮ ಯಜಮಾನರು ಏನಾದರೂ ಆಧಾರ ಚೀಟಿಯನ್ನು ಹಿಡಿದುಕೊಂಡು ಬನ್ನಿ. ಖಂಡಿತ ಮತ ಹಾಕಿಸಿಕೊಳ್ಳುತ್ತೇವೆ ಎಂದು ಸಮಜಾಯಿಸಿ ನೀಡಿ ಬಿಸಿಲಿನಲ್ಲಿ ಅವರನ್ನು ಪುನಹ ನಡೆದುಕೊಂಡು ಹೋಗುವಂತೆ ಮಾಡಿದಾಗ ನನ್ನ ಮನಸ್ಸಿಗೆಲ್ಲಾ ಕುಯ್ಯುಮುರ್ರ ಎಂದಾಯಿತು. ಇಷ್ಟು ನಿಷ್ಠುರ ಳಾಗಬೇಕಾಯಿತಲ್ಲ ಪಾಪ. ವಯಸ್ಸಾದ ಮಹಿಳೆ ಬಿಸಿಲಲ್ಲಿ ಪುನಃ ನಡೆಯಬೇಕು... ಹೀಗೆ ಒಳಗಿಂದೊಳಗೆ ಪಾಪಪ್ರಜ್ಞೆ ಕಾಡ ತೊಡಗಿತ್ತು. ಆದರೆ ಕರ್ತವ್ಯ ಪ್ರಜ್ಞೆ ಅದೆಲ್ಲವನ್ನು ಬಡಿದು ಕೂಡಿಸಿತು. ಕೆಲವೊಮ್ಮೆ ನಾವು ತೆಗೆದುಕೊಳ್ಳುವ ದೃಢ ನಿರ್ಧಾರಗಳು ನಮ್ಮನ್ನು ಕಾಪಾಡುತ್ತವೆ. ಮಧ್ಯಾಹ್ನ ಎಲ್ಲರೂ ಊಟಕ್ಕೆ ಹೋಗುವ ಸಮಯ ಹೆಚ್ಚು ಜನ ಇರಲಿಲ್ಲ. ಒಬ್ಬ ನೋಡಲು ಕದೀಮನಂತೆ ಕಾಣುತ್ತಿದ್ದ ವ್ಯಕ್ತಿ ಬಂದು ತನ್ನ ಹೆಸರನ್ನು ಏನೋ ಒಂದು ಹೇಳಿ ಬಿಡಿ ನನ್ನನ್ನು ಒಳಗೆ. ಓಟ್ ಹಾಕಿ ಹೋಗುತ್ತೇನೆ, ನನಗೆ ತುಂಬಾ ಕೆಲಸವಿದೆ ಆಧಾರ ಗುರುತಿನ ಚೀಟಿ ಯಾವುದು ಇಲ್ಲ

ಎಂದು ಕಾಡತೊಡಗಿದ್ದಾನೆ. ಹಾಗೆ ಬಿಡಲಾಗದು ಎಂದು ನಮ್ಮ ಮಹಿಳಾ ಅಧಿಕಾರಿ ಹೇಳಿದಾಗ ನಾನು ಬೆಳಿಗ್ಗೆ ಭಟ್ಟರ ಹೆಂಡತಿಗೆ ತೋರಿಸಿದ ನಿಷ್ಠುರ ಮುಖಭಾವಕ್ಕಿಂತಲೂ ಹೆಚ್ಚಿನ ಮುಖಭಾವದಿಂದ ಏನು ವಿಷಯ ಎಂದು ಕೇಳಿದೆ. ಇವನು ನಮ್ಮೂರಿನ ಶರಾಬು ಅಂಗಡಿಯ ಮಾಲೀಕ. ನಮಗೆಲ್ಲರಿಗೂ ಆಪ್ತ ಏನೋ ಗುರುತಿನ ಚೀಟಿ ತಂದಿಲ್ಲ.ಆದರೆ ನಾವೆಲ್ಲರೂ ಓಕೆ ಎನ್ನುತ್ತಿದ್ದೇವೆ. ಹಾಕಿಸಿಕೊಳ್ಳಿ ಮೇಡಂ ಎಂದು ಪ್ರತಿನಿಧಿಗಳು ಆಗ್ರಹ ಮಾಡತೊಡಗಿದರು. ಏನು ಮಾತು ಅಂತ ಆಡುತ್ತಿದ್ದೀರಿ? ನಮ್ಮನ್ನೆಲ್ಲಾ ಜೈಲಿಗೆ ಕಳಿಸುವ ಹುನ್ನಾರವ? ಹಾಗೆ ಗುರುತಿನ ಚೀಟಿ ಇಲ್ಲದವರ ಬಳಿ ವೋಟು ತೆಗೆದುಕೊಳ್ಳುವಂತಿಲ್ಲ, ರೂಲ್ಸ್ ನೋಡಿ ಎಂದು ತೋರಿಸಿದೆ. ಮೂರು ಜನ ಯುವಕರು ಮುಖಭಂಗವಾದವರಂತೆ ಒಗ್ಗಟ್ಟಿನಲ್ಲಿ ನನ್ನನ್ನು ಗುರು ಗುರಾಯಿಸಿದರು. ಪುಣ್ಯಕ್ಕೆ ಬೆಳಗಿನ ಊಟ ನೀಡಿದ ತಾಯಿಯನ್ನು ಕರುಣೆಯಿಂದ ಏನಾದರೂ ಮತ ಹಾಕಿಸಿಕೊಂಡಿದ್ದರೆ.... ನನಗೊಮ್ಮೆ ಮೈ ನಡುಕ ಉಂಟಾಯಿತು. ನಿಯಮ ಎಂದರೆ ನಿಯಮ ಕಂಡ್ರಪ್ಪ ಬೆಳಿಗ್ಗೆ ನಾನು ಹೇಳಿಲ್ಲವೇ ಹೋಗಿ ಚೀಟಿ ತರಲು ಹೇಳಿ "ಎಂದವರನ್ನು ವಾಪಸ್ ಕಳಿಸಿದಾಗ ಪಾಪ ಪುಣ್ಯ ಸಂಕೋಚ ಇತ್ಯಾದಿಗಳಿಗೆ ರೂಲ್ಸ್ ಅಪ್ಲೈ ಮಾಡಬಾರದು ಎಂಬ ಸರ್ಕಾರಿ ಸತ್ಯ ನನಗೆ ಆ ಕ್ಷಣಕ್ಕೆ ನೆರವಿಗೆ ಬಂದಿತ್ತು.


ಒಂದು ಶಾಲೆಯಲ್ಲಿ ಕನಿಷ್ಠ ಮೂರು ನಾಲ್ಕು ಬೂತ್‌ಗಳ ಏರ್ಪಾಡು ಆಗುತ್ತದೆ. ಎಲ್ಲವೂ ಸರಿಯಾದ ಗುಂಪಾಗಿದ್ದರೆ ಟಕಟಕ ಎಂದು ಓಟುಗಳು ಹಾಕಿಸಲ್ಪಡುತ್ತವೆ. ಅದರಲ್ಲಿ ಯಾರಾದರೂ ಒಬ್ಬರು ಸರಿಯಾಗಿ ಕರ್ತವ್ಯ ಮಾಡಲಾರದವರು ಸೇರಿಕೊಂಡಿದ್ದರೆ ಅಲ್ಲಿ ಗೊಂದಲಗಳು ಶುರುವಾಗುತ್ತವೆ. ಪ್ರಾರಂಭದ ಗೊಂದಲ ಕೊನೆಯ ತನಕವೂ ಮುಗಿಯದಂತಿರುತ್ತದೆ. ಕೊನೆಯಲ್ಲಿ ಮತದಾನದ ಸಮಯ ಮುಗಿದ ಬಳಿಕ ಎಲ್ಲವನ್ನು ಸ್ತಬ್ಧ ಗೊಳಿಸಿ ಮತದಾನ ಯಂತ್ರಕ್ಕೆ ಟೇಪ್ ಅಂಟಿಸಿ ಉಳಿದ ಎಲ್ಲ ಸಾಮಗ್ರಿಗಳನ್ನು ಲೆಕ್ಕ ಸಮೇತ ತೆಗೆದುಕೊಳ್ಳುವ ತುಂಬಾ ಕಿರಿಕಿರಿಯ ಕೆಲಸ. ಗಾಬರಿ ಹುಟ್ಟಿಸುವಂತಿರುತ್ತದೆ. ಯಾವ ಕಾರ್ಡ್ ಅನ್ನು ತೋರಿಸಿ ಮತದಾನ ಮಾಡಿಸಲಾಗಿದೆ, ಮತದಾನ ಮಾಡಿದವರಲ್ಲಿ ಗಂಡಸರೆಷ್ಟು ಹೆಂಗಸರೆಷ್ಟು ಎಂಬುದರ ಅಂಕಿ ಸಂಖ್ಯೆಗಳು ನಿಖರವಾಗಿ ಇಲ್ಲದಿದ್ದರೆ ಅದನ್ನು ಡಿ ಮಸ್ಟ ರಿಂಗ್ ಕೇಂದ್ರದಲ್ಲಿ ತಿರಸ್ಕರಿಸಲಾಗುತ್ತದೆ. ಮತ್ತು ಮುಖ್ಯ ಮತಗಟ್ಟೆ ಅಧಿಕಾರಿಯನ್ನು ಜವಾಬ್ದಾರರನ್ನಾಗಿಸಿ ಶಿಕ್ಷೆ ಕೊಡಲಾಗುತ್ತದೆ. ಇದಕ್ಕೆ ಹೆದರಿದ ಅನೇಕ ಅಧ್ಯಾಪಕಿಯರು ಹೇಗಾದರೂ ಚುನಾವಣಾ ಕರ್ತವ್ಯವನ್ನು ತಪ್ಪಿಸಿಕೊಳ್ಳಲು ಶತಾಯಗತಾಯ ಪ್ರಯತ್ನ ಮಾಡುವುದು. ಒಂದು ಬಾರಿ ನಮ್ಮ ಕೇಂದ್ರದ ಎಲ್ಲಾ ಮತದಾನದ ಪ್ರಕ್ರಿಯೆ ಮುಗಿಸಿ ನಾವೇನು ಸಿದ್ಧರಾಗಿಬಿಟ್ಟೆವು. ಆದರೆ ಪಕ್ಕದ ರೂಮಿನ ಅಧ್ಯಾಪಕಿ ಒಬ್ಬರು ತಲೆ ತಿರುಗಿ ಬಿದ್ದಿದ್ದಾರೆ ಕೆಲಸ ಮುಗಿದಿಲ್ಲ ಎಂಬ ವರ್ತಮಾನ ಬಂತು. ನಮ್ಮ ಟೀಮಿನ ಸಹಾಯಕ ತುಂಬಾ ಬುದ್ಧಿವಂತ ಮತ್ತು ದಕ್ಷತೆಯಿಂದ ಕೂಡಿದವನಾಗಿದ್ದು ನಮ್ಮ ರೂಮಿನ ಹೆಚ್ಚಿನ ಹೆಚ್ಚಿನ ಕೆಲಸವನ್ನು ಅವನೇ ಮಾಡಿ ಮುಗಿಸಿದ್ದ. ಅವನ ಬಳಿ ಹೋಗು ಅವರಿಗೆ ಸಹಾಯ ಮಾಡಿ ಬಾ ಎಂದು ಕಳಿಸಿದೆ. ಅಲ್ಲಿ ಅಸ್ತವ್ಯಸ್ತವಾಗಿದ್ದ ಮತದಾನ ಮುಗಿಸುವ ಪ್ರಕ್ರಿಯೆಯನ್ನು ಆತ ಟಕಟಕ ಮುಗಿಸಿದ್ದನ್ನು ನೋಡಿದ ಅಧ್ಯಾಪಕಿ ತಲೆ ತಿರುಗಿ ಬಿದ್ದವಳು ಚೇತರಿಸಿಕೊಂಡಳಂತೆ. ಎಲ್ಲವನ್ನು ನಿಯಮದ ಪ್ರಕಾರ ಮಾಡಿ ಕಟ್ಟಿ ಮುಗಿಸಿ ಸೀಲು ಮಾಡಿ ಲೆಕ್ಕ ಬರೆದು ಸಿದ್ಧರಾಗುವಾಗ ಎರಡು ಗಂಟೆ ತಡವಾಗಿತ್ತು. ನಾವು ರಾತ್ರಿ ಮನೆ ಸೇರುವುದು 12 ಮಿಕ್ಕುತ್ತದೆ ಎಂದು ಎಲ್ಲರೂ ಗೊಣಗುತ್ತಿರುವಾಗ ತಲೆ ತಿರುಗಿ ಬಿದ್ದ ಅಧ್ಯಾಪಕಿ ಎಲ್ಲರ ಬಳಿಯೂ ಕ್ಷಮೆ ಕೇಳುತ್ತ ಮುಂದಿನ ವರ್ಷ ನಾನು ರಿಟೈರ್ ಆಗುತ್ತೇನೆ ಕಣ್ರೀ ಎಂದು ಸಮಾಧಾನ ಪಟ್ಟುಕೊಳ್ಳುತ್ತಿರುವುದನ್ನು ಕಂಡು ನಾನೂ ರಿಟೈರ್ ಆಗುತ್ತಿದ್ದೇನೆ ಕಂಡ್ರಿ ಎಂದು ಹರ್ಷೋದ್ಗಾರ ಮಾಡಿದೆ. ■

## ಚುನಾವಣಾ ಸ್ವಾರಸ್ಯ

**ಬೇಲೂರು ರಾಮಮೂರ್ತಿ**

**(ಇದೊಂದು ಸತ್ಯ ಘಟನೆ – ಹೆಸರುಗಳನ್ನು ಬದಲಾಯಿಸಲಾಗಿದೆ)**

ಅದು ಸುಮಾರು 1983–84ರ ಚುನಾವಣೆ ಇರಬಹುದು. ಆಗ ಕಾಂಗ್ರೆಸ್ ಪಕ್ಷಕ್ಕೆ ಎದುರಾಳಿಯಾಗಿ ಜನತಾ ಪಕ್ಷ ಹುಟ್ಟಿಕೊಂಡು ಎಲ್ಲೆಲ್ಲು ಸದ್ದು ಮಾಡುತ್ತಿತ್ತು. ಮಲ್ಲೇಶ್ವರ ಕ್ಷೇತ್ರದಲ್ಲಿ ಎರಡೂ ಪಕ್ಷಗಳ ಭರಾಟೆ ಬಹಳ ಜೋರಾಗಿ ನಡೆಯುತ್ತಿತ್ತು.





ಎಷ್ಟೋ ಉತ್ಸಾಹಿ ಯುವಕರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟುಹೋಗಿತ್ತು. ಒಬ್ಬ ಹುಡುಗ ಆಗಿನ್ನೂ ಅವನು ಮೊದಲ ಚುನಾವಣೆಯಲ್ಲಿ ಮತದಾನ ಮಾಡಲು ಉತ್ಸುಕನಾಗಿದ್ದ. ಆದರೆ ಅವನ ಹೆಸರು ಮತದಾರರ ಪಟ್ಟಿಯಲ್ಲಿ ಇರಲಿಲ್ಲ. ಚುನಾವಣೆಯ ದಿನ ಆ ಹುಡುಗ ಪಕ್ಷಗಳ ನಾಯಕರು ಮತದಾರರ ಪಟ್ಟಿಯೊಂದಿಗೆ ಒಂದು ಕಡೆ ಕೂತಿದ್ದ ಕಡೆ ಹೋದ. ಈ ಹುಡುಗನನ್ನು ನೋಡಿ ಏನು ನಿನ್ನ ಹೆಸರು, ಮತದಾನ ಮಾಡಬೇಕಾ ಅಂತ ಕೇಳಿದರು. ಆ ಹುಡುಗ ಮತದಾನ ಮಾಡಬೇಕು ಆದರೆ ನನ್ನ ಹೆಸರು ಪಟ್ಟಿಯಲಿಲ್ಲ ಅಂದ. ಒಬ್ಬ ನಮ್ಮ ಪಕ್ಷಕ್ಕೆ ಮತದಾನ ಮಾಡುವುದಾದರೆ ನಿನಗೆ ಸರಿಹೊಂದುವ ಒಂದು ಹೆಸರು ಕೊಡುತ್ತೇನೆ, ಹೋಗಿ ಮತದಾನ ಮಾಡಿಬಾ ಅಂದ. ಆಗಿನ್ನೂ ಮತದಾರರ ಹೆಸರಿನ ಜೊತೆ ಅವರ ಫೋಟೋ ಇರುತ್ತಿರಲಿಲ್ಲ. ಹೀಗಾಗಿ ಯಾರದೋ ಹೆಸರಿನಲ್ಲಿ ಇನ್ಯಾರೋ ಮತ ಹಾಕುವುದು ಸಾಮಾನ್ಯವಾಗಿತ್ತು. ಒಂದು ಪಕ್ಷದ ನಾಯಕ ತಗೋ ಈ ಚೀಟಿ ಹೋಗಿ ಮತದಾನ ಮಾಡಿ ಬಾ ಅಂದ. ಆ ಹುಡುಗನ ಹೆಸರು ರಮೇಶ (ಹೆಸರು ಬದಲಾಯಿಸಿದೆ) ಅವನಿಗೆ ಕೊಟ್ಟ ಚೀಟಿಯಲ್ಲಿ ಇದ್ದ ಹೆಸರು ಗೋವಿಂದ. ಹುಡುಗ ಚೀಟಿಯನ್ನು ತೆಗೆದುಕೊಂಡು ಮತಗಟ್ಟೆಗೆ ಹೋದ. ಅಲ್ಲಿ ಮತದಾನ ಮಾಡುವ ಮೊದಲು ರಾಜಕೀಯ ಪಕ್ಷಗಳ ಏಜೆಂಟರು ಚೀಟಿಯಲ್ಲಿರುವ ಹೆಸರು ಪಟ್ಟಿಯಲ್ಲಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದರು. ಹಾಗೆ ಹುಡುಗ ತನ್ನ ಚೀಟಿಯನ್ನು ಒಬ್ಬರ ಕೈಗೆ ಕೊಡುವಾಗ ಗಾಬರಿಯಾದ. ಏಕೆಂದರೆ ಆ ವ್ಯಕ್ತಿ ಈ ಹುಡುಗನ ಸಹೋದ್ಯೋಗಿ ಪುರುಷೋತ್ತಮ. ಇಬ್ಬರೂ ಒಂದೇ ಕಡೆ ಕೆಲಸ ಮಾಡುತ್ತಾ ದಿನಕ್ಕೆ ಹತ್ತಾರು ಸಾರಿ ಭೇಟಿಯಾಗುತ್ತಿದ್ದರು. ಪುರುಷೋತ್ತಮ, ರಮೇಶ ಕೊಟ್ಟ ಚೀಟಿಯನ್ನೂ ಅದರಲ್ಲಿದ್ದ ಹೆಸರನ್ನೂ ನೋಡಿ ರಮೇಶನತ್ತ ವಿಚಿತ್ರ ರೀತಿಯಿಂದ ನೋಡಿದ. ರಮೇಶ ಬೆದರಿದ. ಆದರೂ ಸಾವರಿಸಿಕೊಂಡು ಸಣ್ಣಗೆ ಕಣ್ಣು ಹೊಡೆದ.

ನಂತರ ಎಲ್ಲವೂ ಸುಲಲಿತವಾಗಿ ರಮೇಶ ಮತದಾನ ಮಾಡಿ ಹೊರಬಂದ. ಸ್ವಲ್ಪ ಹೊತ್ತಾದ ಮೇಲೆ ಹೊರಗೆ ಬಂದ ಮತಗಟ್ಟೆಯಲ್ಲಿದ್ದ ಏಜೆಂಟ್ ಪುರುಷೋತ್ತಮ ನೀನು ನಮ್ಮ ಪಾರ್ಟಿಗೆ ತಾನೇ ಮತದಾನ ಮಾಡಿದ್ದು ಅಂತ ಕೇಳಿದ. ಅದಕ್ಕೆ ರಮೇಶ ಹೌದಪ್ಪಾ ನನ್ನ ಹೆಸರು ಪಟ್ಟಿಯಲ್ಲಿರಲೇ ಇಲ್ಲ ಅದಕ್ಕೇ ಇಷ್ಟು ಕಷ್ಟ ಪಟ್ಟಿದ್ದು ಅಂದ. ರಮೇಶ ಅವತ್ತು ಜನತಾ ಪಕ್ಷಕ್ಕೆ ಮತದಾನ ಮಾಡಿದ್ದ. ಮರುದಿನ ರಮೇಶ  ಕಛೇರಿಯಲ್ಲಿ ನಡೆದ ವಿಚಾರವನ್ನು ತನ್ನ ಆಪ್ತ ಸ್ನೇಹಿತನಿಗೆ ಹೇಳಿದಾಗ ಆ ಸ್ನೇಹಿತ ಲೋ, ಪುರುಷೋತ್ತಮ ಜನತಾ ಪಕ್ಷ ಅಲ್ಲ ಕಣೋ ಕಾಂಗ್ರೆಸ್ಸು, ನೀನೇನಾದರೂ ಜನತಾ ಪಕ್ಷಕ್ಕೆ ಮತ ಹಾಕಿದೆ ಅಂತ ಅವನಿಗೆ ಗೊತ್ತಾಗಿದ್ದರೆ ನಿನ್ನ ಕಥೆ ಅಷ್ಟೆ ಅಂದ. ರಮೇಶನ ಎದೆ ಧಸ್ಸೆಂದಿತು. ಸ್ವಲ್ಪದರಲ್ಲಿ ಬಂಧನಕ್ಕೆ ಒಳಗಾಗುವುದರಿಂದ ತಪ್ಪಿಸಿಕೊಂಡೆನಲ್ಲಾ. ಬಂಧನಕ್ಕೆ ಒಳಗಾಗಿದ್ದರೆ ಇದ್ದ ಕೆಲಸವೂ ಹೋಗಿರೋದು. ಅಬ್ಬಾ, ಇನ್ನು ಮೇಲೆ ಯಾವತ್ತೂ ಇಂಥಾ ಕೆಲಸ ಮಾಡಬಾರದು ಅಂತ ತೀರ್ಮಾನಿಸಿದ. ■

### ಮೂರನೇ ಮತ ಯಾರದು

ಆತ ಆಗತಾನೇ ರಾಜಕೀಯದಲ್ಲಿ ಹೆಜ್ಜೆ ಇಡಲಾರಂಭಿಸಿದ್ದ ವ್ಯಕ್ತಿ. ಯಾವ ಪಕ್ಷದ ಬೆಂಬಲವೂ ಸಿಗದೇ ಹೋದ್ದರಿಂದ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ. ಕೆಲವರ ಊಹೆಯಂತೆ ಅವನು ಠೇವಣಿ ಕಳೆದುಕೊಂಡಿದ್ದ. ಅದಕ್ಕಿಂತ ಹೆಚ್ಚಾಗಿ ಅವನು ಬೇಜಾರಾಗಿದ್ದುದು ಅವನಿಗೆ ಮೂರೇ ಮತ ಬಂದಿದ್ದು. ಇದೇನು ವಿಚಿತ್ರ. ನಾನು ನನ್ನ ಬಡಾವಣೆಯಲ್ಲಿ ಮನೆಮನೆಗೂ ಹೋಗಿ ಪ್ರಚಾರ ಮಾಡಿದೀನಿ ಬಂದಿರೋದು ಬರೀ ಮೂರೇ ಮತ ಅಂತ ಖಿನ್ನನಾಗಿದ್ದ. ಆಗ ಅವನ ಹೆಂಡತಿ ರೌದ್ರಾವತಾರದಿಂದ ಅವನ ಬಳಿ ಬಂದು ಯಾವೋಳ್ರೀ ಅವಳು ನಿಮಗೆ ಮತ ಹಾಕಿದ್ದು ಅಂತ ಕೇಳಿದಳು. ಇವನು ಯಾಕೇ ಏನಾಯ್ತೇ ಅಂತ ಕೇಳಿದ. ರೀ ನಿಮಗೆ ಚುನಾವಣೆಯಲ್ಲಿ ಬಂದಿರೋದು ಮೂರು ಮತ. ಒಂದು ನಿಮ್ಮದು, ಇನ್ನೊಂದು ನನ್ನದು, ಆದರೆ ಈ ಮೂರನೇ ಮತ ನಿಮಗೆ ಹಾಕಿದ್ದು ಯಾವೋಳು ಅಂತ ಕೇಳ್ತಿದೀನಿ ಅಂದಾಗ ಅವನು ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡಿದ್ದಕ್ಕಿಂತ ಇದು ಭಾರೀ ದುರಂತ ಅಂದುಕೊಂಡ.



# ಸಡಗರದಲ್ಲಿ ಕಿರುನಗೆ

ಡಾ. ಶ್ಯಾಮಲಾ ರವಿಶಂಕರ್

ಚುನಾವಣೆ .... ಚುನಾವಣೆ .... ಚುನಾವಣೆ ..ಈಗ ಎಲ್ಲರ ಬಾಯಲ್ಲೂ ಅದೇ ಮಾತು .ಸಹಜವಾದದ್ದೇ ..ಇಷ್ಟು ದೊಡ್ಡದೇಶದ ಪಂಚವಾರ್ಷಿಕ ಸಡಗರ ಪ್ರಪಂಚಕ್ಕೇ ಕುತೂಹಲಕಾರಿಯಾಗಿರುವಾಗ....! ಆದರೆ ನಾನು ಅಷ್ಟೆಲ್ಲ ತಲೆಗೆ ಹತ್ತಿಸಿಕೊಳ್ಳಲ್ಲ. ಇವೆಲ್ಲ ನನ್ನ ತಲೆ ಮೇಲಿಂದ ಹಾದು ಹೋಗತ್ತೆ. ಹೆಚ್ಚಾಗಿ ಅರ್ಥ ಆಗೋಲ್ಲ. ಆದರೆ ನಾನು ಓಟುಹಾಕ್ತೀನಿ, ಯಾರು ಗೆದ್ದರು ಅಂತ, ಅದ್ರಲ್ಲೂ ನಾನು ಓಟು ಹಾಕಿದವರು ಗೆದ್ದರಾ ಅಂತ ನಿಗಾನೂ ಇಟ್ಟಿರ್ತೀನಿ. ಅಲ್ಲಿಗೆ ಆಯಿತು ನನ್ನ ಸಡಗರ. ಆದರೆ ನಮ್ಮವರು ತದ್ವಿರುದ್ಧ. ಚುನಾವಣೆ ಅಂತಘೋಷಣೆ ಆದಾಗಿನಿಂದ ಆಮೂಲಾಗ್ರವಾಗಿ ತಿಂಗಳಾನುಗಟ್ಟಲೆ ಭಕ್ತಿಯಿಂದ ವಾರ್ತಾ ಪತ್ರಿಕೆ ಟೀವಿ ಮಾಧ್ಯಮಗಳ ವಿಶ್ಲೇಷಣೆ ವರದಿಗಳಲ್ಲಿ ನಿಮಗ್ನರಾಗಿರೋದು ಅವರ ಅಭ್ಯಾಸ. ಹಲವಾರು ಸಲ ಈ ಸಡಗರ ಸಂಭ್ರಮ ಮುಗಿದ ಮೇಲೆ ಅವರ ಮುಖನೋಡಿದ್ರೆ ಬೇರೆ ಕೆಲಸಾನೇ ತೊಚೋಲ್ವೇನೋ ಅನ್ಸತ್ತೆ. ಬಹಳ ವರ್ಷಗಳಿಂದ ಒಂದೇ ಪಕ್ಷಕ್ಕೆ ಓಟು ಹಾಕುತ್ತಿದ್ದವರು ಈಚೀಚೆಗೆ ಪಕ್ಷಾಂತರ ಮಾಡಿದ್ದರು. ಇವೆಲ್ಲನೋಡುತ್ತಿದ್ದ ನನಗೆ ಮುಸಿಮುಸಿನಗು. ಅವ್ರಪ್ರಕಾರ ನಾನು ಒಬ್ಬ ಇರ್ರೆಸ್ಪಾನ್ಸಿಬಲ್ಸ್ ಸಿಟಿಜನ್. ಇರಲಿ.


ಒಂದಾನೊಂದು ಸಲಪೋಲಿಂಗ್ಬೂತ್ನಲ್ಲಿ ನಮ್ಮವರ ಸರದಿ ಬಂದಾಗ ಅವರ ಓಟು ಯಾರೋ ಆಗಲೇ ಚಲಾಯಿಸಿಬಿಟ್ಟಿದ್ದರಂತೆ. ಇವರಿಗೆ ಆದದುಃಖ ಅಷ್ಟಿಷ್ಟಲ್ಲ. ಅಲ್ಲಿದ್ದ ಏಜೆಂಟರನ್ನು ಕೇಳಿದರಂತೆ, "ಹೋಗಲಿಬಿಡಿ, ಆದರೆ ಅವನು ನನ್ನ ಪಾರ್ಟಿಗೆ ಹಾಕಿದ್ದನಾಂತ ಸ್ವಲ್ಪನೋಡಿಹೇಳಪ್ಪ" ಅಂದರಂತೆ. ಅವರುಗಳು, " ಸರ್, ಸೀಕ್ರೆಟ್ಬ್ಯಾಲಟ್ ಅಲ್ವಾ. ಸಾರೀ. ಸರ್. ಆಗೋಲ" ಅಂದಾಗ,ಇವರ ದುಃಖಕ್ಕೆ ಏನು ಹೇಳಬೇಕು? ಇನ್ನೊಂದು ಸಲ ಕ್ಯೂನಿಂತು ಒಳಗೆ ಹೋದ ಮೇಲೆ ಇವರ ಹೆಸರೇ ಅಲ್ಲಿರಲಿಲ್ಲ. ಹೀಗಾಗಬಹುದೇ? ಇದು ಟಾಕ್ ಆಫ್ದಟೌನ್ ಆಗ್ಬಿಟ್ಟಿತ್ತು.

ಇದನ್ನೆಲ್ಲಾನೆ ನೆಸಿಕೊಂಡರೆ ನಾನು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಣೆ ಗುರ್ತಿಗೆ ಬರತ್ತೆ. ಅವುಗಳಲ್ಲಿ ಹಲವನ್ನ ತಮ್ಮಲ್ಲಿ ಈಗಾಗಲೇ ಹಂಚಿಕೊಂಡಿದ್ದೇನೆ. ರಿಟೈರಾದ ಮೇಲೆ ಈ ಗೋಜಿಲ್ಲದ್ದು ಬಹಳಸಂತೋಷ.

ನೆನಪಿನ ಸುರುಳಿ ಬಿಚ್ಚುತ್ತಾ ಹೋಗತ್ತೆ, ಅದೇ ದೃಶ್ಯಗಳ ರಿಪ್ಲೇ ಒಂದು ಒಳ್ಳೆ ಟೈಮ್ಪಾಸು  ನಾನು ಚಿಕ್ಕವಳಿದ್ದಾಗ ಮಲ್ಲೇಶ್ವರದ ಇದ್ದಬದ್ದ ಎಲ್ಲ ಜಟಕಾಗಾಡಿಗಳಿಗೂ ಟೆಂಪರರಿ ಕೆಲಸ ನೀಡುತ್ತಿದ್ದುದು ಈ ಚುನಾವಣೆಗಳು. ಎಷ್ಟೋ ದಿನಗಳ ಮುಂಚೆನೇ ಲೊಡಕಲುಬಡಕಲು ಲೌಡ್ಸ್ಪೀಕರ್ಗಳನ್ನ ಅಳವಡಿಸಿ ಅದರಿಂದ ಗೊರ್ ..ಗೊರ್ ..ಭುಸ್ಸ್ ..ಭುಸ್ಸ್ ..ಅನ್ನೋ ಶ್ವಾಸ –ನಿಶ್ವಾಸಗಳನ್ನು ಹೊರಡಿಸುತ್ತಾ ಓಡಾಡುತ್ತಿದ್ದ ಗಾಡಿಗಳು ಬಂತೆಂದರೆ ರೋಡಿಗೆ ರೋಡೇ ಮನೆ ಹೊರಗೆ ! ಮಕ್ಕಳ ವಿಸ್ಮಯವಂತೂ ಹೇಳತೀರದು. ಏನೇ ಕೆಲಸ ಮಾಡುತ್ತಿದ್ದರೂ, ಅದರಲ್ಲೂ ಓದು– ಬರಹಬಿಟ್ಟು ಓಡೋಕೆ ಒಂದು ಚಾನ್ಸು. ಈ ಗಾಡಿಗಳಲ್ಲಿ ಮೈಕ್ಹಿಡಿದು ಅದರ ಸಹಾಯಕ್ಕೋ ಎಂಬಂತೆ ಜೋರಾಗಿ ಕಿರುಚುವವನೊಬ್ಬ, ಕುದುರೆಗೆ ಚಾವಟಿ ಏಟು ಬೀಸುವವನೊಬ್ಬ, ಚೀಟಿಗಳನ್ನು ಗಾಳಿಗೆತೂರಿ ಬಿಡುವವನೊಬ್ಬ. ಒಟ್ಟಿನಲ್ಲಿ ಒಂದು ಗಾಡಿಗೆ ಮೂರು ಜನರಿಗೆ ಉದ್ಯೋಗಕಲ್ಪಿಸುವ ಪರ್ವ ! ಈ ಮೂರನೆಯವನು ನಮ್ಮ ಹೀರೋ. ಅವನ ಇಷ್ಟಯಿಲೊ... ಆ ಜಂಭವ್ವೋ.. ಅವನು ಆ ಚೀಟಿಗಳನ್ನ ಹರಡಲು ಮಾಡುವ ಪ್ರಕ್ರಿಯೆಗಳೋ.. ನಮ್ಮ ಮುಗ್ಧ ಮನಸ್ಸಿಗೆ

ನಾಟಿಹೋಗಿತ್ತು! ಗಾಳಿಯಲ್ಲಿ ಚಿತ್ರ–ವಿಚಿತ್ರವಾಗಿ ತೇಲುತ್ತಿದ್ದ ಆ ಚೀಟಿಗಳನ್ನು ಹಿಡಿಯಲು ಎದ್ದೂ– ಬಿದ್ದೂ ಓಡುತ್ತಾ ಅವ್ಗಳ ಸಂಗ್ರಹಣ ಮಾಡಿ, ಯಾರು ಹೆಚ್ಚು ಅನ್ನೋಪೈಪೋಟಿ! ಈ ಸಮಯದಲ್ಲಿ ಜ್ಞಾಪಕ್ಕೆ ಬರುವ ಹೆಸರು ಅಂದ್ರೆ ಡಾಕ್ಟರ್ಟ ಪಾರ್ಟ್ಸರ್ಟ!

ಆಗಷ್ಟೇ ಇಂಗ್ಲಿಷ್ ಓದಲು ಕಲಿಯುತ್ತಿದ್ದ ಚಿಳ್ಳೆಗಳಲ್ಲವೇ? ನಮ್ಮದೇ ಸ್ಪೆಲ್ಲಿಂಗು, ನಮ್ಮದೇ ಉಚ್ಚಾರಣೆ ನಮ್ಮದೇ ಪ್ರಾಸ! ವಠಾರದ ಹೆಂಗಸರಿಗೆ ಈ ಕುಪ್ಪೆಕಸ ಉದ್ವಿಗ್ನಕರ್ತೃ ಆದರೆ ಗಂಡಸರಿಗೆ ಮದರಾಸಿನಲ್ಲಾಗುತ್ತಿದ್ದ ಟೆಸ್ಟ್ಮ್ಯಾಚಿನಸ್ಕೋರು ರೇಡಿಯೋ ಕಾಮೆಂಟರಿ ಕೇಳಿಬರೆದುಕೊಳ್ಳಲು ಅಣುವಾದ ಚೌಕಾಸಿ ಸಂತೋಷಕೊಡುತ್ತಿತ್ತು. ಹಾಗೂ ಹೆಂಡತಿ ಹೇಳಿದ ಸಾಮಾನಿನ ಪಟ್ಟಿ ಮತ್ತು ನಾಳೆಗೆ ತರಬೇಕಾದ ತರಕಾರಿ ಪಟ್ಟಿಗಳಿಗೆ ಸದುಪಯೋಗ ಆಗುತ್ತಿತ್ತು ಆ ಚೀಟಿಯ ಖಾಲಿ ಹಿಂಭಾಗ!




ರಸ್ತೆ ಕೊನೆಯಲ್ಲಿದ್ದ ಶಿವ–ವಿಷ್ಣು ದೇವಾಲಯದ ಕಮಿಟಿ ಚುನಾವಣೆಗೆ ಕಡೆ ನೋಡೋಣ. ಇಲ್ಲಿನ ಪ್ರಚಾರ, ಅಲ್ಲಅಲ್ಲ, ಅಪಪ್ರಚಾರ ಹೀಗೆ ನಡೀತಿತ್ತು "ರೀ, ಆ ರೈಲು ಕಂಬಿಗೆ ಓಟು ಹಾಕಿದ್ರೆ ಅವನು ಮೋಸ ಮಾಡಿ ಕಂಬಿಕೀಳ್ತಾನೆ, ಅವನ್ನ ಕಂಬಿ ಹಿಂದೆ ತಳ್ಳೋಣ" ಅಂತ ಒಂದು ಗುಂಪು. ಇನ್ನೊಂದು ಗುಂಪು "ಲ್ರೋ.., ಆ ನಾಮಧಾರಿಗೆ ಹಾಕಿದ್ರೆ ನಮಗೆ ಉಳಿಯೋದು ಹಣೆ ಮೇಲೆ ಪಂಗನಾಮನೇ ಈ ಅಂತರಾರ್ಥ ತಿಳಿಯದ ಚಿಲ್ಟುಗಳು ತಮ್ಮ ನಿಘಂಟಿಗೆ ಮತ್ತಷ್ಟು ಪದಗಳನ್ನು ಸೇರಿಸಿಕೊಂಡು ಧನ್ಯರಾದರು.


ಇತ್ತೀಚೆಗೆ ನಮ್ಮ ನೆಂಟರ ಹಳ್ಳಿಗೆ ಹೋಗಬೇಕಾಗಿ ಬಂತು. ಅಲ್ಲಿ  ಅರಳಿಕಟ್ಟೆ ಚುನಾವಣೆ, ಮೊದಲಿಗೆ ಒಪೀನಿಯನ್ಪೋಲ್ನಡೀತಿತ್ತು. ಅವರೆಲ್ಲರೂ ತೆಗೆದುಕೊಂಡ ಅವಿರೋಧ ನಿರ್ಣಯ ಏನಪ್ಪಾ ಅಂದರೆ, ಈ ಸಿಟಿಹೈಕಳನ್ನ ಗೆಲ್ಲಿಸಬಾರದು ಅಂತ, ಅವರಿಗೆ ನಾವು ಅಲ್ಲಿ ಚುನಾವಣೆಗೆ ಸ್ಪರ್ಧಿಗಳಾಗಿ ಬಂದಿದ್ದೀವಿ, ಹಾಗೂ ಆ ಹಳ್ಳಿಯನ್ನ ನವೀನೀಕರಿಸಿಬಿಡತೀವಿ ಅನ್ನೋಭಯ! ನಾವೆಷ್ಟೇ ಹೇಳಿದರೂ ನಂಬಿಕೆ ಇಲ್ಲ! ಕಡೆಗೂ ನಾವು ಚುನಾವಣೆಗೆ ಎರಡು ದಿನ ಮುಂಚಿತವಾಗಿ ಹೊರಟಾಗ ಅವ್ರಮುಖದಲ್ಲಿ ಸಂತೋಷವೇ ಸಂತೋಷ..

ಇನ್ನು ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆ ಸಖತ್ಮನೋರಂಜನೆ. ಸ್ಪರ್ಧಿ–

ಪ್ರತಿ ಸ್ಪರ್ಧಿಗಳ ಪ್ರಚಾರಬಿಡಿ ಇಲ್ಲದ ಸಲ್ಲದ ಘೋಷಣೆಗಳು. ದ್ವೇಷಾಸೂಯೆಗಳು ಮೊಳಗಿ, ಬೆಳೆದು ವಿಷವೃಕ್ಷಗಳು ಒಂದು ಕಡೆಯಾದರೆ, ಇನ್ನೂ ಒಂದು ಕಡೆ ಮರೆಯಲ್ಲಿ ಮೆರೆದ ಪ್ರೇಮಿಗಳು ಹಸೆಮಣೆ ಏರಿದಾಗ ನಾನು ಆಹ್ವಾನಿತಳಾಗಿಯೂ ಆಗಿದ್ದುದು ಈಗಲೂ ತಮಾಷೆ ಅನ್ನಿಸುತ್ತದೆ. ಅದೇ ಒಂದು ಮ್ಯಾಟ್ರಿಮೋನಿಯಲ್ಬ್ಯೂರೋ ಆಯಿತಾ! ಹೀಗೇ ಅವರವಾಗ್ಯುದ್ಧ ಮುಂದುವರಿಯಲಿ ಎಂದು ಹಾರೈಸಿ ಬಂದೆವು ಸಹೋದ್ಯೋಗಿಗಳು.

ನನ್ನ ಕಿರಿಯ ಮಗಳು ಹತ್ತನೇ ಕ್ಲಾಸಿನಲ್ಲಿದ್ದಾಗ ಅವಳ ಟೀಚ್ರ್ಸ್ ಎಲ್ಲ ಸೇರಿ ಅವಳನ್ನು ಅಧ್ಯಕ್ಷ ಪದವಿಗೆ ಸ್ಪರ್ಧಿಯಾಗಲು ಪುಸಲಾಯಿಸಿದ್ದರು. ಮಾರನೇ ದಿನ ಬೆಳಗ್ಗೆನೇ ಚುನಾವಣೆ. ಇದನ್ನು ಹೇಗಾದರೂ ತಪ್ಪಿಸಬೇಕೆಂದು ಹಿರಿಯವಳು ಎಷ್ಟು ಹೇಳಿದರೂ ಇವಳಿಗೆ ಟೀಚರ್ಸ್‌ಗಳ ಭಯ. ಕಡೆಗೆ ಅಕ್ಕ 'ಇವತ್ತು ಸ್ಕೂಲ್ಗೆ ಚಕ್ಕರ್ಹೊಡಿ. ಚುನಾವಣೆ ಅಂತೆ ಚುನಾವಣೆ! ಇವೆಲ್ಲ ಮರೆತು ಇನ್ನಾದರೂ ಸ್ವಲ್ಪಸೀರಿಯಸ್‌ಆಗಿ ಓದ್ಕೋ , ಯುಆರ್ಇನ್ಟೆಂತ್. "ಅಂದು ಅವಳನ್ನು ಕಾಯುವ ಸಲುವಾಗಿ ಇವಳೂ ಕಾಲೇಜಿಗೆ ಚಕ್ಕರ್ಹೊಡೆದು ಇಬ್ಬರೂ ಯಾವುದೊಗಬಡಾಸಿ ಹಿಂದಿ ಸಿನಿಮಾ ನೋಡಿ ಸತ್ಕಾಲಕ್ಷೇಪ ಮಾಡಿದರು!

■




**ಸ್ವಾತಂತ್ರ್ಯ ಹೊಂದಿದ ದೇಶ ಎನ್ನುವುದನ್ನು ಸಾರಲು ಪ್ರಾರಂಭವಾದದ್ದು ಆಯಾ ರಾಷ್ಟ್ರಗಳ ಧ್ವಜ. ಈಗಿನ ನಮ್ಮ ರಾಷ್ಟ್ರಧ್ವಜದ ಸ್ವರೂಪ ಅಂತಿಮವಾಗಿದ್ದು 22 ಜುಲೈ 1947 ರಂದು ಅಂದ್ರೆ ನಮಗೆ ಸ್ವಾತಂತ್ರ್ಯ ಬರುವ 20 ದಿನಗಳ ಮೊದಲು.**

# ಮನಿ ಡಬ್ಲಿಂಗ್ ಸ್ಕೀಂ

ಎಂ.ಎಸ್. ನರಸಿಂಹಮೂರ್ತಿ

ವಿಶ್ವ ಟಿ.ವಿ. ನೋಡುತ್ತಿದ್ದ. ಚುನಾವಣೆ ಅಭ್ಯರ್ಥಿಗಳ ಆಸ್ತಿ 5 ವರ್ಷದಲ್ಲಿ ನೂರಾರು ಕೋಟಿ ಹೆಚ್ಚಾಗಿದ್ದು ಹೇಗೆ ಎಂದು ಆಶ್ಚರ್ಯ ಪಡುತ್ತಿರುವಾಗ ಬಾಗಿಲು ಶಬ್ದ ಆಯಿತು. ಮನಿ ಡಬ್ಲಿಂಗ್ ಸ್ಕೀಂನ ಇಬ್ಬರು ಅಧಿಕಾರಿಗಳು ಬಂದಿದ್ರು. ಒಬ್ಬನ ಹೆಸರು ಸುರೇಶ, ಮತ್ತೊಬ್ಬ ಸತೀಶ.

ನಮಸ್ಕಾರ, ಪರಿಚಯಗಳಾದವು.

"ನಿಮ್ಮನ್ನ ಉದ್ಧಾರ ಮಾಡೋದೇ ನಮ್ಮ ಧ್ಯೇಯ" ಎಂದು ಸುರೇಶ ಹೇಳಿದ.

"ಸಾರ್, ಚುನಾವಣೆ ಸಮಯದಲ್ಲಿ ನಿಮ್ಮನ್ನ ಪಾಲಿಟಿಕ್ಸ್‌ಗೆ ಎಂಟ್ರಿ ಕೊಡಿಸ್ತೀವಿ. ನಿಮ್ಮನ್ನ ನಿಲ್ಸೋದು, ಗೆಲ್ಸೋದು ನಮ್ಮ ಗುರಿ ಸಾರ್"

"ನಾನು ಉದ್ಧಾರ ಆಗೋಕೆ ನಿಮಗೆ ಎಷ್ಟು ಹಣ ಕೊಡ್ಬೇಕು ?" ಎಂದು ವಿಶ್ವ ಕೇಳಿದ.

ಮಡದಿ ವಿಶಾಲೂ ಕುತೂಹಲದಿಂದ ಕೇಳಿಸಿಕೊಳ್ಳುತ್ತಿದ್ದಳು.

"ನೀವು 5 ಕೋಟಿ ರೂಪಾಯಿ ನಮಗೆ ಕೊಟ್ರೆ ಪ್ರತಿವರ್ಷ ನಿಮ್ಗೆ ಐವತ್ತೈವತ್ತು ಕೋಟಿ ಬರುತ್ತೆ" ಅಂದ ಸುರೇಶ.

ವಿಶ್ವನಿಗೆ ಆಶ್ಚರ್ಯ ಆಯಿತು.

"5 ಕೋಟಿ ಪ್ರತಿವರ್ಷ ಹತ್ತು ಪಟ್ಟು ಬೆಳೆಯುತ್ತಾ, ಅದು ಹ್ಯಾಗೆ ?" ಎಂದ.

"ನಿಮ್ಮನ್ನ ಚುನಾವಣೆಗೆ ನಿಲ್ಲಿಸ್ತೀವಿ, ನಿಮ್ಮನ್ನ ಗೆಲ್ಲಿಸ್ತೀವಿ. ಗೆದ್ದ ಯಾವ್ದೇ ರಾಜಕಾರಣಿ ಸುಲಭವಾಗಿ 50 ರಿಂದ 100 ಕೋಟಿ ಪ್ರತಿವರ್ಷ ಮಾಡ್ತಾನೆ" ಎಂದಾಗ ವಿಶ್ವನ ಮಡದಿ ವಿಶಾಲೂಗೆ ಖುಷಿಯಾಯಿತು.

"ಹೌದು, ಟೀವೀಲಿ ನಾನು ನೋಡ್ದೆ. ಹೋದ ಚುನಾವಣೆಗೂ, ಈ ಚುನಾವಣೆಗೂ ಆಸ್ತೀಲಿ ಏರಿಕೆ ಇದೆ. ನಾಲಕ್ಕು ಪಟ್ಟು ಆಸ್ತಿ ಜಾಸ್ತಿ ಆಗಿದೆ. ಇಷ್ಟಾಗಿ ಅವರು ಏನೂ ಉದ್ಯೋಗ ಮಾಡಿಲ್ಲ, ಭಾಷಣ ಮಾತ್ರ ಮಾಡಿದ್ದಾರೆ" ಎಂದಳು.

"ಡಿ.ಎಸ್.ವಿಶ್ವನಾಥ ನಿಮ್ಮ ಹೆಸರು ಸರಿಯಾ ?" ಎಂದು ಸತೀಶ ಕೇಳಿದ.

"ನಿಮ್ಮನ್ನ ಪಕ್ಷದ ಪರವಾಗಿ ಒಂದು ಕ್ಷೇತ್ರಕ್ಕೆ ನಿಲ್ಲಿಸ್ತೀವಿ. ಡಿ.ಎಸ್.ವಿಶ್ವನಾಥ್ ಹೆಸರಲ್ಲಿ ಇಬ್ಬರು ಮೂವರು ಡಮ್ಮಿ ಕ್ಯಾಂಡಿಡೇಟ್ಸ್‌ನ ನಿಲ್ಲಿಸಿ ಜನಕ್ಕೆ ಕನ್‌ಫ್ಯೂಸ್ ಮಾಡ್ತೀವಿ. ಆಗ ಜಾಸ್ತಿ ಓಟುಗಳು ಪಕ್ಷಕ್ಕೇ ಬರುತ್ತೆ" ಎಂದ.

ವಿಶಾಲೂಗೆ ಸ್ಕೀಂ ಚೆನ್ನಾಗಿದೆ ಅನ್ನಿಸಿತು.

"ಅಲ್ಲಪ್ಪಾ, ನಾನು ಗೆದ್ಮೇಲೆ ದುಡ್ಡು ಬರುತ್ತೆ ಅಂತ ಯಾವ ಗ್ಯಾರಂಟಿ ?" ಎಂದು ವಿಶ್ವ ಕೇಳಿದ.

"ಏನ್ಸಾರ್ ಹಿಂಗಂತೀರ ? ಚುನಾವಣೆಗೆ ನಾಮಿನೇಷನ್ ಫೈಲ್ ಮಾಡೋವಾಗ ಆಸ್ತಿ ಡಿಕ್ಲೇರ್ ಮಾಡ್ತಾರಲ್ಲ, ಬಹಳಷ್ಟು ಮಂದಿ ತಮ್ಮ ಹೆಂಡತಿಯಿಂದ ನೂರಾರು ಕೋಟಿ ಸಾಲ ತಗೊಂಡಿದ್ದಾರೆ" ಎಂದಾಗ ವಿಶಾಲೂಗೆ ನಿಜವೆನ್ನಿಸಿತು.

"ಹೌದ್ರೀ, ರಾಜಕಾರಣಿಗಳ ಹೆಂಡ್ತೀರ್ಹತ್ರ ಸಿಕ್ಕಾಪಟ್ಟೆ ದುಡ್ಡಿರುತ್ತೇರಿ. ತಮ್ಮ ಗಂಡಂದಿರಿಗೆ ಕೋಟ್ಯಾಂತರ ರೂಪಾಯಿ ಸಾಲ ಕೊಟ್ಟಿದ್ದಾರ್ರೀ, ಟೀವೀಲಿ ನೋಡಿದೆ" ಎಂದಾಗ ವಿಶ್ವನಿಗೆ ತಲೆ ಕೆಡ್ತು.

"ಅಲ್ಲಮ್ಮಾ, ರಾಜಕಾರಣಿಯ ಹೆಂಡ್ತಿ ಹತ್ರ ದುಡ್ಡು ಎಲ್ಲಿಂದ ಬರುತ್ತೆ ? ಆಕೆ ಹೌಸ್ ವೈಫು ! ಗಂಡನಿಗೆ ಸಾಲ ಕೊಡೋಷ್ಟು ಆರ್ಥಿಕ ಬಲ ಅವಳಿಗೆ ಎಲ್ಲಿರುತ್ತೆ ?"

ಅದನ್ನ ಸುರೇಶ ಗುಟ್ಟಾಗಿ ವಿವರಿಸಿದ.

"ಆಸ್ತಿ ಡಿಕ್ಲರೇಷನ್‌ಗೆ ನಮ್ಮವರೇ ಆದ ಚಾರ್ಟೆರ್ಡ್ ಅಕೌಂಟೆಂಟ್ ಸಹಾಯ ಮಾಡ್ತಾರೆ"



ವಿಶಾಲೂಗೆ ಲಾಭದಾಯಕ ಸ್ಕೀಂ ಎನ್ನಿಸಿತು.

"ರೀ, ನೀವು ರಾಜಕಾರಣಿ ಆಗಿ. ಎಷ್ಟು ದಿನ ಅಂತ ಕಷ್ಟ ಪಟ್ಟು ದುಡೀತೀರ ? ದೇಶ ಸೇವೆ ಮಾಡಿ. ನಿತ್ಯ ಮನೆ ಮುಂದೆ ಜನಗಳು ಬರ್ತಾರೆ. ಎಲ್ಲರ್ನೂ ಮಾತಾಡ್ಸೋದು, ಕಾಫಿ ಕೊಟ್ಟು ಕಳ್ಸೋದು ಅಷ್ಟೇರೀ. ಸೂರ್ಯನ್ನ ಎಬ್ಬಿಸೋಕ್ಬೇಕಿಲ್ಲ, ಚಂದ್ರನ್ನ ಮುಳುಗಿಸೋಕ್ಬೇಕಿಲ್ಲ" ಎಂದಳು.

ವಿಶ್ವನಿಗೆ ಇನ್ನೂ ಅನುಮಾನವಿತ್ತು.

"ಡಮ್ಮಿ ಕ್ಯಾಂಡಿಡೇಟ್ಸ್ ಹೆಸರು ಸೇಮ್ ಇರುತ್ತೆ ಓಕೆ. ಆದರೆ ತಂದೆ ಹೆಸರು ಬೇರೆ ಇರುತ್ತಲ್ಲ ?"

"ಅಫಿಡವಿಟ್ ಕೊಟ್ಟು ಅಪ್ಪನ್ನ ಬದಲಿಸಿದರಾಯ್ತು, ಅದು ನಮಗೆ ಬಿಡಿ"

ಆದರೂ ವಿಶ್ವ ಒಪ್ಪಲಿಲ್ಲ.

"ಬೇಡ ಸಾರ್, ನಮ್ಮ ಹಿರಿಯರು ಕಷ್ಟಪಟ್ಟು ಸ್ವಾತಂತ್ರ್ಯ ತಂದ್ಕೊಟ್ಟಿದ್ದು ಈ ರೀತಿಯಾಗಿ ಮೋಸ ಮಾಡಿ ಜನರ ತಲೆ ಬೋಳಿಸೋಕಲ್ಲ. ನಮ್ಮಲ್ಲೇ ಸತ್ಯ ಇಲ್ಲ ಅಂದ್ರೆ ನಾವು ಇನ್ನೊಬ್ಬರಿಗೆ ಏನು ನ್ಯಾಯ ಕೊಡ್ತೀವಿ ? ಆಗೊಲ್ಲ, ತಾವು ಹೊರಡಿ, ಹೊರಡಿ" ಎಂದು ಕಿರುಚಾಡುತ್ತಿರುವಾಗ ವಿಶಾಲೂ ಗಂಡನನ್ನು ಬಡಿದು ಎಬ್ಬಿಸಿದಳು.

"ಎಂಟು ಗಂಟೆ ಆಯ್ತು ಏಳ್ರೀ, ಕಾಫಿ ತಗೊಳ್ಳಿ" ಎಂದಳು.

ಇದು ಕನಸಾ ಎಂದು ವಿಶ್ವ ನಕ್ಕ.

* * *

■

# ಸವಾಲು

ಎಸ್ ಎನ್ ಗಣನಾಥ

ಅದೊಂದು ಚುನಾವಣಾಪರ್ವ. ಅಭ್ಯರ್ಥಿಗಳ ನಡುವೆ ಪರಸ್ಪರ ಆರೋಪ, ಪ್ರತ್ಯಾರೋಪ, ನಿಂದನೆ, ಹೀಯಾಳಿಕೆ ಇವೆಲ್ಲಾ ದಿನ ನಿತ್ಯವೂ ನಡೆಯುತ್ತಲೇ ಇದ್ದವು. ಇದೇ ಸಹಜವೇನೋ ಎಂಬಂತೆ ಆಗಿಹೋಗಿತ್ತು. ಜನರಿಗೆ ಚುನಾವಣೆಗಿಂತ ಇದೇ ಹೆಚ್ಚು ಆಕರ್ಷಣೀಯವಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ.

ಅಂಥ ಕಾಲದಲ್ಲಿ ಎರಡು ಮುಖ್ಯಪಕ್ಷಗಳ ಅಭ್ಯರ್ಥಿಗಳು ತಮ್ಮ ತಮ್ಮ ಬಿ.ಎಂ.ಡ್ಲ್ಯೂಗಳಲ್ಲಿ ಚೇಲಾಗಳನ್ನು ತುಂಬಿಕೊಂಡು ಬಂದರು. ಅಲ್ಲೊಂದು ತುಂಬ ಕಿರಿದಾದ ಸೇತುವೆ. ಆ ಎರಡು ಕಾರುಗಳೂ ಒಟ್ಟಿಗೆ ಎದುರುಬದುರಾಗಿ ಬಂದುಬಿಟ್ಟವು. ಮುಂದಕ್ಕೆ ಸಾಗಲು ಆಗುತ್ತಿಲ್ಲ. ಇಬ್ಬರು ನಾಯಕರಿಗೂ ಅಹಂ. ಅವರ ಚಾಲಕರೇನೂ ಕಡಿಮೆಯಿಲ್ಲ. ಜಪ್ಪಯ್ಯ ಎಂದರೂ ಎರಡೂ ಪಾರ್ಟಿಗಳು ಹಿಂದೆ ಸರಿಯಲು ಒಪ್ಪುತ್ತಿಲ್ಲ.

ಆ ರಾಜಕಾರಣಿಗಳ ಹೆಸರುಗಳು 'ಅ'ಮತ್ತು 'ಬ' ಎಂದಿರಲಿ. ಅವರ ಚಾಲಕರು ಒಂದು ಒಪ್ಪಂದಕ್ಕೆ ಬಂದರು. ತಮ್ಮತಮ್ಮ ನಾಯಕರ ಸಾಧನೆಗಳನ್ನು ಹೇಳುತ್ತಾ ಹೋಗುವುದು. ಅವರೆಷ್ಟು ಗ್ರೇಟ್ ಎಂದು ತೋರಿಸಿ ದಾರಿಬಿಡು ಎಂದು ಹೇಳಲು ಪ್ರಾರಂಭಿಸಿದರು.

'ಅ'ಚಾಲಕ: ನಮ್ಮಬಾಸ್ 12 ಚುನಾವಣೆಗಳಲ್ಲಿ ನಿಂತು ಪ್ರತಿ ಬಾರಿಯೂ ಗೆದ್ದಿದ್ದಾರೆ.

'ಬ'ಚಾಲಕ: ನಮ್ಮ ಬಾಸ್ ಕೂಡ 12 ಚುನಾವಣೆಗಳಲ್ಲಿ ನಿಂತು ಪ್ರತಿ ಬಾರಿಯೂ ಗೆದ್ದಿದ್ದಾರೆ.

'ಅ' ಚಾಲಕ: ನಮ್ಮ ನಾಯಕರು 4 ಸಾರಿ ಮಿನಿಸ್ಟರ್ ಆಗಿದ್ರು

'ಬ' ಚಾಲಕ: ನಮ್ಮವರೂ ಅಷ್ಟೇ. 4 ಸಾರಿಮಂತ್ರಿ ಆಗಿದ್ದರು.

'ಅ' ಚಾಲಕ: ನಮ್ಮ ನಾಯಕರು ಕಾಲೇಜಿನಲ್ಲಿದ್ದಾಗಲೇ ಯೂನಿಯನ್ ಫಂಡಿನಲ್ಲಿ 7 ಲಕ್ಷಗುಳುಂ ಮಾಡಿದ್ರು.

'ಬ'ಚಾಲಕ: ನಮ್ಮ ನಾಯಕರೂ ಅಷ್ಟೇ. ಕಾಲೇಜಿನಲ್ಲಿದ್ದಾಗಲೇ 7 ಲಕ್ಷಗುಳುಂ ಮಾಡಿಸಿಕ್ಕಾಕೊಂಡಿದ್ರು.

'ಅ' ಚಾಲಕ: ಇದನ್ನು ಕೇಳಿಸಿಕೊಳ್ಳಿ. ನಮ್ಮ ಯಜಮಾನರು ರಾಜಕೀಯಕ್ಕೆ ಬರುವ ಮೊದಲೇ ರೌಡಿ ಆಗಿದ್ರು. ಆರು ಹಾಫ್ ಮರ್ಡರ್ ಮಾಡಿದ ಅನುಭವ ಅವರದು.

'ಬ' ಚಾಲಕ: ಅದೇನು ಮಹಾ! ನಮ್ಮ ಯಜಮಾನರು ಮೂರು ಮರ್ಡರ್ ಮಾಡಿದ್ರು. ಈಗ ನನಗೇ ದಾರಿ ಬಿಡು.

'ಅ' ಚಾಲಕ: ನಮ್ಮ ಗುರುಗಳ ಮೂರು ಕಾದಂಬರಿಗಳು ಬಂದಿವೆ. ಆದರೆ ಅದನ್ನು ಬರೆದವರು ಅವರಲ್ಲ.

'ಬ' ಚಾಲಕ: ನಮ್ಮ ಗುರುಗಳೂ ಅಷ್ಟೇ. ಮೂರು ಕಾದಂಬರಿಭೂತ ಲೇಖಕರಿಂದ ಬರೆಸಿ ತಮ್ಮ ಹೆಸರು ಹಾಕಿಕೊಂಡಿದ್ದಾರೆ.

ಇದೇಕೋ ಎಲ್ಲಿಗೂ ಹೋಗುತ್ತಿಲ್ಲ ಎನಿಸತೊಡಗಿತು. ಅವರವರ ನಾಯಕರುಗಳ 'ಸಾಧನೆ'ಗಳು ತೀವ್ರವಾಗಿಯೇ ಇದ್ದವಾದರೂ ಯಾರು ದಾರಿ ಬಿಡಬೇಕೆಂದು ನಿರ್ಧರಿಸಲಾಗಲಿಲ್ಲ. ಆಗ ..

**'ಅ'** ಚಾಲಕ: ನಮ್ಮ ನಾಯಕರ ಫೇಸ್ಬುಕ್ ಖಾತೆಯಲ್ಲಿ 37 ಲಕ್ಷ ಫಾಲೋಯರ್ಸ್ ಇದ್ದಾರೆ. ಅದರಲ್ಲಿ 77% ರಷ್ಯನ್ ಬಾಟ್‌ಗಳು. ಫೇಕುಗಳು.

**'ಬ'** ಚಾಲಕ: ನಮ್ಮ ನಾಯಕರ ಫೇಸ್ಬುಕ್ ಖಾತೆಯಲ್ಲೂ 37 ಲಕ್ಷ ಫಾಲೋಯರ್ಸ್ ಇದ್ದಾರೆ. ಅದರಲ್ಲಿಯೂ 77% ರಷ್ಯನ್ ಬಾಟ್‌ಗಳಿವೆ.

**'ಅ'** ಚಾಲಕ: ಇದುಗೊತ್ತಾ? 11 ಹಗರಣಗಳಲ್ಲಿ ನಮ್ಮ ಬಾಸ್ನ ಹೆಸರಿದೆ. 26 ಕೋಟಿಗುಳುಂ ಮಾಡಿದ ಖ್ಯಾತಿ ಅವರದು. ನಿಮ್ಮ ಬಾಸ್?

**'ಬ'** ಚಾಲಕ: ಅವರ ಹೆಸರೂ 11 ಹಗರಣಗಳಲ್ಲಿ ಇದೆ. ಅವರೂ 26 ಕೋಟಿಗುಳುಂ ಮಾಡಿದ್ದಾರೆ ಅಂತ ಜನ ಮಾತಾಡಿಕೊಳ್ತಿದ್ದಾರೆ.

ಆಗಕೊನೆಯದಾಗಿ ಈ ಅಸ್ತ್ರಪ್ರಯೋಗಿಸಿದ.

**'ಅ'** ಚಾಲಕ: ನಮ್ಮ ನಾಯಕರು ನಂಬಿದವರಿಗೇ ಟೋಪಿ ಹಾಕುವುದರಲ್ಲಿ ನಿಸ್ಸೀಮರು. ಅದು ನಿಮ್ಮ ನಾಯಕರಿಗೆ ಆಗುತ್ತಾ?

**'ಬ'** ಚಾಲಕ: ಅದೇನು ದೊಡ್ಡ ವಿಷಯ! ನಮ್ಮ ನಾಯಕರು ನಂಬಿದವರಿಗೆ ಟೋಪಿಹಾಕಿಕೊಂಡೇ ಬಂದಿದ್ದಾರೆ. ಅಷ್ಟೇ ಅಲ್ಲದೆ ನಂಬದವರಿಗೂ ಟೋಪಿ ಹಾಕುತ್ತಾರೆ ಎಂದು ಫೇಮಸ್ಸು. ಈಗ ಹೇಳು, ದಾರಿಬಿಡ್ತೀಯಾ?

ಇದರಲ್ಲಿ ಸೋಲೊಪ್ಪಿಕೊಂಡ 'ಅ' ಚಾಲಕ ಹಿಂದೆ ಸರಿದ. 'ಬ' ಚಾಲಕ ಹೆಮ್ಮೆಯಿಂದ ತನ್ನಃ ಬಿ.ಎಂ.ಡ್ಲ್ಯೂ ವನ್ನು ಡ್ರೈವ್ ಮಾಡಿಕೊಂಡು ಮುಂದಕ್ಕೆ ಹೋದ.

■

